Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–10 | ಮಾರ್ಚ್ 4–10, 2024 | ಪುಟ 16 | ರೂ.10/–
Volume-18 | Issue-10 | March 4-10, 2024 | Pages:16 | Price: 10/-

ಯುವಜನರ ನೋವು ನಲಿವುಗಳಿಗೆ ದನಿಯಾದ ಸಮ್ಮೇಳನ





ಯುವಜನರ ವಿಶಾಲ ಆಂದೋಲನಕ್ಕೆ ಸಂಕಲ್ಪ



ಬಿಜೆಪಿ-ಜೆಡಿಎಸ್ ಮೈತ್ರಿಗೆ ಮುಖಭಂಗ

ಏಕ ಪಕ್ಷ ಆಡಳಿತ ಬಯಕೆ: ಪ್ರತಿಪಕ್ಷಗಳ ನಾಶಕ್ಕೆ ಷಡ್ಯಂತ್ರ

ಬಡತನ ನಿವಾರಣೆ: ಹಗುರ ಹೇಳಿಕೆಗಳು-ಪೊಳ್ಳು ಘೋಷಣೆಗಳು

“ಅಚ್ಛೇ ದಿನಗಳಿಗೆ ಕಾದ 10 ವರ್ಷಗಳಲ್ಲಿ ನಡೆದದ್ದೇನು?” ಶೀರ್ಷಿಕೆಯಡಿಯಲ್ಲಿ 3 ಪುಸ್ತಕಗಳು

“ಅಚ್ಛೇ ದಿನಗಳಿಗೆ ಕಾದ 10 ವರ್ಷಗಳಲ್ಲಿ ನಡೆದದ್ದೇನು” ಎಂಬ ಶೀರ್ಷಿಕೆಯಡಿಯಲ್ಲಿ ‘ಜನಶಕ್ತಿ ಪ್ರಕಾಶನ’ ಮೂರು ಪುಸ್ತಕಗಳನ್ನು ಹೊರತಂದಿದೆ. ಲೇಖಕರಾದ ಸಿ.ಸಿದ್ದಯ್ಯನವರು ಬರೆದಿರುವ ಈ ಪುಸ್ತಕಗಳು 2024ರ ಮಾರ್ಚ್ 4 ರಂದು ಬಿಡುಗಡೆಯಾಗಲಿವೆ.

1) ಮೋದಿ ಯೋಜನೆಗಳ ಕಾಳು ಜೊಳ್ಳು‘ಉಜ್ವಲ’ ದಿಂದ ‘ಅಗ್ನಿಪಥ್’ ವರೆಗಿನ 15 ಯೋಜನೆಗಳ ಉದ್ದೇಶ, ಸ್ವರೂಪ, ಜಾರಿಯ ನಿಜ ಚಿತ್ರ
2) ‘ನಾ ಖಾವುಂಗಾ ನಾ ಖಾನೇ ದೂಂಗಾ’ ಎಲ್ಲಿಗೆ ಬಂತು?
3) ಅದಾನಿ-ಅಂಬಾನಿಗಳಿಗೆ ಅಚ್ಛೇದಿನ್- ದೈತ್ಯ ಕಾರ್ಪೊರೇಟ್ ಗಳಿಗೆ ಮೋದಿ ಸರಕಾರದ 10 ವರ್ಷಗಳ ಸೇವೆಯ ರೆಕಾರ್ಡ್

ಈ ಮೂರೂ ಪುಸ್ತಕಗಳು ನರೇಂದ್ರ ಮೋದಿಯವರ 10 ವರ್ಷಗಳ ಆಡಳಿತದಲ್ಲಿನ ವೈಫಲ್ಯಗಳು, ದುರಾಡಳಿತ, ಭ್ರಷ್ಟಾಚಾರ, ಯೋಜನೆಗಳ ನಿಜ ರೂಪ ಮುಂತಾದವುಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಿವೆ.

ಭಾಗ-1 ಪುಸ್ತಕದಲ್ಲಿ: ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಕೇಂದ್ರದಲ್ಲಿ 10 ವರ್ಷಗಳ ಕಾಲ ಆಡಳಿತ ನಡೆಸಿದೆ. ಈ ಅವಧಿಯಲ್ಲಿ ತಾವು ಬಹಳಷ್ಟು ಸಾಧನೆಗಳನ್ನು ಮಾಡಿದ್ದೇವೆ ಎನ್ನುತ್ತಾ ಹಲವು ಯೋಜನೆಗಳನ್ನು ಹೆಸರಿಸಿ ಜಾಹಿರಾತುಗಳ ಮೂಲಕ, ಸುದ್ದಿಮಾಧ್ಯಮಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ, ಸಭೆ ಸಮಾರಂಭಗಳಲ್ಲಿ ಮತ್ತು ನೇರವಾಗಿ ಜನರ ಬಳಿ ಹೇಳಿಕೊಳ್ಳತೊಡಗಿದ್ದಾರೆ. ಇವರು ಹೇಳುತ್ತಿರುವುದು ನಿಜವೇ? ಇವರು ಹೇಳುತ್ತಿರುವ ಯೋಜನೆಗಳು, ಕಲ್ಯಾಣ ಕಾರ್ಯಕ್ರಮಗಳು ಜನರಿಗಾಗಿ ರೂಪಿಸಲ್ಪಟ್ಟವುಗಳೇ? ಅಥವಾ ನವಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ (LPG) ನೀತಿಗಳನ್ನು ಜಾರಿಗೆ ತರುವ ಹಿನ್ನಲೆಯಲ್ಲಿ ಈ ಯೋಜನೆಗಳ ಮೇಲೆ “ಜನಪರವಾದ ಯೋಜನೆಗಳು” ಎಂಬ ಮುಸುಕನ್ನು ಹೊದಿಸಿ ಮುಕ್ತ ಆರ್ಥಿಕ ನೀತಿಗಳ ಜಾರಿಯ ಭಾಗವಾಗಿ ತಂದವುಗಳೇ? ಈ ಪ್ರಶ್ನೆಗಳಿಗೆ ಈ ಪುಸ್ತಕದಲ್ಲಿರುವ ಲೇಖನಗಳಲ್ಲಿ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಇಲ್ಲಿನ ಬಹಳಷ್ಟು ಯೋಜನೆಗಳನ್ನು ಹಳೆಯ ಯೋಜನೆಗಳನ್ನು ನಾಶಮಾಡಿ ಹೊಸ ಹೆಸರುಗಳನ್ನಿಟ್ಟು ರೂಪಿಸಲಾಗಿದೆ ಅಥವಾ ಹಳೆಯ ಯೋಜನೆಗಳಿಗೆ ಹೊಸ ಹೊಸ ಹೆಸರುಗಳನ್ನು ಇಡಲಾಗಿದೆ. ಬಡವರಿಗಾಗಿ ಎಂದು ಹೇಳುವ ಬಹಳಷ್ಟು ಯೋಜನೆಗಳಿಗೆ ಒಕ್ಕೂಟ ಸರ್ಕಾರದ ಅನುದಾನ ಶೂನ್ಯ. ಕೆಲವು ಯೋಜನೆಗಳಿಗೆ ಸರ್ಕಾರ ನೀಡಿರುವ ಅನುದಾನಗಳನ್ನು ಹಲವುಪಟ್ಟು ಹಿಗ್ಗಿಸಿ ಪ್ರಚಾರ ಮಾಡತೊಡಗಿದ್ದಾರೆ. ಕೆಲವು ಯೋಜನೆಗಳಿಗೆ ಹಿಂದೆ ಕೊಡುತ್ತಿದ್ದ ಅನುದಾನದಲ್ಲೇ ಕಡಿತಮಾಡಲಾಗಿದೆ. ಬಡ ಮಹಿಳೆಯರ ಕಣ್ಣೀರು ಒರೆಸಲು ಜಾರಿಗೆ ತರಲಾಗಿದೆ ಎಂದು ಹೇಳಿ, ನಂತರ ಎಲ್ಲರಿಂದಲೂ ಅಡುಗೆ ಅನಿಲದ ಮೇಲಿನ ಸಬ್ಸಿಡಿ ಹಿಂಪಡೆದ ಉಜ್ವಲ ಯೋಜನೆ ಮೋದಿ ಸರ್ಕಾರದ ಗುರಿ ಏನು ಎಂಬುದಕ್ಕೆ ಒಂದು ಉತ್ತಮ ಉದಾಹರಣೆ.

ಈ ಹಿನ್ನೆಲೆಯಲ್ಲಿ ಮೋದಿ ಸರ್ಕಾರ, ಬಿಜೆಪಿ ಮತ್ತು ಸಂಘಪರಿವಾರದವರು ಜನಪರ ಎಂದು ಹೇಳಿಕೊಳ್ಳುತ್ತಿರುವ 15 ಯೋಜನೆಗಳ ಮೇಲೆ ಹೊದಿಸಿರುವ ಮುಸುಕನ್ನು ಸರಿಸಿ ಸತ್ಯವನ್ನು ತೋರಿಸುವ ಪ್ರಯತ್ನವನ್ನು ಈ ಲೇಖನಗಳ ಮೂಲಕ ಮಾಡಲಾಗಿದೆ.

1. ಜನ್ ಧನ್ : ಹಾಲು ಕರೆಯಲು ಪಾತ್ರೆ ಬಂತು, ಹಾಲು ಕೊಡುವ ಹಸುವೇ ಇಲ್ಲ
2. ಉಜ್ವಲ : ಮಹಿಳೆಯರ ಕಣ್ಣೀರು ನಿಂತಿಲ್ಲ
3. ಆವಾಸ್ ಯೋಜನೆ :ಉಚಿತ ಮನೆಯಲ್ಲ, ಷರತ್ತುಬದ್ಧ ಸಬ್ಸಿಡಿ ಮಾತ್ರ
4. ಹೊಸ ಪಿಂಚಣಿ ಯೋಜನೆ : ನ್ಯೂ ಅಲ್ಲ, ನೋ ಪೆನ್ಶನ್ ಯೋಜನೆ
5. ಸುಕನ್ಯಾ ಸಮೃದ್ಧಿ: ನನ್ನ ಯೋಜನೆ, ನಿನ್ನ ಕನ್ಯಾ, ನಿನ್ನ ಹಣ, ನಿನ್ನ ಜವಾಬ್ದಾರಿ
6. ಅಟಲ್ ಪಿಂಚಣಿ : ಅಸಂಘಟಿತ ಕಾರ್ಮಿಕರಿಗೂ ‘ನೋಪೆನ್ಶನ್ ಯೋಜನೆ’!
7. ಶ್ರಮ ಯೋಗಿ ಮಾನ್-ಧನ್ : ನಮ್ಮ ಮಾನ್, ಅರ್ಧ ಧನ್ ನಿಮ್ಮದು, ಇನ್ನರ್ಧ ನಮ್ಮದು
8. ಕೌಶಲ ವಿಕಾಸ್ : ‘ಕೌಶಲ್’ ಕೊಟ್ಟಿದ್ದೇವೆ, ಉದ್ಯೋಗ ನೀವೇ ಹುಡುಕಬೇಕು
9. ನೀನು ವಿಶ್ವಕರ್ಮ ! ಹೊಸ ಹೆಸರಲ್ಲಿ ಸಾಲ ಬಿಟ್ಟು ಇನ್ನೇನು ಕೊಡಲಿ?
10. ಇ-ಶ್ರಮ್ - ದೊಡ್ಡ ಭರವಸೆ, ನಿಜವಾಗಲಿಲ್ಲ, ನಿಜವೂ ಅಲ್ಲ
11. ಜನ್ ಔಷಧಿ : 72 ಕೋಟಿ ಅನುದಾನಕ್ಕೆ 5,300 ಕೋಟಿ ರೂ. ಲಾಭದ ಮ್ಯಾಜಿಕ್
12. ಅಗ್ನಿಪಥ್ : ಅಗ್ಗದ ಅಲ್ಪಕಾಲಿಕ ವೀರ ಸೇವೆಯ ನಂತರ ಅಗ್ನಿಪಾಲು
13. ಗರೀಬ್ ಕಲ್ಯಾಣ್ ಅನ್ನ : ಬಡತನ ಕಡಿಮೆಯಾಗಿದ್ದರೆ 80 ಕೋಟಿ ಜನರಿಗೆ ಉಚಿತ ಪಡಿತರವೇಕೆ?
14. ಮುದ್ರಾ : ಕಿರು ಹಣಕಾಸು ಸಂಸ್ಥೆಗಳಿಂದ ಕಿರುಸಾಲ, ಸರಕಾರದ ಪಾಲು ಸೊನ್ನೆ
15. ಆಯುಷ್ಮಾನ್ ಭಾರತ್ : ಸಾರ್ವಜನಿಕ ಆರೋಗ್ಯ ಸೇವೆ ಕಡಿತ, ಖಾಸಗಿ ಆರೋಗ್ಯ ಸೇವೆಗೆ ವಿಮೆ ಮೂಲಕ ಸಬ್ಸಿಡಿ

ಭಾಗ-2 ಪುಸ್ತಕದಲ್ಲಿ; ಮೋದಿ ಆಡಳಿತದ 10 ವರ್ಷಗಳ ಹಗರಣಗಳ, ದುರಂತಗಳ ಒಂದಷ್ಟು ಲೆಕ್ಕಪತ್ರ ಇದೆ. ‘ನಾ ಖಾವುಂಗಾ ನಾ ಖಾನೇ ದೂಂಗಾ’ (ನಾನು ತಿನ್ನುವುದಿಲ್ಲ ನಾನು ತಿನ್ನಲು ಬಿಡುವುದಿಲ್ಲ)’ ಇದು 10 ವರ್ಷಗಳ ಹಿಂದೆ ನರೇಂದ್ರ ಮೋದಿಯವರು ಭ್ರಷ್ಟಾಚಾರದ ಕುರಿತು ಜನರಿಗೆ ನೀಡಿದ ಭರವಸೆ. ಹಿಂದಿನ ಆಡಳಿತದ ಭ್ರಷ್ಟಾಚಾರದ ವಿರುದ್ದದ ಜನರ ಆಕ್ರೋಶವನ್ನು ಬಂಡವಾಳ ಮಾಡಿಕೊಂಡು, ಭ್ರಷ್ಟಾಚಾರ ವಿರೋಧಿ ಆಂದೋಲನಗಳಿಗೆ ಪ್ರತ್ಯಕ್ಷವಾಗಿ ಮತ್ತು ಕೆಲವೊಮ್ಮೆ ತೆರೆಮರೆಯಲ್ಲಿ ನೇತೃತ್ವ ನೀಡಿದ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿದು ನರೇಂದ್ರ ಮೋದಿ ಪ್ರಧಾನಿಯಾದರು. ತಾನು ಅಧಿಕಾರಕ್ಕೆ ಬಂದರೆ, ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ, ಬಹುಕೋಟಿ ಮೌಲ್ಯದ 2ಜಿ ಮತ್ತು ಕಲ್ಲಿದ್ದಲು ಹಗರಣ ಸೇರಿದಂತೆ ಎಲ್ಲಾ ರೀತಿಯ ಹಗರಣಗಳಲ್ಲಿ ಭಾಗಿಯಾದವರನ್ನು ಜೈಲಿನ ಕಂಬಿ ಎಣಿಸುವಂತೆ ಮಾಡುತ್ತೇವೆ, ಎಂದೆಲ್ಲಾ ಜನರನ್ನು ನಂಬಿಸಿ, 2014ರ ಚುನಾವಣೆಯಲ್ಲಿ ಬಿಜೆಪಿ ಶೇ. 31ರಷ್ಟು ಮತಗಳನ್ನು ಪಡೆದು ಅಧಿಕಾರಕ್ಕೆ ಬಂತು.

ಅಧಿಕಾರಕ್ಕೆ ಬಂದ ನಂತರ, ಈ ಮೊದಲು ತಾವೇ ಆರೋಪ ಹೊರಿಸಿದ್ದ ದೊಡ್ಡ ಹಗರಣಗಳಾದ 2ಜಿ ಹಗರಣ, ಕಲ್ಲಿದ್ದಲು ಹಗರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆ ಕೊಡುವುದಿರಲಿ, ಭ್ರಷ್ಟಾಚಾರಿಗಳಿಗೆ ಪರಿಶುದ್ಧರು ಎಂದು ಬಿರುದು ಕೊಟ್ಟ ಉದಾಹರಣೆಗಳೇ ಹೆಚ್ಚು. ಸಾಲದೆಂಬಂತೆ ಹಿಂದೆಂದಿಗಿಂತಲೂ ಭ್ರಷ್ಟಾಚಾರಗಳು, ಹಗರಣಗಳು ಮೋದಿ ಆಡಳಿತದಲ್ಲಿ ನಡೆದಿವೆ. ಇವುಗಳಲ್ಲಿ ಹಲವು ಬಿಜೆಪಿ ನಾಯಕರು ಭಾಗಿಯಾಗಿದ್ದಾರೆ. ಬಿಜೆಪಿಯೇತರ ರಾಜಕೀಯ ಪಕ್ಷಗಳ ನಾಯಕರನ್ನು ತಮ್ಮ ಪಕ್ಷಕ್ಕೆ ಸೇರಿಸಿಕೊಂಡು ಅವರನ್ನು ಕಾನೂನಿನ ಕುಣಿಕೆಯಿಂದ ರಕ್ಷಿಸುತ್ತಿರುವ ಸಾಕಷ್ಟು ಉದಾಹರಣೆಗಳಿವೆ. ತಮ್ಮವರನ್ನು ರಕ್ಷಿಸಲು ಸಾಕ್ಷಿಗಳನ್ನು ಇಲ್ಲದಂತೆ ಮಾಡಿದ, ನ್ಯಾಯಾಂಗವನ್ನೇ ತಮ್ಮ ಅನುಕೂಲಕ್ಕೆ ಬಳಸಿಕೊಂಡ ಉದಾಹರಣೆಗಳೂ ಇವೆ. ಹಾಗಾದರೆ, 10 ವರ್ಷಗಳ ಹಿಂದಿನ ಬಿಜೆಪಿಯವರ ಭ್ರಷ್ಟಾಚಾರ ವಿರೋಧಿ ಆಂದೋಲನ ಎಂಬುದು, ದೊಡ್ಡಬಂಡವಾಳಗಾರರು ಮತ್ತು ಹಿಂದುತ್ವವಾದಿಗಳ ಕೂಟ ಭಾರತೀಯರನ್ನು ವಂಚಿಸಲು ಹೂಡಿದ ಒಂದು ತಂತ್ರವೇ?

ನರೇಂದ್ರ ಮೋದಿ ಆಡಳಿತದಲ್ಲಿ ಭ್ರಷ್ಟಾಚಾರಗಳೇ ನಡೆದಿಲ್ಲ ಎನ್ನುವಂತೆ ಬಿಜೆಪಿ ನಾಯಕರು ಪ್ರಚಾರ ಮಾಡತೊಡಗಿದ್ದಾರೆ. ಇದು ಎಷ್ಟು ನಿಜ ಎಂದು ಹುಡುಕುತ್ತಾ ಹೋದರೆ ಬಿಜೆಪಿ ನಾಯಕರೇ ಒಳಗೊಂಡಿರುವ ನೂರಾರು ಭ್ರಷ್ಟಾಚಾರ ಪ್ರಕರಣಗಳು ಕಣ್ಣಿಗೆ ಬೀಳುತ್ತವೆ. ಇವುಗಳಲ್ಲಿ ಕೆಲವನ್ನು ಈ ಪುಸ್ತಕದಲ್ಲಿ ಕೊಡುವ ಪ್ರಯತ್ನ ಮಾಡಲಾಗಿದೆ.

ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರ ಅಧಿಕಾರಕ್ಕೆ ಬಂದು ನರೇಂದ್ರ ಮೋದಿಯವರು ಪ್ರಧಾನ ಮಂತ್ರಿ ಆದ ನಂತರ ಭಾರತ ಹಲವು ದುರಂತಗಳನ್ನು ಎದುರಿಸಿದೆ. ಕೆಲವು ಪ್ರಾಕೃತಿಕ ದುರಂತಗಳಾದರೆ, ಮತ್ತೆ ಕೆಲವು ಸರ್ಕಾರವೇ ಸೃಷ್ಟಿಸಿದ ದುರಂತಗಳಾಗಿವೆ. ಪ್ರಾಕೃತಿಕ ದುರಂತಗಳನ್ನು ಸರ್ಕಾರ ಎದುರಿಸಿದ ರೀತಿ ತೀರಾ ಕಳಪೆಯಾಗಿದೆ. ಇಂತಹ ದುರಂತಗಳಿಂದಾಗಿ ಬಹಳಷ್ಟು ಜನರ ಪ್ರಾಣ, ಆಸ್ತಿಪಾಸ್ತಿಗಳಿಗೆ ನಷ್ಟವಾಗಿದೆ.

ಪುಟ 04 ಕ್ಕೆ

ಜನವಿರೋಧಿ ಸಾಂಸ್ಕೃತಿಕ ತಾಂಡವವನ್ನು ಸೋಲಿಸಬೇಕಿದೆ-ಡಾ. ಜಿ.ರಾಮಕೃಷ್ಣ

ಜನವಿರೋಧಿ ಸಾಂಸ್ಕೃತಿಕ ತಾಂಡವವನ್ನು ನಾವು ಎದುರಿಸುತ್ತಿದ್ದೇವೆ, ಅದನ್ನು ಸೋಲಿಸಬೇಕಿದೆ ಅದಕ್ಕಾಗಿ ಹೋರಾಟ ನಡೆಸಬೇಕಿದೆ ಎಂದು ಹಿರಿಯ ಚಿಂತಕ ಡಾ. ಜಿ.ರಾಮಕೃಷ್ಣ ಕರೆ ನೀಡಿದರು.



ಜನಶಕ್ತಿ ಪ್ರಕಾಶನದ ಹೊರ ತಂದಿರುವ ಲೇಖಕ ಸಿ.ಸಿದ್ದಯ್ಯರವರ ಮೂರು ಪುಸ್ತಕಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಬಿಜೆಪಿ ಆರ್ಥಿಕ ನೀತಿಯನ್ನು ಜನರಿಗೆ ಅರ್ಥ ಮಾಡಿಸಬೇಕಿದೆ. ಸಾರ್ವಜನಿಕ ವ್ಯವಸ್ಥೆಯನ್ನು ಕ್ಷೀಣಿಸಿ, ಖಾಸಗಿ ಕ್ಷೇತ್ರವನ್ನು ಬಲಪಡಿಸಬೇಕು ಎಂಬುದು ಬಿಜೆಪಿಯ ಆರ್ಥಿಕ ನೀತಿಯಾಗಿದೆ. ಬಿಜೆಪಿಯ ಈ ಅಪಾಯಕಾರಿ ನೀತಿಯನ್ನು ಮನೆ ಮನೆಗೆ ಕೊಂಡಯ್ಯಬೇಕಿದೆ ಎಂದರು.

ಕಾವ್ಯಪುರುಷರಾಮನನ್ನುದೇವರನ್ನಾಗಿಸಿದ್ದಾರೆ. ನಾನು ಕಾವ್ಯ ಬರೆಯುತ್ತಿರುವೆ ಎಂದು ವಾಲ್ಮೀಕಿ ಹೇಳಿದರೂ, ಅವರು ಅದನ್ನು ತಿರುಚಿ ಪುರಾಣ ಪುರುಷನನ್ನಾಗಿಸಿದ್ದಾರೆ. ಇದಕ್ಕಿಂತ ದೊಡ್ಡ ಕಿತಾಪತಿ ಕೆಲಸ ಇನ್ನೊಂದಿಲ್ಲ. ರಾಮ ದೇವರಲ್ಲ ಎಂದರೆ ಜೈಲಿಗಟ್ಟುತ್ತಾರೆ. ಸರ್ಕಾರದ ನೀತಿಗಳನ್ನು ಪ್ರಶ್ನಿಸಿದರೆ ದೇಶದ್ರೋಹಿ ಅಂತಾರೆ, ಇಡಿ ದಾಳಿ ಮಾಡಿಸುತ್ತಾರೆ ನಮ್ಮ ಜೀವನ ದುರ್ಭರ ಮಾಡುವ ಗುರಿಯನ್ನು ಬಿಜೆಪಿ ಎಂದಿದೆ. ಇದರ ವಿರುದ್ಧ ಚಳುವಳಿ ಬಲಗೊಳ್ಳಬೇಕಿದೆ ಎಂದರು.

ಈ ಮೂರು ಕೃತಿಗಳು 10 ವರ್ಷದಲ್ಲಿ ಬಿಜೆಪಿ ಹಾಗೂ ಪ್ರಧಾನಿ ಮೋದಿ ಜನರಿಗೆ ತಂದಿಟ್ಟ ಸಂಕಷ್ಟಗಳನ್ನು ಲೇಖಕರು ಎಳೆ ಎಳೆಯಾಗಿ ವಿವರಿಸಿದ್ದಾರೆ. ಬಡಜನರನ್ನು ಕಷ್ಟಕ್ಕೆ ದೂಡಿ, ಅಂಬಾನಿ, ಆದಾನಿ ಪರವಾದ ನೀತಿಗಳನ್ನು ಹೇಗೆ ತಂದಿದ್ದಾರೆ ಎಂಬುದನ್ನು ವಿವರಿಸಿದ್ದಾರೆ, ಹಾಗಾಗಿ ಈ ಮೂರು ಕೃತಿಗಳು ಜನಕ್ಕೆ ಮುಟ್ಟಿಸಬೇಕು. ಇದನ್ನು ಜನರು ಸ್ವಿಕರಿಸುವಂತೆ ಮಾಡಬೇಕು ಎಂದರು.

ಬಿಡುಗಡೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಶಕ್ತಿ ವಾರಪತ್ರಿಕೆ ಸಂಪಾದಕ ಡಾ. ಕೆ. ಪ್ರಕಾಶ್ ವಹಿಸಿದ್ದರು. ವೇದಿಕೆಯ ಮೇಲೆ ಲೇಖಕ ಸಿದ್ದಯ್ಯ, ಚಿಂತಕರಾದ ಕೆ.ನೀಲಾ, ಗೋಪಾಲಕೃಷ್ಣ ಅರಳಹಳ್ಳಿ, ಸೈಯ್ಯದ್ ಮುಜೀಬ್, ಯಾದವ ಶೆಟ್ಟಿ, ಎಸ್. ವೈ ಗುರುಶಾಂತ್ ಇದ್ದರು.

ಮೂರು ಕೃತಿಗಳು ಯಾವವು:

“ಅಚ್ಛೇ ದಿನಗಳಿಗೆ ಕಾದ 10 ವರ್ಷಗಳಲ್ಲಿ ನಡೆದದ್ದೇನು” ಎಂಬ ಶೀರ್ಷಿಕೆಯಡಿಯಲ್ಲಿ ‘ಜನಶಕ್ತಿ ಪ್ರಕಾಶನ’ ಮೂರು ಪುಸ್ತಕಗಳನ್ನು ಹೊರತಂದಿದೆ. ಲೇಖಕರಾದ ಸಿ.ಸಿದ್ದಯ್ಯನವರು ಬರೆದಿರುವ ಮೂರು ಪುಸ್ತಕಗಳು ಈ ಕೆಳಗಿನಂತಿವೆ.

1) ಮೋದಿ ಯೋಜನೆಗಳ ಕಾಳು ಜೊಳ್ಳು‘ಉಜ್ವಲ’ ದಿಂದ ‘ಅಗ್ನಿಪಥ್’ ವರೆಗಿನ 15 ಯೋಜನೆಗಳ ಉದ್ದೇಶ, ಸ್ವರೂಪ, ಜಾರಿಯ ನಿಜ ಚಿತ್ರ
2) ‘ನಾ ಖಾವುಂಗಾ ನಾ ಖಾನೇ ದೂಂಗಾ’ ಎಲ್ಲಿಗೆ ಬಂತು?
3) ಅದಾನಿ-ಅಂಬಾನಿಗಳಿಗೆ ಅಚ್ಛೇದಿನ್-ದೈತ್ಯ ಕಾರ್ಪೊರೇಟ್ ಗಳಿಗೆ ಮೋದಿ ಸರಕಾರದ 10 ವರ್ಷಗಳ ಸೇವೆಯ ರೆಕಾರ್ಡ್.

ಈ ಮೂರು ಪುಸ್ತಕಗಳು ಮಹಾಲಕ್ಷ್ಮಿ ಲೇಔಟ್ ನ ಇಎಂಎಸ್ ಭವನದಲ್ಲಿ ಮಾರಾಟಕ್ಕೆ ಲಭ್ಯ ಇವೆ.

ಸಂಪಾದಕೀಯ

ನ್ಯಾಯಯುತ ಹಕ್ಕು ಪ್ರತಿಪಾದಿಸಿದ ಸದನ

ತೆರಿಗೆ ಪಾಲಿನ ಸಮಾನ ಹಂಚಿಕೆ ಮತ್ತು ರೈತರ ಫಸಲಿಗೆ ಬೆಂಬಲಿತ ಬೆಲೆ (ಎಂ.ಎಸ್.ಪಿ.) ಯನ್ನು ನಿಗದಿ ಮಾಡಬೇಕೆಂದು ಭಾರತ ಒಕ್ಕೂಟ ಸರ್ಕಾರವನ್ನು ಆಗ್ರಹಿಸಿದ ಎರಡು ನಿರ್ಣಯಗಳನ್ನು ಕರ್ನಾಟಕದ ವಿಧಾನಸಭೆ ಅಂಗೀಕರಿಸಿರುವುದು ಅತ್ಯಂತ ಮಹತ್ವದ್ದಾಗಿದೆ. ರಾಜ್ಯಗಳ ಪಾಲಿಗೆ ಸಿಗಬೇಕಾದ ನ್ಯಾಯಯುತ ತೆರಿಗೆಯ ಪಾಲು ಮತ್ತು ಅನುದಾನ ದೊರೆಯಲೇಬೇಕೆಂದು ಕೇಂದ್ರದ ಸರ್ಕಾರದ ಎದುರು ಸಂಘರ್ಷಕ್ಕೆ ಇಳಿದಿದ್ದ ಕರ್ನಾಟಕ ರಾಜ್ಯ ಸರ್ಕಾರ ವಿಧಾನಸಭೆಯಲ್ಲಿ ಅಂತಹ ಒಂದು ನಿರ್ಣಯ ಅಂಗೀಕರಿಸಿರುವುದು ಆ ಹೋರಾಟವನ್ನು ಮತ್ತಷ್ಟು ಮುಂದಕ್ಕೆ ಒಯ್ದಂತಾಗಿದೆ. ಕೇರಳ, ತಮಿಳುನಾಡು ಸರ್ಕಾರಗಳು ತೆರಿಗೆ ಪಾಲಿನ ವಿಷಯದಲ್ಲಿ ಹಾಗೂ ರಾಜ್ಯಗಳ ಸಂವಿಧಾನಾತ್ಮಕ ಹಕ್ಕುಗಳ ವಿಷಯದಲ್ಲಿ ಮುಂಚೂಣಿಯಲ್ಲಿ ನಿಂತು ಹೋರಾಡುತ್ತಿವೆ. ಈಗಾಗಲೇ ಕೇರಳ ಎಡ ಪ್ರಜಾಸತ್ತಾತ್ಮಕ ರಂಗದ ಸರ್ಕಾರ ಈ ಬಗ್ಗೆ ವಿಧಾನ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದೆ. ಮತ್ತು ತಮಿಳುನಾಡು ಸರ್ಕಾರ ಸಂಪ್ರದಾಯದಂತೆ ರಾಜ್ಯಪಾಲರು ತಮಿಳುನಾಡಿನ ವಿಧಾನ ಸಭೆಯ ಆರಂಭದಲ್ಲಿ ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡದೇ ನಿರಾಕರಿಸದ್ದನ್ನು ತೀವ್ರವಾಗಿ ಪ್ರತಿಭಟಿಸಿದೆ. ಲಿಖಿತ ಭಾಷಣವನ್ನು ಓದುವ ಮೂಲಕ ಹಕ್ಕು ಪ್ರತಿಪಾದಿಸಿದೆ. ಅಲ್ಲದೇ 'ಒಂದು ರಾಷ್ಟ ಒಂದು ಚುನಾವಣೆ' ಯ ಪ್ರಸ್ತಾಪಕ್ಕೆ ತೀವ್ರ ಆಕ್ಷೇಪಿಸಿ ಅದನ್ನು ಜಾರಿಗೊಳಿಸಬಾರದು ಎಂದು ವಿಧಾನ ಸಭೆಯಲ್ಲಿ ನಿರ್ಣಯವೊಂದನ್ನು ತಮಿಳುನಾಡು ಸದನ ಅಂಗೀಕರಿಸಿದೆ.

ಅಂದರೆ ಒಕ್ಕೂಟ ಸರ್ಕಾರದ ಸರ್ವಾಧಿಕಾರಿ ಧೋರಣೆಗಳನ್ನು ಬಹಿರಂಗವಾಗಿ ಟೀಕಿಸುವ, ಒಕ್ಕೂಟದ, ಪ್ರಜಾಸತ್ತಾತ್ಮಕ ಹಕ್ಕುಗಳಂತಹ ಸಂವಿಧಾನದ ಮೂಲ ಅಂಶಗಳನ್ನು ದುರ್ಬಲಗೊಳಿಸಿ, ಕೇಂದ್ರವೇ ಸರ್ವ ಶಕ್ತ ಎಂದು ವರ್ತಿಸುವುದಕ್ಕೆ ಕಡಿವಾಣ ಹಾಕಿ ರಾಜ್ಯಗಳ ಹಕ್ಕುಗಳನ್ನು ಸಮರ್ಥಿಸಿಕೊಳ್ಳುತ್ತಿರುವುದು ತಪ್ಪೇನಲ್ಲ. 'ಇದು ಸರಿಯಾದ ಸಂಪ್ರದಾಯ ಅಲ್ಲ' ಎಂದು ಟೀಕಿಸುವ ಬಿ.ಜೆ.ಪಿ. ಪಕ್ಷ ಒಕ್ಕೂಟ ವ್ಯವಸ್ಥೆಯ ಸತ್ಸಂಪ್ರದಾಯ, ನೀತಿ ನಿಯಮಗಳನ್ನು ಪಾಲಿಸಲು, ರಾಜ್ಯಗಳ ಹಕ್ಕುಗಳನ್ನು ಸಮರ್ಥಿಸಲು ಯಾಕೆ ಒತ್ತು ನೀಡುತ್ತಿಲ್ಲ? ತನ್ನದೇ ಒಕ್ಕೂಟದ ಸರ್ಕಾರದ ಮೇಲೆ ಯಾಕೆ ಒತ್ತಡ ಹಾಕುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸುತ್ತದೆ. ರಾಜ್ಯದ ಜನತೆಯಿಂದ ಚುನಾಯಿತರಾದ ಬಿಜೆಪಿಯ ಶಾಸಕರ ಮೇಲೆ ರಾಜ್ಯಗಳ ನ್ಯಾಯ ಸಮ್ಮತ ಹಕ್ಕು, ಕೇಳಿಕೆಗಳಿಗೆ ಬದ್ಧವಾಗಿರಬೇಕಾದ ಕರ್ತವ್ಯವೂ ಇದೆ.

ಸದನದಲ್ಲಿ ಪೂರ್ವ ಸೂಚನೆ ನೀಡದೇ ಎರಡು ನಿರ್ಣಯಗಳನ್ನು ಸರ್ಕಾರ ದಿಢೀರನೇ ಮಂಡಿಸಿದ್ದು ವಿರೋಧ ಪಕ್ಷಗಳಾದ ಬಿಜೆಪಿ– ಜೆ.ಡಿ.ಎಸ್.ಗಳಿಗೆ ಷಾಕ್ ನೀಡಿದೆ ಎನ್ನುವುದು ನಿಜವಾಗಿ ಇರಬಹುದಾದರೂ ತನ್ನ ಆಕ್ಷೇಪ, ಟೀಕೆ ಅನಿಸಿಕೆಗಳನ್ನು ಸದನದ ವೇದಿಕೆಯಲ್ಲೇ ವಿರೋಧಿಸಿ ಚರ್ಚೆಗಳನ್ನು ಹೆಚ್ಚು ಅರ್ಥಪೂರ್ಣಗೊಳಿಸ ಬಹುದಿತ್ತು. ಆದರೆ ಅದರ ಬದಲು ಸದನದ ಕಲಾಪವನ್ನೇ ಬಹಿಷ್ಕರಿಸಿ ಹೊರ ನಡೆದು ಹೊರಗೆ ಅಬ್ಬರಿಸಿದ್ದು ಪಲಾಯನವಾದವಾಗಿದೆ. ತನ್ನ ನಡೆಯೇ ಸರಿ ಎನ್ನುವ ಸದನದ, ರಾಜ್ಯದ ಹಕ್ಕುಗಳನ್ನು ವಿರೋಧಿಸುವ ಚಾಳಿ ಸಂಕುಚಿತ ರಾಜಕೀಯದ್ದಾಗಿದೆ. ಅದು ಸಮರ್ಥನೀಯವಲ್ಲ.

ಈ ಬಜೆಟ್ ಅಧಿವೇಶನದಲ್ಲಿ ರಾಜ್ಯದ ಜನತೆ ಎದುರಿಸುತ್ತಿರುವ ಬರಗಾಲ, ಕೃಷಿ–ಕೈಗಾರಿಕಾ ವಲಯದ ಬಿಕ್ಕಟ್ಟು, ಪರಿಹಾರೋಪಾಯಗಳು, ಮುಂತಾದವುಗಳ ಬಗ್ಗೆ ಎತ್ತಿ ವಿರೋಧ ಪಕ್ಷವಾದ ಬಿಜೆಪಿ ಜನರ ದನಿಯಾಗಬೇಕಿತ್ತು. ಆಡಳಿತ ಪಕ್ಷವನ್ನು ಸರಿದಾರಿಗೆ ತರಲು ಒತ್ತಡ ಹೇರಬೇಕಿತ್ತು. ಆದರೆ ಇಂತಹ ನೈಜ ಪ್ರಶ್ನೆಗಳನ್ನು ಎತ್ತದೇ ಅದರ ಬದಲು ಕೂಗಾಟ, ಆರೋಪಗಳ ಅಬ್ಬರದಲ್ಲೇ ಸದನದ ಕಲಾಪಗಳು ಮುಗಿಯುವಂತೆ ಮಾಡುವಲ್ಲಿ ವಿರೋಧ ಪಕ್ಷ ಮಗ್ನವಾಯಿತು. ಈ ಮೂಲಕ ಜನತೆಯ ಹಿತಾಸಕ್ತಿಯ ರಾಜಕಾರಣವನ್ನು ಮಾಡುವ, ಆ ಪ್ರಶ್ನೆಗಳನ್ನು ಮುನ್ನೆಲೆಗೆ ತರುವಲ್ಲಿ ತಾನು ಸಿದ್ಧವಿಲ್ಲ ಎನ್ನುವುದನ್ನು ಮತ್ತೇ ತೋರಿಸಿತು. ಈ ಅಧಿವೇಶನದಲ್ಲಿಯೂ ಬಿಜೆಪಿ ವೈಫಲ್ಯ ಎದ್ದು ಕಂಡಿತು.

41 ಕಾರ್ಮಿಕರ ಜೀವ ಉಳಿಸಿದ ವಕಿಲ್ ಹಸನ್ ಮನೆ ಕೆಡವಿದ ದ್ವೇಷಕೃತ್ಯ ಏಕೆ?–ಮೋದಿ ಸರಕಾರಕ್ಕೆ ಸಿಐಟಿಯು ಪ್ರಶ್ನೆ

ಉತ್ತರಕಾಶಿಯ ಸಿಲ್ಕ್ಯಾರ ಸುರಂಗ ಕುಸಿತದಲ್ಲಿ ಸಿಕ್ಕಿಬಿದ್ದ 41 ಕಾರ್ಮಿಕರ ಜೀವ ಉಳಿಸಿದ ತಂಡಕ್ಕೆ ನೇತೃತ್ವ ನೀಡಿದ್ದ ವಕಿಲ್ ಹಸನ್ ಮನೆಯನ್ನು ಫೆಬ್ರುವರಿ 28ರಂದು ದಿಲ್ಲಿ ಅಭಿವೃದ್ಧಿ ಪ್ರಾಧಿಕಾರ(ಡಿಡಿಎ) ಯಾವುದೇ ಪೂರ್ವಸೂಚನೆ ನೀಡದೆ ಕೆಡವಿ ಹಾಕಿರುವುದು ಅತ್ಯಂತ ಅನ್ಯಾಯದ ಕೃತ್ಯ ಎಂದು ಸಿಐಟಿಯು ಖಂಡಿಸಿದೆ. ಹಸನ್ ಮತ್ತು ಆತನ ಕುಟುಂಬ ಕಳೆದ 12 ವರ್ಷಗಳಿಂದ ಈ ಮನೆಯಲ್ಲಿ ವಾಸಿಸುತ್ತಿದ್ದರು.

ಡಿಡಿಎ ನೇರವಾಗಿ ಕೇಂದ್ರ ಸರಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಂಸ್ಥೆ ಎಂದು ಅದು ಹೇಳಿದೆ. ಇಂತಹ ಹಗೆ ಸಾಧಿಸುವ ಕೃತ್ಯ ಏಕೆ ಎಂದು ಮೋದಿ ಸರಕಾರವನ್ನು ತಾವು ಕೇಳಬಯಸುವುದಾಗಿ ಸಿಐಟಿಯು ಹೇಳಿದೆ.

ಸಿಐಟಿಯು ಮತ್ತು ಜನವಾದಿ ಮಹಿಳಾ ಸಂಗಟನೆಯ ದಿಲ್ಲಿ ಘಟಕದ ಮುಖಂಡರು ವಕಿಲ್ ಹಸನ್ ಮತ್ತು ಆತನ ಕುಟುಂಬವನ್ನು ಭೇಟಿ ಮಾಡಿ ಈ ಸರ್ವಾಧಿಕಾರಶಾಹೀ ದಾಳಿಯ ಬಗ್ಗೆ ಎಲ್ಲ ಮಾಹಿತಿ ಸಂಗ್ರಹಿಸಿ ಸಂತ್ರಸ್ತ ಕುಟುಂಬಕ್ಕೆ ಸಂಪೂರ್ಣ ಬೆಂಬಲದ ಆಶ್ವಾಸನೆ ನೀಡಿದರು.

ಈ ವಿಷಯವನ್ನು ಅತ್ಯುನ್ನತ ಮಟ್ಟದಲ್ಲಿ ಎತ್ತುವುದಾಗಿ ಹೇಳಿರುವ ಸಿಐಟಿಯು ಈ ಅನ್ಯಾಯದ ಕೃತ್ಯದ ವಿರುದ್ಧ ಡಿಡಿಎ ಮುಖ್ಯ ಕಚೇರಿಯ ಘೇರಾವೋ ನಡೆಸುವುದಾಗಿ ಹೇಳಿದೆ.




ಬಿಜೆಪಿ–ಜೆಡಿಎಸ್ ಮೈತ್ರಿಕೂಟಕ್ಕೆ ಮುಖಭಂಗ


ಈ ವಾರ

ಎಸ್.ವೈ.ಗುರುಶಾಂತ್

ಇತ್ತೀಚಿನ ಎರಡು ಚುನಾವಣೆಗಳು ಕೆಲವು ಮಹತ್ವದ ರಾಜಕೀಯ ಸಂದೇಶವನ್ನು ರವಾನಿಸಿವೆ. ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್ ಗೆ ನಡೆದ ಚುನಾವಣೆಯಲ್ಲಿ ಬಿಜೆಪಿ–ಜೆ.ಡಿ.ಎಸ್. ಗಳ ಎನ್.ಡಿ.ಎ ಅಭ್ಯರ್ಥಿ ವಕೀಲರಾದ ಎ.ಪಿ.ರಂಗನಾಥ್ ಸೋತು ಕಾಂಗ್ರೆಸ್ ನ ಅಭ್ಯರ್ಥಿ ಪುಟ್ಟಯ್ಯ ಗೆದ್ದಿದ್ದಾರೆ. ಇದೇ ಫೆಬ್ರವರಿ 28 ರಂದು ವಿಧಾನ ಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಮೂರೂ ಸ್ಥಾನಗಳನ್ನೂ ಕಾಂಗ್ರೆಸ್ ಪಡೆದಿದೆ. ಒಂದು ಸ್ಥಾನವನ್ನು ನಿರೀಕ್ಷೆಯಂತೆ ಬಿಜೆಪಿ ಪಡೆದಿದೆ. ವಿಧಾನಸಭೆಯಲ್ಲಿ ಪಕ್ಷಗಳ ಸದಸ್ಯರ ಸಂಖ್ಯಾ ಬಲವನ್ನು ಆಧರಿಸಿದರೆ ಕಾಂಗ್ರೆಸ್ ಮೂರು ಸ್ಥಾನಗಳನ್ನು, ಬಿಜೆಪಿ ಒಂದು ಸ್ಥಾನವನ್ನು ಗೆಲ್ಲುವುದು ನಿರೀಕ್ಷಿತವೇ ಆಗಿತ್ತು. ಚಲಾವಣೆಯಾದ 222 ಮತಗಳ ಪೈಕಿ ಕಾಂಗ್ರೆಸ್ ಅಭ್ಯರ್ಥಿಗಳಾದ ಅಜಯ್ ಮಕಾನ್ 47, ಡಾ.ಸೈಯದ್ ನಾಸಿರ್ ಹುಸೇನ್ 47, ಜೆಸಿ ಚಂದ್ರಶೇಖರ್ 45 ಮತಗಳನ್ನು ಪಡೆದಿದ್ದಾರೆ. ಬಿಜೆಪಿ ಅಭ್ಯರ್ಥಿ ನಾರಾಯಣಸಾ ಭಾಂಡಗೆ 47 ಮತಗಳನ್ನು ಪಡೆಯುವ ಮೂಲಕ ಗೆಲುವನ್ನು ಸಾಧಿಸಿದರು. ಆದರೆ ನಾಲ್ಕನೇ ಸ್ಥಾನಕ್ಕೆ ಪೈಪೋಟಿ ನೀಡಲು ಎನ್.ಡಿಎ ಮೈತ್ರಿಕೂಟದ ಅಭ್ಯರ್ಥಿಯಾಗಿ ಕಣಕ್ಕಿಳಿದ ಉಪೇಂದ್ರ ರೆಡ್ಡಿ ಅವರು 36 ಮತಗಳನ್ನು ಪಡೆದರು. ವಿಧಾನಸಭೆಯಲ್ಲಿ 66 ಸಂಖ್ಯಾಬಲ ಹೊಂದಿರುವ ಬಿಜೆಪಿ ತನ್ನ ಅಭ್ಯರ್ಥಿ ನಾರಾಯಣಸಾ ಬಾಂಡಗೆ ಯವರಿಗೆ 47 ಮತಗಳನ್ನು ಹಾಕಿಸಿ ಉಳಿದ 19 ಮತಗಳನ್ನು ಮೈತ್ರಿಕೂಟದ ಅಭ್ಯರ್ಥಿ ಉಪೇಂದ್ರ ರೆಡ್ಡಿ ಗೆ ಹಾಕಿಸಲು ಯೋಜಿಸಿತ್ತು . ಆದರೆ ಬಿಜೆಪಿಯ ಶಾಸಕ ಎಸ್.ಟಿ. ಸೋಮಶೇಖರ್ ಅಡ್ಡ ಮತದಾನ ಮಾಡಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಿದರು. ಇನ್ನೊಬ್ಬ ಸದಸ್ಯ ಶಿವರಾಮ್ ಹೆಬ್ಬಾರ್ ಮತದಾನಕ್ಕೆ ಬರದೇ ಗೈರು ಹಾಜರಾದರು! ಹೀಗಾಗಿ, ಬಿಜೆಪಿಯ 19 ಸ್ಥಾನಗಳ ಬದಲು ಅದರ ಬಲ 17ಕ್ಕೆ ಕುಸಿಯಿತು. ಬಿಜೆಪಿ 17 ಹೆಚ್ಚುವರಿ ಮತಗಳು ಹಾಗೂ ಜೆಡಿಎಸ್ ಪಕ್ಷದ 19 ಮತಗಳು ಸೇರಿ 36 ಮತಗಳಷ್ಟೇ ಮೈತ್ರಿಕೂಟದ ಅಭ್ಯರ್ಥಿಗೆ ಲಭ್ಯವಾದವು. ಲೆಕ್ಕಾಚಾರದಂತೆ ಎನ್.ಡಿ.ಎ. ಅಭ್ಯರ್ಥಿಗೆ 38 ಬರಬೇಕಿತ್ತು. ಪೂರ್ಣ ಮತ ಬಂದಿದ್ದರೂ ನಾಲ್ಕನೇ ಅಭ್ಯರ್ಥಿ ಎನ್‌ಡಿಎ ಗೆಲ್ಲುವ ಸಂಭವ ಇರಲಿಲ್ಲ. ಆದಾಗ್ಯೂ ಬಿಜೆಪಿ ಜೆಡಿಎಸ್ ಪಕ್ಷಗಳು ಕುಪೇಂದ್ರರೆಡ್ಡಿ ಅವರನ್ನು ನಿಲ್ಲಿಸಿದ್ದು ಯಾಕೆ? ಯಾವ ಬೆಂಬಲ ಬಲವನ್ನು ನೆಚ್ಚಿಕೊಂಡು ಈ ರೀತಿಯಲ್ಲಿ ಕಣಕ್ಕೆ ಇಳಿಸಿದರು? ಅಂದರೆ ಹೇಗಾದರೂ ಮಾಡಿ ಬೇರೆ ಪಕ್ಷಗಳಲ್ಲಿರುವ ಶಾಸಕರುಗಳನ್ನ ಅಡ್ಡ ಮತದಾನಕ್ಕೆ ಎಳೆಸಬೇಕೆಂಬ ದುರಾಲೋಚನೆ ಇತ್ತು ಎನಿಸುತ್ತದೆ. ಇಂತಹ ದುಷ್ಟ ಯೋಚನೆಯನ್ನು ಹಿಮಾಚಲ ಪ್ರದೇಶ, ಉತ್ತರ ಪ್ರದೇಶ ಮುಂತಾದ ಕಡೆಗಳಲ್ಲಿ ಬಿಜೆಪಿ ನಡೆಸಿ ಅನೈತಿಕ ರಾಜಕಾರಣವನ್ನು ಮತ್ತೆ ಅನುಸರಿಸಿದೆ. ಆದರೆ ಕರ್ನಾಟಕದಲ್ಲಿ ಅಂತಹ ಬೆಳವಣಿಗೆ ಆಗದೆ ಎನ್.ಡಿ.ಎ ಮೈತ್ರಿಕೂಟದ ಅದರಲ್ಲೂ ಬಿಜೆಪಿಯ ಇಬ್ಬರು ತಮ್ಮದೆ ರೀತಿಯಲ್ಲಿ ಬಿಜೆಪಿಗೆ ವಿರುದ್ಧವಾಗಿ ಬಂಡಾಯ ಎದ್ದಿದ್ದಾರೆ. ಇದು ಅತ್ಯಂತ ಗಮನಾರ್ಹವಾದ ಬೆಳವಣಿಗೆಯಾಗಿದೆ. ಪಕ್ಷೇತರ ಅಭ್ಯರ್ಥಿಗಳು ಸಹ ಕಾಂಗ್ರೆಸ್ಸಿಗೆ ಮತ ಹಾಕಿದ್ದಾರೆ. ಈ ಮೂಲಕವಾಗಿ ಹಣದ ಥೈಲಿಯ ಮೂಲಕ ಶಾಸಕರುಗಳನ್ನು ಖರೀದಿಸಬಹುದು ಎನ್ನುವ ಅನೈತಿಕ ಅಕ್ರಮ ರಾಜಕಾರಣ ಕರ್ನಾಟಕದಲ್ಲಿ ಯಶಸ್ವಿಯಾಗಲು ಸಾಧ್ಯವಾಗಿಲ್ಲ. ಕಾಂಗ್ರೆಸ್ ನ ಕೆಲವು ಶಾಸಕರುಗಳನ್ನು ಖರೀದಿ ಮಾಡಲು ಡಿ ಕುಪೇಂದ್ರ ರೆಡ್ಡಿ ಅವರು ಕೋಟ್ಯಾಂತರ ರೂಪಾಯಿಗಳ ಆಮಿಷವನ್ನು ಒಡ್ಡಿದ ಬಗ್ಗೆ ಶಾಸಕರುಗಳೇ ನೇರವಾಗಿ ಮಾಧ್ಯಮಗಳ ಎದುರಿನಲ್ಲಿ ಬಹಿರಂಗಪಡಿಸಿದ್ದಾರೆ. ಇದನ್ನು ಅಲ್ಲಗೆಳೆಯಲು ಬಿಜೆಪಿ ಮತ್ತು ಜೆಡಿಎಸ್ ಗಳಿಗೆ ಸಾಧ್ಯವಾಗಿಲ್ಲ ಎನ್ನುವುದು ವಸ್ತು ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಈ ಚುನಾವಣಾ ಫಲಿತಾಂಶದಿಂದ ಎರಡು ಪಕ್ಷಗಳೂ ಭಾರಿ ಮುಖಭಂಗ ಅನುಭವಿಸಿವೆ.

ಇದರ ಕೆಲವೇ ದಿನಗಳ ಹಿಂದೆ ಬೆಂಗಳೂರು ಸುತ್ತಮುತ್ತಲಿನ ಕ್ಷೇತ್ರದ ಶಿಕ್ಷಕರ ಮತಕ್ಷೇತ್ರದಿಂದಲೂ ಬಿಜೆಪಿ ಮತ್ತು ಜೆಡಿಎಸ್ ಗಳು ಒಂದಾಗಿ ಜೆಡಿಎಸ್ ನ ಎ.ಪಿ. ರಂಗನಾಥ್ ರವರನ್ನು ಕಣಕ್ಕಿಳಿಸಿದ್ದವು. ಹಿಂದಿನ ಲೆಕ್ಕಾಚಾರಗಳಂತೆ ಏನ್.ಡಿ.ಎ ಮೈತ್ರಿಕೂಟದ ಅಭ್ಯರ್ಥಿ ಭಾರಿ ಬಹುಮತದಿಂದ ಗೆಲ್ಲಬೇಕಾಗಿತ್ತು. ಆದರೆ ಹಾಗಾಗದೇ ಶಿಕ್ಷಕರ ಕ್ಷೇತ್ರದಿಂದ ಕಾಂಗ್ರೆಸ್ಸಿನ ಅಭ್ಯರ್ಥಿ ಪುಟ್ಟಯ್ಯನವರು ಗೆದ್ದಿದ್ದಾರೆ. ವಿಚಿತ್ರವೆಂದರೆ ಸಾವಿರಕ್ಕೂ ಅಧಿಕ ಮತಗಳು ಕುಲಗೆಟ್ಟಿರುವುದು. ವಿದ್ಯಾವಂತರಾದ ಶಿಕ್ಷಕರ ಮತಗಳು ಇಷ್ಟು ದೊಡ್ಡ ಪ್ರಮಾಣದಲ್ಲಿ ಕುಲಗೆಟ್ಟಿದ್ದು ಯಾಕೆ ಮತ್ತು ಆ ಮತಗಳು ನಿಜಕ್ಕೂ ಯಾವ ಪಕ್ಷಕ್ಕೆ ನಿಷ್ಠವಾಗಿದ್ದವು ಎನ್ನುವುದು ಕೂಡ ಅನುಮಾನಕ್ಕೆ ಎಡೆಮಾಡಿದೆ! ಜೆಡಿಎಸ್ಸಿನ ಜೊತೆಯಲ್ಲಿ ಮೈತ್ರಿ ಮಾಡಿಕೊಂಡಿರುವ ಬಿಜೆಪಿ, ಅದರ ಬೆಂಬಲಿಗರು ಪೂರ್ಣ ಮನಸ್ಸಿನಿಂದ ಜೆಡಿಎಸ್ಗೆ ಬೆಂಬಲಿಸಲು ಈಗಲೂ ಸಿದ್ಧವಿಲ್ಲ ಎನ್ನುವ ಸಂದೇಶ ಇದರಿಂದ ಹೊರಟಿದೆ ಎನ್ನುವ ವಿಶ್ಲೇಷಣೆಗಳು ನಡೆಯುತ್ತಿವೆ. ಬಿಜೆಪಿ ತನ್ನ ಗೆಲುವಿಗೆ ತನ್ನ ಅಧಿಕಾರದ ಗದ್ದುಗೆ ಹತ್ತಲು ಜೆಡಿಎಸ್ ಒಂದು ಮೆಟ್ಟಿಲಾಗಿರಬೇಕು ಎಂದು ಬಯಸುತ್ತದೆ ಹೊರತು ತನ್ನ ಮಿತ್ರ ಪಕ್ಷವಾಗಿರುವ ಜೆಡಿಎಸ್ ನ್ನು ಗೆಲ್ಲಿಸಲು, ಅದನ್ನು ಬಲಗೊಳಿಸಲು ಸಹಾಯಮಾಡುತ್ತದೆ ಎನ್ನುವುದು ಅಸಂಭವ ಎಂಬ ಅನಿಸಿಕೆಗಳು ಇವೆ. ಹೀಗಾಗಿ ಬಿಜೆಪಿ ಯು ಜೆಡಿಎಸ್ಸ್ ನ್ನು ಬಳಸುತ್ತಿದೆ ಹೊರತಾಗಿ ಜೆಡಿಎಸ್ಸಿಗೆ ಬಿಜೆಪಿ ನೆರವಾಗುವ ಸಂಭವಗಳು ತೀರ ಕಡಿಮೆ. ಯಾಕೆಂದರೆ ಪ್ರಾದೇಶಿಕ ಪಕ್ಷವಾಗಿರುವ ಜೆಡಿಎಸ್ ಅನ್ನು ,ಅದರ ನೆಲೆಯನ್ನು ಪೂರ್ಣವಾಗಿ ಆಪೋಷಣೆಗೊಳಿಸಿ ತಾನು ನೆಲೆಗೊಳ್ಳಬೇಕು ಎನ್ನುವ ದೂರದೃಷ್ಟಿಯ ಕಾರ್ಯಾಚರಣೆಯ ತಂತ್ರ ಇಲ್ಲಿ ಕೆಲಸ ಮಾಡುತ್ತಿದೆ ಎಂದು ಹೇಳಲಾಗುತ್ತಿದೆ. ಈ ಅಂಶಗಳನ್ನು ತಳ್ಳಿ ಹಾಕುವಂತಿಲ್ಲ. ಎರಡು ಚುನಾವಣೆಗಳಲ್ಲಿ ಬಿಜೆಪಿ ಜೆಡಿಎಸ್ ಗಳು ಮುಖಭಂಗ ಅನುಭವಿಸಿವೆ ಮಾತ್ರವಲ್ಲ ಈ ಮೈತ್ರಿ ಕೂಟದ ಬಲ ನಿಜಕ್ಕೂ ಎಷ್ಟು? ಏನು, ಹೇಗೆ ಎನ್ನುವ ಪ್ರಶ್ನೆಗಳನ್ನು ಹುಟ್ಟಿಸಿವೆ. ಮುಂಬರುವ ಲೋಕಸಭಾ ಚುನಾವಣೆಯಲ್ಲೂ ಈ ಎರಡು ಚುನಾವಣೆಗಳ ವಿದ್ಯಾಮಾನಗಳು ವಿವಿಧ ರೀತಿಯಲ್ಲಿ ಪ್ರತಿಫಲನ ಗೊಳ್ಳುತ್ತವೆಯೇ? ಕಾದು ನೋಡಬೇಕು ಅಷ್ಟೇ.







"ಅಚ್ಛೇ ದಿನಗಳಿಗೆ ಕಾದ 10 ವರ್ಷಗಳಲ್ಲಿ ನಡೆದದ್ದೇನು?" ಶೀರ್ಷಿಕೆಯಡಿಯಲ್ಲಿ 3 ಪುಸ್ತಕಗಳು........

ಪುಟ 2 ರಿಂದ

ನವ ಉದಾರವಾದಿ ನೀತಿಗಳನ್ನು ಸಂಪೂರ್ಣವಾಗಿ ಜಾರಿಗೆ ತರಲು ಯಾವುದೇ ಮಾರ್ಗವನ್ನಾದರೂ ಅನುಸರಿಸಲು ಮೋದಿ ಸರ್ಕಾರ ಸಿದ್ದವಾಗಿದೆ. ಇದಕ್ಕೆ ಅನುಕೂಲವಾಗುವಂತೆ ಹಲವು ಜನವಿರೋಧಿ ಘೋಷಣೆಗಳನ್ನು ಅಪ್ರಜಾಸತ್ತಾತ್ಮಕವಾಗಿ ಮಾಡತೊಡಗಿದೆ. ಸಾರ್ವಜನಿಕ ಸಂಪತ್ತನ್ನು ದೋಚಲು ಕಾರ್ಪೊರೇಟ್ ಗಳಿಗೆ ಮತ್ತು ಬಹುರಾಷ್ಟ್ರೀಯ ಕಂಪನಿಗಳಿಗೆ ಲಾಭಮಾಡಿಕೊಡಲು ಹಲವು ಘೋಷಣೆಗಳ ಮೂಲಕ ಮಾನವ ದುರಂತಗಳನ್ನು ಸೃಷ್ಟಿಸಿದ್ದಾರೆ. ಇದಕ್ಕೆ ಅಡ್ಡಿಯಾಗಿದ್ದ ಸಂವಿಧಾನದ ನಿಬಂದನೆಗಳನ್ನು ಅಳಿಸಿಹಾಕುವ ಪ್ರಯತ್ನದಲ್ಲಿಯೂ ಬಹಳಷ್ಟು ದುರಂತಗಳನ್ನು ಸೃಷ್ಟಿಸಿದ್ದಾರೆ. ಇವೆಲ್ಲವನ್ನೂ ಮಾಡಲು ಮತ್ತಷ್ಟು ಕಾಲ ಅಧಿಕಾರದಲ್ಲಿಇ ರಬೇಕಾಗುತ್ತದೆ. ಚುನಾವಣೆ ಗೆಲ್ಲಲು ದುರಂತಗಳನ್ನು ಸೃಷ್ಟಿಸಿದ ಆರೋಪಗಳೂ ಬಿಜೆಪಿ ಮೇಲಿದೆ. ಇವುಗಳಲ್ಲಿ ಇಲ್ಲಿ ನಾಲ್ಕು ವಿಷಯಗಳ ಕುರಿತಂತೆ ಲೇಖನಗಳಿವೆ.

ಹಗರಣಗಳು

1. ರಫೆಲ್ ಯುದ್ಧ ವಿಮಾನ ಒಪ್ಪಂದ: ಅಂಬಾನಿಗೆ ಜೈ, ಎಚ್.ಎ.ಎಲ್ ಗೆ ಖೋಕ್
2. ವ್ಯಾಪಂ ಹಗರಣ: ತನಿಖೆಯ ಹಾದಿಯಲ್ಲಿ ನಿಗೂಢ ಸಾವುಗಳ ಸರಮಾಲೆ
3. ಕಲ್ಲಿದ್ದಲು ಹಗರಣ: ಆರೋಪಿ ನಿರ್ದೋಷಿ, ಹಾಗಾದರೆ ಯಾರು ದೋಷಿ?
4. 2ಜಿ ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲೇ ಇಲ್ಲ
5. ಲಲಿತ್ 'ಮೋದಿಗೇಟ್': ಐಪಿಎಲ್ ಬಾಸ್ 1,975 ಕೋಟಿ ರೂ. ವಂಚನೆ, ಪರಾರಿ ಪ್ರಕರಣ ಏನಾಯ್ತು?
6. 'ಚಿಕ್ಕಿ ಹಗರಣ': ರೂ. 206 ಕೋಟಿ ನಿಯಮಬಾಹಿರ ಒಪ್ಪಂದಕ್ಕೆ ಒಂದೇ ದಿನದಲ್ಲಿ ಸಹಿ!
7. ಮೋದಿಯವರ 'ಭ್ರಷ್ಟಾಚಾರ ಮುಕ್ತ ಭಾರತ'ದ ವಾಗ್ದಾನ ಏನಾಯ್ತು?
8. ಪಿಎಂ ಕೇರ್ಸ್ ನಿಧಿ: ಸಹಸ್ರಾರು ಕೋಟಿ ಹಣ ಸಾರ್ವಜನಿಕರಿಗೋ ಅಥವಾ ಸಂಘಪರಿವಾರಕ್ಕೊ?
9. ಅಸಾಂವಿಧಾನಿಕ ಚುನಾವಣಾ ಬಾಂಡ್ ಮೂಲಕ ಬಿಜೆಪಿಗೆ 9,200 ಕೋಟಿ ರೂಪಾಯಿ

ದುರಂತಗಳು

1. ನೋಟುಗಳ ಅಮಾನ್ಯೀಕರಣ: ಸಾಧನೆಯೆಂದು ಬಿಂಬಿಸದ ಏಕಮಾತ್ರ ಪ್ರಮಾದ
2. ಕಾಶ್ಮೀರದ ಸಂಪತ್ತನ್ನು ದೋಚಲು 370 ನೇ ವಿಧಿ ರದ್ದು
3. ಪುಲ್ವಾಮ ದುರಂತ: 40 ಯೋಧರ ಬಲಿ ತೆಗೆದುಕೊಂಡ ಕ್ರಿಮಿನಲ್ ಭದ್ರತಾ ನಿರ್ಲಕ್ಷ್ಯ
4. ಭಾರತದಲ್ಲಿ ಕೊರೋನಾಗೆ ಬಲಿಯಾದವರ ಸಂಖ್ಯೆ 5 ಲಕ್ಷವೋ? 50 ಲಕ್ಷವೋ?

ಭಾಗ-3 ಪುಸ್ತಕದಲ್ಲಿ: ದೈತ್ಯ ಕಾರ್ಪೊರೇಟ್ ಗಳಿಗೆ ಮೋದಿ ಸರಕಾರದ 10 ವರ್ಷಗಳ ಸೇವೆಯ ಅಭೂತಪೂರ್ವವಾದ ರೆಕಾರ್ಡ್ ಈ ಪುಸ್ತಕದಲ್ಲಿದೆ. ಬಿಜೆಪಿಯವರು ಅಧಿಕಾರಕ್ಕೆ ಬರುವ ಮುನ್ನ, ಅಂದರೆ ಹತ್ತು ವರ್ಷಗಳ ಹಿಂದೆ ಜನರೆದುರು ಆಡಿದ ಮಾತುಗಳಿಗೂ, ಅವರು ಜನತೆಗೆ ಕೊಟ್ಟ'ಅಚ್ಛೇ ದಿನ'ದ ಭರವಸೆಗಳಿಗೂ, ಮೋದಿ ಅಧಿಕಾರಕ್ಕೆ ಬಂದ ಹತ್ತು ವರ್ಷಗಳ ಆಡಳಿತದಲ್ಲಿ ಮಾಡಿದ ಕೃತಿಗೂ ತದ್ವಿರುದ್ಧವಾಗಿದೆ. ಅಧಿಕಾರಕ್ಕೆ ಬರುವ ಮುನ್ನ ಮತದಾರರನ್ನು ತನ್ನತ್ತ ಸೆಳೆಯುವ ಸಲುವಾಗಿ ಯಾವುದರ ವಿರುದ್ಧ ಧ್ವನಿ ಎತ್ತಿ ಹೋರಾಡಿದ್ದರೋ, ಯಾವುದನ್ನು ಜನವಿರೋಧಿ, ದೇಶವಿರೋಧಿ ಎಂದು ಹೇಳಿದ್ದರೋ ಅವೇ ಯೋಜನೆಗಳನ್ನು ತಮ್ಮ ಆಡಳಿತದ ಅವಧಿಯಲ್ಲಿ ಜಾರಿಗೆ ತಂದಿದ್ದಾರೆ. ಈ ಅವಧಿಯಲ್ಲಿ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳನ್ನು ಹಾಗೂ ಬಂಡವಾಳಗಾರರ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಪರವಾದ ತನ್ನ ನೀತಿಗಳನ್ನು ಜಾರಿಗೆ ತರಲು ಬಿಜೆಪಿ ಶತಪ್ರಯತ್ನ ಮಾಡಿದೆ ಮತ್ತು ಇದರಲ್ಲಿ ಸಾಕಷ್ಟು ಯಶಸ್ವಿಯಾಗಿದೆ. ಪ್ರಮುಖವಾಗಿ ಅಬಾನಿ-ಅದಾನಿ ಮುಂತಾದ ದೈತ್ಯಕಾರ್ಪೊರೆಟ್ ಗಳಿಗೆ ಅನುಕೂಲವಾದ ನೀತಿಗಳನ್ನು, ಕ್ರಮಗಳನ್ನು ಏಕೋಮನಸ್ಸಿನಿಂದ ಜಾರಿಮಾಡಲು ಮುಂದಾಗಿದೆ. ಅದಾನಿ-ಅಂಬಾನಿ ಇತ್ಯಾದಿ ದೈತ್ಯ ಕಾರ್ಪೊರೆಟುಗಳಿಗೆ ಖಂಡಿತ ಎಂದೂ ಕಾಣದ"ಅಚ್ಛೇದಿನ್' ಬಂದಿದೆ. ಇದಕ್ಕಿರುವ ಅಡೆತಡೆಗಳನ್ನು ಮುಲಾಜುಗಳನ್ನು ನಿರ್ದಯವಾಗಿ ಮೆಟ್ಟಿ ನಿಂತಿದೆ. ಕೊರೊನಾ ಕಾಲವನ್ನು ಆ ಅವಧಿಯ ಜನರ ಸಂಕಷ್ಟವನ್ನು ಲೆಕ್ಕಿಸದೆ ಇದಕ್ಕಾಗಿ ದುಡಿಸಿಕೊಂಡಿದೆ.

ಈ ರೀತಿ ಮಾಡುವಾಗ ಈ ನೀತಿಗಳ ಜಾರಿಗೆ ಅಡ್ಡಿ ಬರುವ ಕಾನೂನುಗಳನ್ನು ಕಿತ್ತೆಸೆದು, ಸಾರ್ವಜನಿಕ ಸಂಪತ್ತುಗಳಾದ ಭೂಒಡಲಿನ ಪ್ರಕೃತಿ ಸಂಪತ್ತನ್ನು, ಅರಣ್ಯ ಸಂಪತ್ತುಗಳನ್ನು, ಬ್ಯಾಂಕುಗಳಲ್ಲಿನ ಸಂಪತ್ತುಗಳನ್ನು ಲೂಟಿಮಾಡಲು ಉದ್ದಿಮೆಗಳಿಗೆ ಅನುಕೂಲವಾಗುವಂತಹ ನೀತಿ ನಿಯಮಗಳನ್ನು ರೂಪಿಸುವುದು, ಇದಕ್ಕೆ ಅಡ್ಡಿಯಾಗಿದ್ದ ಸಂವಿಧಾನದ ವಿಧಿಗಳನ್ನೇ ಬದಲಿಸುವುದು, ಕೃಷಿಯನ್ನು ಕಾರ್ಪೊರೇಟೀಕರಣ ಮಾಡಲು ಯೋಜನೆಗಳನ್ನು ತರುವುದು, ಕಾರ್ಮಿಕರ ಹಕ್ಕುಗಳನ್ನು ಕಸಿಯುವ ಸಂಹಿತೆಗಳನ್ನು ಜಾರಿಗೆ ತರುವುದು, ಸಂವಿಧಾನದತ್ತ ಸ್ವಾಯತ್ತ ಸಂಸ್ಥೆಗಳ ಅಧಿಕಾರವನ್ನೇ ಕಸಿದುಕೊಳ್ಳುವುದು, ತನ್ನ ಸೂಚನೆಗಳನ್ನು ಪಾಲಿಸದ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ, ತನ್ನ ಸೂಚನೆಗಳನ್ನು ನಿಷ್ಠೆಯಿಂದ ಪಾಲಿಸುವ ಅಧಿಕಾರಿಗಳನ್ನು ನೇಮಕಮಾಡುವುದು, ಇದರ ವಿರುದ್ಧದ ಧ್ವನಿಗಳನ್ನು ಸರ್ವಾಧಿಕಾರಿ ಮಾರ್ಗದಲ್ಲಿ ಹತ್ತಿಕ್ಕುವುದು ಇವೆಲ್ಲವನ್ನೂ ಮೋದಿ ತನ್ನ ಆಡಳಿತದಲ್ಲಿ ಮಾಡಿದ್ದಾರೆ.

ನರೇಂದ್ರ ಮೋದಿ ಸರ್ಕಾರ ಉದ್ಯಮಿಗಳ ಸಂಪತ್ತನ್ನುವೃದ್ಧಿಸಲು ಯಾವೆಲ್ಲಾ ಯೋಜನೆಗಳನ್ನು ತಂದು, ಏನೆಲ್ಲಾ ತಂತ್ರಗಳನ್ನು ಮಾಡಿದೆ, ಜನಪರ ಯೋಜನೆಗಳನ್ನು ನಾಶಮಾಡಲು ಏನೆಲ್ಲಾ ಕ್ರಮಕ್ಕೆ ಮುಂದಾಗಿದೆ ಎಂಬುದನ್ನು ತಿಳಿಯುವ ಒಂದಷ್ಟು ಪ್ರಯತ್ನವನ್ನು ಈ ಪುಸ್ತಕದಲ್ಲಿ ಮಾಡಲಾಗಿದೆ.

1. ಕಾರ್ಪೊರೆಟ್ ಗಳಿಗೆ 14.56 ಲಕ್ಷ ಕೋಟಿ ಸಾಲ ಮನ್ನಾ, ಪರಿಣಾಮವಾದ 20 ಲಕ್ಷ ಕೋಟಿಗೂ ಹೆಚ್ಚು **NPA** ಹೊರೆ ಸಾರ್ವಜನಿಕರ ಮೇಲೆ
2. ಸಾರ್ವಜನಿಕ ಉದ್ಯಮ ಶೇರು/ಆಸ್ತಿಗಳು: 9 ವರ್ಷಗಳಲ್ಲಿ 4 ಲಕ್ಷ ಕೋಟಿ ಮಾರಾಟ
3. ರಿಸರ್ವ್ ಬ್ಯಾಂಕ್ ನಲ್ಲಿನ ಮೀಸಲು ನಿಧಿಯನ್ನೂ ಬಿಡದ ಮೋದಿ ಸರ್ಕಾರ
4. ಸರ್ಕಾರಕ್ಕೆ ವಾರ್ಷಿಕ ಲಕ್ಷ ಕೋಟಿ ರೂ. ನಷ್ಟ ತರುವ ಶೇ. 8 ರಷ್ಟು ಕಾರ್ಪೊರೇಟ್ ತೆರಿಗೆ ಕಡಿತ
5. ಕೇಂದ್ರದ ಸಾಲ: 9 ವರ್ಷಗಳಲ್ಲಿ 100 ಲಕ್ಷ ಕೋಟಿ ಹೆಚ್ಚಳ
6. ಚಿಲ್ಲರೆ ವ್ಯಾಪಾರದಲ್ಲಿ ಎಫ್.ಡಿ.ಐ: ಅಂದು ವಿರೋಧ, ಈಗ ಜಾರಿ
7. ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿತ: 10 ವರ್ಷಗಳಲ್ಲಿ 60 ರಿಂದ 83 ಕ್ಕೆ, ಶೇ.39ರಷ್ಟು
8. ಸರ್ಕಾರಿ ಗೋದಾಮುಗಳ ಖಾಸಗೀಕರಣ: ರೈತರಿಗೆ, ಆಹಾರ ಭದ್ರತೆಗೆ ಅಪಾಯ
9. ಚೀನಾ ಕುರಿತು ಇಬ್ಬಗೆ ನೀತಿ: ಜನತೆಯ ನಡುವೆ ಚೀನಾ-ದ್ವೇಷ ಪ್ರಚಾರ, ಕಂಪನಿಗಳ ನಡುವೆ ಲಾಭದಾಯಕ ವ್ಯಾಪಾರಕ್ಕೆ ಅವಕಾಶ
10. ಮೋದಿಯವರ 'ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿ' ಭರವಸೆ ಏನಾಯ್ತು?
11. ನರೇಗಾ ಯೋಜನೆಯನ್ನು ನಾಶಮಾಡಲು ಹೊರಟಿರುವ ಮೋದಿ ಸರ್ಕಾರ.



ಬಡತನ ನಿವಾರಣೆ: ಹಗುರ ಹೇಳಿಕೆಗಳು – ಪೊಳ್ಳು ಘೋಷಣೆಗಳು

ಆರ್. ರಾಮಕೃಷ್ಣ

ಕರ್ನಾಟಕದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಜಾರಿಯಾಗಿರುವ ಐದು ಗ್ಯಾರಂಟಿ ಯೋಜನೆಗಳ ಪರಿಣಾಮವಾಗಿ ಕರ್ನಾಟಕದಲ್ಲಿ ಸುಮಾರು 1.5 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ ಎಂದು ರಾಜ್ಯ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಪ್ರತಿಪಾದಿಸಿದ್ದಾರೆ.

ಅದೇ ರೀತಿ ಭಾರತ ಒಕ್ಕೂಟ ಸರಕಾರದ ಪ್ರಧಾನ ಮಂತ್ರಿ ಮತ್ತು ಹಣಕಾಸು ಮಂತ್ರಿಗಳು, 2013–14 ಮತ್ತು 2022–23 ರ ನಡುವೆ ದೇಶದ 24.28 ಕೋಟಿ ಜನರು 'ಬಹು ಆಯಾಮದ ಬಡತನ'ದಿಂದ ಹೊರಗೆ ಬಂದಿದ್ದಾರೆಂದು ಪ್ರತಿಪಾದಿಸುತ್ತಿದ್ದಾರೆ. ಅವರು ಕಳೆದ ಹತ್ತು ವರ್ಷಗಳ, ಬಿಜೆಪಿ ನೇತೃತ್ವದ ಎನ್.ಡಿ.ಎ. ಸರಕಾರದ ಆಡಳಿತದ ಪರಿಣಾಮವಾಗಿ ದೇಶದಲ್ಲಿ ಕೋಟ್ಯಂತರ ಜನರು ಬಡತನದಿಂದ ಮುಕ್ತರಾಗಿದ್ದಾರೆಂದು ಈ ರೀತಿಯಾಗಿ ಪ್ರತಿಪಾದಿಸುತ್ತಿದ್ದಾರೆ. ನೀತಿ ಆಯೋಗವು ದೇಶದಲ್ಲಿ ಈಗ ಶೇ.11.28 ರಷ್ಟು ಜನರು ಮಾತ್ರ ಬಡತನದಲ್ಲಿದ್ದಾರೆ ಎಂದು ಹೇಳಿದೆ. ಒಕ್ಕೂಟ ಸರಕಾರದ ಮುಖಂಡರ ಹೇಳಿಕೆಗಳನ್ನು ಆಧರಿಸಿ ವಿಶ್ಲೇಷಿಸಿ ನೋಡಿದರೆ, ಕೆಲವು ವರದಿಗಳ ಪ್ರಕಾರ ಈಗ ಭಾರತದಲ್ಲಿ ಬಡವರ ಪ್ರಮಾಣ ಶೇ. 5 ಮಾತ್ರ. ಇಲ್ಲಿ ಗಮನಿಸಬೇಕಾದ ವಿಶೇಷ ಏನೆಂದರೆ ಪ್ರಧಾನಿ ಮೋದಿಯವರಾಗಲಿ, ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಾಗಲಿ ದೇಶದಲ್ಲಿ ಎಷ್ಟು ಜನ ಬಡವರಿದ್ದಾರೆಂಬ ನಿಖರ ಅಂಕಿ–ಸಂಖ್ಯೆಗಳನ್ನು ಹೇಳುತ್ತಿಲ್ಲ. ಏಕೆಂದರೆ 2011 ರ ನಂತರ ದೇಶದಲ್ಲಿ ಜನಗಣತಿಯನ್ನೇ ನಡೆಸಲಾಗಿಲ್ಲ. ಹೀಗಾಗಿ ಹಳೆಯ ಅಂಕಿ–ಸಂಖ್ಯೆಗಳು, ಕಾಗದದ ಮೇಲಿನ ಊಹಾಪೋಹಗಳ ಆಧಾರದಲ್ಲಿ ಲೆಕ್ಕಾಚಾರಗಳನ್ನು ಹಾಕಲಾಗುತ್ತಿದೆ ಎಂದು ಆರ್ಥಿಕ ತಜ್ಞರು ವಿಶ್ಲೇಷಿಸಿದ್ದಾರೆ.

ಅತಿರೇಕದ ಉತ್ಪ್ರೇಕ್ಷೆ

ಮೊದಲಿಗೆ ಕರ್ನಾಟಕ ರಾಜ್ಯ ಸರಕಾರದ ಪ್ರತಿಪಾದನೆಯ ಕುರಿತು ನೋಡೋಣ. ಸಿದ್ಧರಾಮಯ್ಯನವರ ನೇತೃತ್ವದ ರಾಜ್ಯ ಸರಕಾರವು ರಾಜ್ಯದಲ್ಲಿ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಂದ ಬಡತನದ ಬೇಗೆಯಲ್ಲಿ ಬೇಯುತ್ತಿರುವ ಜನರಿಗೆ ಕೊಂಚ ಸಹಾಯವಾಗಿದೆ ಎಂಬುದರಲ್ಲಿ ಅನುಮಾನವಿಲ್ಲ. ಮನೆ ಒಡತಿಯ ಖಾತೆಗೆ ತಿಂಗಳಿಗೆ ಎರಡು ಸಾವಿರ ರೂಪಾಯಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣದ ಯೋಜನೆ, 200 ಯೂನಿಟ್‌ವರೆಗೆ ಉಚಿತ ವಿದ್ಯುತ್, ಆಹಾರ ಮುಂತಾದ ಯೋಜನೆಗಳು ಬಡಜನರ ಸಂಕಷ್ಟಗಳನ್ನು ಕೊಂಚ ತಗ್ಗಿಸಿವೆ ಎಂಬುದು ನಿಜ. ಆದರೆ ಈ ಕೆಲವು ಗ್ಯಾರಂಟಿ ಯೋಜನೆಗಳಿಂದಲೇ ರಾಜ್ಯದಲ್ಲಿ 1.5 ಕೋಟಿ ಜನರು ಬಡತನದಿಂದ ಹೊರಗೆ ಬಂದಿದ್ದಾರೆ ಎಂದು ಪ್ರತಿಪಾದಿಸುವುದು ಅತಿರೇಕದ ಪ್ರಮಾದವಾಗುತ್ತದೆ ಎನಿಸುತ್ತದೆ. ರಾಜ್ಯದಲ್ಲಿ ಹಾಗೂ ದೇಶದಲ್ಲಿ ಬಡತನ ಕಡಿಮೆಯಾಗಿದೆಯೇ? ಆಗಿದ್ದರೆ ಎಷ್ಟು ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂಬೆಲ್ಲಾ ವಿಶ್ಲೇಷಣೆ ಹಾಗೂ ಮಾಹಿತಿ, ಅಂಕಿ–ಸಂಖ್ಯೆಗಳನ್ನು ನೀಡಬೇಕಾದವರು ಆರ್ಥಿಕ ತಜ್ಞರು ಹಾಗೂ ಈ ವಿಷಯಗಳಲ್ಲಿ ಜನಪರ–ವೈಜ್ಞಾನಿಕ ಕಣ್ಣೋಟವುಳ್ಳ ತಜ್ಞ ಸಂಸ್ಥೆಗಳು. ಯಾವ ತಜ್ಞರ, ತಜ್ಞ ಸಂಸ್ಥೆಗಳ ಅಧ್ಯಯನದ ವಿವರ ಹಾಗೂ ವರದಿಗಳ ಉಲ್ಲೇಖಗಳಿಲ್ಲದೇ ನೀಡಲಾಗುವ ಬೀಸು ಹೇಳಿಕೆಗಳನ್ನು ಪ್ರಚಾರ ಪ್ರಿಯತೆ ಎಂದಷ್ಟೆ ಹೇಳಬೇಕಾಗುತ್ತದೆ.

ಒಕ್ಕೂಟ ಸರಕಾರದ ಟೊಳ್ಳು ಪ್ರತಿಪಾದನೆ

ದೇಶದ ಬಡತನ ನಿವಾರಣೆ ಕುರಿತು ಭಾರತ ಒಕ್ಕೂಟ ಸರಕಾರದ ಮುಖ್ಯಸ್ಥರ ಪ್ರತಿಪಾದನೆಗಳನ್ನು ಪರಿಶೀಲಿಸುವಾಗ ಇನ್ನಷ್ಟು ಅಂಶಗಳನ್ನು ಗಮನಿಸಬೇಕಾಗುತ್ತದೆ.

2011–12 ರಲ್ಲಿ ದೇಶದಲ್ಲಿ ಬಡತನದ ವ್ಯಾಖ್ಯಾನ ಹೀಗಿತ್ತು. ದೇಶದ ಗ್ರಾಮೀಣ ಭಾಗಗಳಲ್ಲಿ ತಿಂಗಳಿಗೆ 816, ನಗರ ಪ್ರದೇಶಗಳಲ್ಲಿ ತಿಂಗಳಿಗೆ 1,000 ರೂಪಾಯಿಗಳನ್ನು ವೆಚ್ಚ ಮಾಡಲು ಶಕ್ತಿ ಇಲ್ಲದ ಕುಟುಂಬವನ್ನು ಬಡತನ ರೇಖೆಯ ಕೆಳಗಿರುವ ಕುಟುಂಬ ಎಂದು ಪರಿಗಣಿಸಲಾಗುತ್ತಿತ್ತು. ಮತ್ತೊಂದು ರೀತಿಯ ಮಾನದಂಡದಿಂದ ಹೇಳುವುದಾದರೆ, ಗ್ರಾಮೀಣ ಪ್ರದೇಶದಲ್ಲಿ ವಯಸ್ಕ ವ್ಯಕ್ತಿಯೊಬ್ಬರು ದಿನಕ್ಕೆ 2,400 ಕ್ಯಾಲೋರಿ ಆಹಾರ ಸೇವಿಸಲು ಸಾಧ್ಯವಾಗದ ಪರಿಸ್ಥಿತಿ ಇದ್ದಲ್ಲಿ, ನಗರ ಪ್ರದೇಶದ ವ್ಯಕ್ತಿ ದಿನಕ್ಕೆ 2,100 ಕ್ಯಾಲೋರಿ ಆಹಾರ ಸೇವಿಸಲು ಸಾಧ್ಯವಾಗದ ಪರಿಸ್ಥಿತಿ ಇದ್ದಲ್ಲಿ ಅದನ್ನು 'ಕಡು ಬಡತನ'ದ ಸ್ಥಿತಿ ಎಂದು ವ್ಯಾಖ್ಯಾನಿಸಲಾಗುತ್ತಿತ್ತು.

ಈ ಲೆಕ್ಕದಲ್ಲಿ ಅಧಿಕೃತವಾಗಿ ಭಾರತದಲ್ಲಿ 2011–12 ರಲ್ಲಿ ಬಡತನ ರೇಖೆಗಿಂತ ಕೆಳಗಿರುವವರ ಸಂಖ್ಯೆ 27 ಕೋಟಿ ಎಂದು ಅಂದಾಜಿಸಲಾಗಿತ್ತು. ಅದು ಅಂದಿನ ಜನಸಂಖ್ಯೆಯ ಶೇ.21.5 ರಷ್ಟು ಎಂದು ಲೆಕ್ಕಹಾಕಲಾಗಿತ್ತು. ಈ ಅಧಿಕೃತ ಅಂಕಿ–ಸಂಖ್ಯೆಗಳು ಎಷ್ಟು ವಿಶ್ವಾಸಾರ್ಹ?, ವಾಸ್ತವಕ್ಕೆ ಎಷ್ಟು ಹತ್ತಿರ?, ಇದಕ್ಕೆ ಆಧಾರವಾದ ಮಾನದಂಡಗಳಲ್ಲಿನ ದೋಷಗಳೇನು ಎಂಬುದು ಪ್ರತ್ಯೇಕವಾದ ವಿಷಯ. ಆದರೆ ಈಗ ಬಡತನವನ್ನು ಅಳೆಯುವ ಮಾನದಂಡಗಳನ್ನು ಬದಲಾಯಿಸಲಾಗಿದೆ. ಈ ಬದಲಾವಣೆಯನ್ನು ಆಳುವ ಸರಕಾರಗಳು ತಮ್ಮ ಬೀಸು ಹೇಳಿಕೆಗಳಿಗೆ, ಹುಸಿ ಪ್ರತಿಪಾದನೆಗಳಿಗೆ ಅನುಕೂಲಕರವಾಗಿ ಬಳಸಿಕೊಳ್ಳುತ್ತಿರುವುದು ಒಂದು ದುರಂತ.


ಜಾಗತಿಕವಾಗಿ 'ಬಹು ಆಯಾಮದ ಬಡತನ' ಎಂಬ ಪರಿಕಲ್ಪನೆಯ ಆಧಾರದಲ್ಲಿ ಮಾನದಂಡಗಳನ್ನು ರೂಪಿಸಲಾಗಿದ್ದು ಈ ಮಾನದಂಡಗಳ ಕುರಿತೇ ಪ್ರಭಾತ್ ಪಟ್ನಾಯಕರಂತಹ ಅರ್ಥಶಾಸ್ತ್ರಜ್ಞರು ಹಲವು ಬಗೆಯ ಆಕ್ಷೇಪಣೆಗಳನ್ನು ಹೊಂದಿದ್ದಾರೆ. ಬಹು ಆಯಾಮದ ಬಡತನ ಎಂಬ ಪರಿಕಲ್ಪನೆಯಲ್ಲಿ ವ್ಯಕ್ತಿಯ ಆರೋಗ್ಯ ಸ್ಥಿತಿ, ಶಿಕ್ಷಣ, ಜೀವನ ಮಟ್ಟಕ್ಕೆ ಸಂಬಂಧಿಸಿದ ಹಲವು ಅಂಶಗಳನ್ನು ಆಧಾರವಾಗಿ ಪರಿಗಣಿಸಲಾಗುತ್ತಿದೆ. ಅಂದರೆ ವ್ಯಕ್ತಿಯ ಅಪೌಷ್ಟಿಕತೆಯ ಪರಿಸ್ಥಿತಿ ಜೊತೆಗೆ, ಕುಟುಂಬಕ್ಕೆ ಪಕ್ಕಾ ಮನೆ, ಮನೆಗೆ ನಲ್ಲಿ ನೀರು ಹಾಗೂ ವಿದ್ಯುತ್ ಸಂಪರ್ಕ ಇರುವುದು, ಶೌಚಾಲಯ ಇರುವುದು, ಅಡುಗೆ ಅನಿಲ ಪೂರೈಕೆ, ಬ್ಯಾಂಕ್ ಖಾತೆ ಇರುವುದು, ಒಬ್ಬ ವ್ಯಕ್ತಿ ಆರು ವರ್ಷಗಳ ಶಿಕ್ಷಣ ಪೂರೈಸಿರುವುದು ಮುಂತಾದ ಹಲವು ಅಂಶಗಳನ್ನು ಪರಿಗಣಿಸಲಾಗುತ್ತಿದೆ.

ಈ ವಿಷಯಗಳಲ್ಲಿಯೇ ಪ್ರಭಾತ್ ಪಟ್ನಾಯಕ್ ಅವರು ಗಂಭೀರವಾದ ಆಕ್ಷೇಪಗಳನ್ನು ಎತ್ತಿದ್ದಾರೆ. ತೀವ್ರ ಆರ್ಥಿಕ ಅಸಮಾನತೆಗಳಿಂದ ಕೂಡಿದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹೇಗೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ ಹೆಚ್ಚಳ ಬಡತನ ನಿವಾರಣೆಯ ಸೂಚನೆ ಆಗುವುದಿಲ್ಲವೋ ಹಾಗೆಯೇ ಬಹು ಆಯಾಮದ ಬಡತನವನ್ನು ಅಳೆಯುವ ಈ ಮಾನದಂಡಗಳೂ ದೋಷ ಪೂರ್ಣ ಎಂದು ಅವರು ಪ್ರತಿಪಾದಿಸಿದ್ದಾರೆ.

ಒಬ್ಬ ವ್ಯಕ್ತಿಗೆ ಬ್ಯಾಂಕ್ ಖಾತೆ ಇರುವುದಷ್ಟೆ ಆ ವ್ಯಕ್ತಿಯು ಬಡತನದ ಮಟ್ಟದಿಂದ ಮೇಲೆ ಇರುವುದನ್ನು ಸೂಚಿಸುವುದಿಲ್ಲ. ಆ ಬ್ಯಾಂಕ್ ಖಾತೆಯಲ್ಲಿ ಹಣ ಇದೆಯೇ ಇಲ್ಲವೇ, ಖಾತೆಯಲ್ಲಿ ಯಾವ ಪ್ರಮಾಣದ ಹಣಕಾಸು ವ್ಯವಹಾರ ನಡೆದಿದೆ ಮುಂತಾದ ಹಲವು ಬಗೆಯ ವೈಜ್ಞಾನಿಕ ಪರಿಗಣನೆಯೂ ಬೇಕಾಗುತ್ತದೆ. ಒಂದು ಮಗು ಶಾಲೆಗೆ ಹೋಗುತ್ತಿದೆಯೋ ಇಲ್ಲವೋ ಎಂಬುದು ಮುಖ್ಯವಾಗುವಾಗುತ್ತದೆ ಎಂಬುದು ನಿಜ. ಆದರೆ ಅದೇ ಸಮಯದಲ್ಲಿ ಆ ಮಗು ಎಂತಹ ಶಾಲೆಗೆ ಹೋಗುತ್ತಿದೆ. ಆ ಶಾಲೆಯಲ್ಲಿ ಕನಿಷ್ಠ ಶೈಕ್ಷಣಿಕ ಸೌಕರ್ಯಗಳು ಇವೆಯೇ? ಮಗುವು ಉತ್ತಮ ಶಿಕ್ಷಣ ಪಡೆಯುತ್ತಿದೆಯೇ ಇಲ್ಲವೇ ಎಂಬ ಅಂಶಗಳ ಪರಿಗಣನೆಯೂ ಬೇಕಾಗುತ್ತದೆ. ಒಬ್ಬ ವ್ಯಕ್ತಿ ಆರು ವರ್ಷ ಶಿಕ್ಷಣ ಪಡೆದಿರುವುದು, ಆ ವ್ಯಕ್ತಿಯು ಬಡತನದ ಮಟ್ಟದಿಂದ ಮೇಲೆ ಬಂದಿರುವುದಕ್ಕೆ ಆಧಾರವಾಗುವುದು ಹೇಗೆ? ಆರು ವರ್ಷಗಳ ಶಿಕ್ಷಣ ಒಬ್ಬ ವ್ಯಕ್ತಿಗೆ ಆಹಾರ ಭದ್ರತೆಯನ್ನು ಒದಗಿಸುವುದು ಖಚಿತ ಎಂದು ಹೇಳಬಹುದೇ? ಹೀಗೆ ಈ ವಿಷಯಗಳ ಆಳಕ್ಕಿಳಿದು ಪರಿಶೀಲಿಸಬೇಕಾದ ಹಲವು ಅಂಶಗಳಿವೆ. ಆದರೆ ಹೊಸ ಮಾನದಂಡಗಳೂ ಸಹ ದೋಷಪೂರ್ಣವಾಗಿವೆ, ಮಾನದಂಡಗಳಲ್ಲಿ ಕೊರತೆಗಳಿವೆ ಎಂಬುದು ಮಾತ್ರ ಖಚಿತವಾಗಿದೆ.

ಮಾನದಂಡಗಳ ಬದಲಾವಣೆ

ಜಾಗತಿಕವಾಗಿ ಬಡತನವನ್ನು ಲೆಕ್ಕ ಹಾಕಲು ಬಳಕೆಯಲ್ಲಿರುವ 'ಅಲ್ಕೈರ್ ಫಾಸ್ಟರ್' ಎಂಬ ವಿಧಾನವನ್ನು ಬಳಕೆ ಮಾಡುತ್ತಿರುವುದಾಗಿ ಒಕ್ಕೂಟ ಸರಕಾರ ಹೇಳಿಕೊಳ್ಳುತ್ತಿದ್ದರೂ, ಮಾನದಂಡಗಳಲ್ಲಿ ಹಲವು ಬದಲಾವಣೆ ಮಾಡಿಕೊಂಡಿರುವುದನ್ನು ಮಾಧ್ಯಮಗಳು ಎತ್ತಿ ತೋರಿಸಿವೆ. ಅಪೌಷ್ಟಿಕತೆ ಹಾಗೂ ರಕ್ತ ಹೀನತೆಗಳು ಒಂದಕ್ಕೊಂದು ನೇರವಾಗಿ ಸಂಬಂಧವಿರುವ ಅಂಶಗಳು. ಆದರೆ ಒಕ್ಕೂಟ ಸರಕಾರವು ಈ ವಿಷಯದಲ್ಲಿ ಜಾಗತಿಕ ಮಾನದಂಡವನ್ನು ಬದಲಿಸಿಕೊಂಡಿದೆ. ಅದು ರಕ್ತಹೀನತೆಯ ಅಂಶವನ್ನು ಬಡತನದ ಅಳತೆಗೋಲಾಗಿ



ಪರಿಗಣಿಸುತ್ತಿಲ್ಲ. ಹಾಗೆಯೇ ಜಾಗತಿಕ ಮಾನದಂಡವಾದ ಶಿಶುಮರಣದ ಅಂಶದಲ್ಲಿಯೂ ಬದಲಾವಣೆ ಮಾಡಿಕೊಂಡಿರುವುದರಿಂದ ಕುಟುಂಬದಲ್ಲಿ ಅಪೌಷ್ಟಿಕತೆ ಇದ್ದೂ, ಶಿಶು ಮರಣವು ಸಂಭವಿಸಿದ್ದರೂ ಸಹ ಮಾನದಂಡಗಳಲ್ಲಿನ ಬದಲಾವಣೆಯಿಂದಾಗಿ ಆ ಕುಟುಂಬವು ಬಹು ಆಯಾಮಗಳ ಬಡತನದ ವ್ಯಾಪ್ತಿಗೆ ಬರುವುದಿಲ್ಲ ಎಂಬಂತಾಗಿದೆ.

ಅದೇ ರೀತಿ ಜಾಗತಿಕವಾಗಿ ಅಪೌಷ್ಟಿಕತೆಯ ಲೆಕ್ಕಾಚಾರ ಹಾಕುವುದು 70 ವರ್ಷದವರೆಗಿನ ವ್ಯಕ್ತಿಗಳದ್ದು. ಆದರೆ ಒಕ್ಕೂಟ ಸರಕಾರದ ಹೊಸ ಮಾನದಂಡವು 5 ರಿಂದ 15 ರ ವಯಸ್ಸಿನ ಮಕ್ಕಳನ್ನು ಹಾಗೂ 49 ರಿಂದ 70 ವರ್ಷದ ವಯೋಮಾನದವರನ್ನು ಲೆಕ್ಕಾಚಾರಕ್ಕೆ ಪರಿಗಣಿಸಿಲ್ಲ. ಹೀಗಾಗಿ ಅಪೌಷ್ಟಿಕತೆಯ ಪ್ರಮಾಣವು ಸಾಕಷ್ಟು ಕಡಿಮೆಯಾಗಿದೆ ಎಂಬಂತೆ ತೋರುತ್ತದೆ.

ಬಡತನ ನಿವಾರಣೆಗೆ ಬೇಕು ನೀತಿಗಳಲ್ಲಿ ಮೂಲಭೂತ ಬದಲಾವಣೆ

'ಬಡತನ' ಎಂಬುದು ಈಗಿನ ಕೆಲವು ಈ ಗ್ಯಾರಂಟಿ ಯೋಜನೆಗಳಿಂದ ನಿವಾರಣೆಯಾಗುವಂತಹದ್ದಲ್ಲ. ಒಕ್ಕೂಟ ಸರಕಾರದ ಆಡಳಿತದಲ್ಲಿ ನೀತಿ ಆಯೋಗವು ಮಾಡಿಕೊಂಡಿರುವ ಕೆಲವು ಮಾನದಂಡಗಳ ಬದಲಾವಣೆಯಿಂದಲೂ ಆಗುವಂತಹದ್ದಲ್ಲ.

ಗ್ರಾಮೀಣ ಪ್ರದೇಶಗಳಲ್ಲಿ ಭೂಮಿಯಿಲ್ಲದವರಿಗೆ ಭೂಮಿಯನ್ನು ಖಾತ್ರಿ ಪಡಿಸುವುದು, ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ಒದಗಿಸುವುದು, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಸಮರ್ಥ ಜಾರಿ, ಅಸಂಘಟಿತ ಕಾರ್ಮಿಕರಿಗೆ ನ್ಯಾಯಬದ್ಧ ಕನಿಷ್ಠ ವೇತನದ ಗ್ಯಾರಂಟಿ, ನಗರ ಪ್ರದೇಶದಲ್ಲೂ ಉದ್ಯೋಗ ಖಾತ್ರಿ ಯೋಜನೆಯನ್ನು ಜಾರಿಗೆ ತರುವುದು ಇಂತಹ ಹತ್ತು ಹಲವು ದೃಢವಾದ ಕ್ರಮಗಳ ಮೂಲಕ ಜನರ ಕೊಳ್ಳುವ ಶಕ್ತಿಯನ್ನು ಗಣನೀಯವಾಗಿ ಹೆಚ್ಚಿಸುವುದು, ಈ ಕೊಳ್ಳುವ ಶಕ್ತಿಯ ಆಧಾರದಲ್ಲಿ ಕೈಗಾರೀಕರಣಕ್ಕೆ ಪ್ರೋತ್ಸಾಹ ನೀಡಿ ವ್ಯಾಪಕ ಉದ್ಯೋಗಗಳನ್ನು ಸೃಷ್ಟಿಸುವುದು, ಈ ಬೆಳವಣಿಗೆಯನ್ನಾಧರಿಸಿ ವ್ಯಾಪಾರ–ವಾಣಿಜ್ಯ–ಸೇವಾವಲಯಗಳು ಚೈತನ್ಯಶಾಲಿಗಳಾಗುವುದು.. ಆ ಮೂಲಕ ನಿರುದ್ಯೋಗ, ಅರೆ–ಉದ್ಯೋಗ, ಅಭದ್ರ ಉದ್ಯೋಗಗಳ ನಿವಾರಣೆ.. ಇದು ಬಡತನ ನಿವಾರಣೆಯ ದಾರಿ. ಕಾರ್ಪೊರೇಟ್ ಬಂಡವಾಳದ ಹಿತಾಸಕ್ತಿಗಳ ರಕ್ಷಣೆಗೆ ನಿಂತಿರುವ ಸರಕಾರಗಳು ಇಂತಹ ನೀತಿಗಳನ್ನು ಹೇಗೆ ಜಾರಿ ಮಾಡಲು ಸಾಧ್ಯ!!

ಜಾಗತಿಕ ಹಸಿವು ನಿವಾರಣೆ ಸೂಚ್ಯಂಕದಲ್ಲಿ 2023 ರಲ್ಲಿ ಒಟ್ಟಾರೆ 125 ದೇಶಗಳ ಪೈಕಿ ಭಾರತವು 111 ಸ್ಥಾನದಲ್ಲಿದೆ. ಕಳೆದ ಎಂಟು ವರ್ಷಗಳಿಂದಲೂ ಹಸಿವು ನಿವಾರಣೆಯ ವಿಷಯದಲ್ಲಿ ಯಾವುದೇ ಹೆಚ್ಚಿನ ಪ್ರಗತಿ ಇಲ್ಲದೇ ಭಾರತ ಬಹುತೇಕ ಸ್ಥಗಿತತೆ ಎದುರಿಸುತ್ತಿದೆ ಎಂದು ಜಾಗತಿಕ ಮಾನ್ಯತೆ ಪಡೆದ ಅಂಕಿ ಸಂಖ್ಯೆಗಳು ಸಾರುತ್ತಿವೆ. ಪರಿಸ್ಥಿತಿ ಹೀಗಿರುವಾಗ ದೇಶದಲ್ಲಿ 24.28 ಕೋಟಿ ಜನರು ಬಡತನದಿಂದ ಹೊರಬಂದಿದ್ದಾರೆ ಎಂದು ಘೋಷಿಸುವುದು ಜನರನ್ನು ವಂಚಿಸುವ ಒಂದು ಹುಸಿ ಘೋಷಣೆಯಷ್ಟೆ ಎನ್ನದೇ ಬೇರೆ ದಾರಿಯಿಲ್ಲ.

ಆದಾಯದ ಮಸುಕಾದ ಚಿತ್ರ ನೀಡುವ ಇತ್ತೀಚಿನ ಕುಟುಂಬ ಖರ್ಚು ಡೇಟಾ ಮಾಹಿತಿಗಳು

ಸುಬೋಧ್ ವರ್ಮ

11 ವರ್ಷಗಳ ಸುದೀರ್ಘ ಅವಧಿಯ ನಂತರ, ಒಂದು ತಿಂಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಎಲ್ಲಾ ಬಳಕೆಗೆ ಎಷ್ಟು ಖರ್ಚು ಮಾಡುತ್ತಾರೆ ಎಂಬುದರ ಸಾರಾಂಶ ಡೇಟಾವನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿದೆ. ಭಾರತದಲ್ಲಿ ಯಾವುದೇ ಆದಾಯ ಸಮೀಕ್ಷೆಗಳಿಲ್ಲದ ಕಾರಣ, ಈ ಬಳಕೆಯ ವೆಚ್ಚದ ಡೇಟಾವು ಆದಾಯಕ್ಕೆ ಬದಲಿಯಾಗಿ ಕಾರ್ಯನಿರ್ವಹಿಸುತ್ತದೆ–ಒಂದು ಕುಟುಂಬವು ಎಷ್ಟು ಖರ್ಚು ಮಾಡುತ್ತಿದೆ ಎಂಬ ಲೆಕ್ಕದಿಂದ ಆ ಕುಟುಂಬ ಎಷ್ಟು ಗಳಿಸುತ್ತಿದೆ ಎಂಬುದರ ಅಂದಾಜು ಕಲ್ಪನೆಯನ್ನು ಪಡೆಯಬಹುದು. ಈ ದತ್ತಾಂಶವು ಕಡಿಮೆ ಆದಾಯವನ್ನು ಸೂಚಿಸುವ ಕಡಿಮೆ ಮಟ್ಟದ ವೆಚ್ಚವನ್ನು ತೋರಿಸುತ್ತದೆ ಮತ್ತು ಬೆಲೆ ಹೊಂದಾಣಿಕೆಯ ಪರಿಭಾಷೆಯಲ್ಲಿ, ಕಳೆದ 11 ವರ್ಷಗಳಲ್ಲಿ 2011–12 ರಲ್ಲಿ ಬಳಕೆಯ ವೆಚ್ಚದ ಕೊನೆಯ ಸಮೀಕ್ಷೆಯು ವರದಿಯಾದಾಗಿನಿಂದ ಆದಾಯದಲ್ಲಿ ಬಹಳ ಕಡಿಮೆ ಹೆಚ್ಚಳ ಕಂಡುಬಂದಿದೆ.

ಮಾಸಿಕ ತಲಾ ವೆಚ್ಚದಲ್ಲಿ ಗಣನೀಯ ಏರಿಕೆ

ಆದರೆ ಇತ್ತೀಚಿನ ಮಾಹಿತಿಯ ಪ್ರಕಾರ ಪ್ರತಿ ವ್ಯಕ್ತಿಗೆ ಸರಾಸರಿ ಮಾಸಿಕ ಬಳಕೆಯ ವೆಚ್ಚವು ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ರೂ. 3,773 ಮತ್ತು ನಗರ ಪ್ರದೇಶಗಳಲ್ಲಿ ರೂ. 6,549 ಇದೆ. 2011–12 ರಿಂದ ಗ್ರಾಮೀಣ ಮಾಸಿಕ ತಲಾ ವೆಚ್ಚ ರೂ. 1430 ಮತ್ತು ನಗರವು ರೂ. 2630 ಇದ್ದುದು ಈಗ ಇದರಲ್ಲಿ ಗಣನೀಯ ಏರಿಕೆ ಕಂಡುಬಂದಿದೆ. ಆದರೆ ಈ ಹೆಚ್ಚಳವು ಒಂದು ಭ್ರಮೆಯಾಗಿದೆ. ಏಕೆಂದರೆ ಹೆಚ್ಚಿನದನ್ನು ಸರಕುಗಳ ಬೆಲೆ ಏರಿಕೆಗೆ ಕಾರಣವೆಂದು ಹೇಳಬಹುದು. ಪ್ರಸ್ತುತ ಅಂಕಿಅಂಶಗಳನ್ನು ಹಣದುಬ್ಬರಕ್ಕೆ ಸರಿಹೊಂದಿಸಿದರೆ (ಅವುಗಳನ್ನು 2011–12 ಬೆಲೆ ನಿಯಮಗಳಲ್ಲಿ ವ್ಯಕ್ತಪಡಿಸುವ ಮೂಲಕ) ನಂತರ ನಿಜವಾದ ಚಿತ್ರ ಹೊರಹೊಮ್ಮುತ್ತದೆ.

ಹಣದುಬ್ಬರಕ್ಕೆ ಅಂತಹ ಹೊಂದಾಣಿಕೆಯ ನಂತರ, ಏನಾಗುತ್ತದೆ ಎಂಬುದನ್ನು ನೋಡೋಣ. ಗ್ರಾಮೀಣ ಪ್ರದೇಶಗಳಿಗೆ ಮಾಸಿಕ ತಲಾ ವೆಚ್ಚ 2011–12ರಲ್ಲಿ 1430 ರೂ.ಗಳಿಂದ 2022–23ರಲ್ಲಿ 2008 ರೂ.ಗೆ ಏರಿಕೆಯಾಗಿದೆ. ಅದು ಕೇವಲ ಶೇ. 4 ರಷ್ಟು ವಾರ್ಷಿಕ ಬೆಳವಣಿಗೆಯ ದರವಾಗಿದೆ. ನಗರ ಪ್ರದೇಶಗಳಿಗೆ, ಮಾಸಿಕ ತಲಾ ವೆಚ್ಚವು 2011–12 ರಲ್ಲಿ ರೂ. 2630 ರಿಂದ ಪ್ರಸ್ತುತ ರೂ. 3510 ಕ್ಕೆ ಹೆಚ್ಚಾಗಿದೆ. ಇದು ವಾರ್ಷಿಕವಾಗಿ ಕೇವಲ ಶೇಕಡಾ 3 ಹೆಚ್ಚಳ.

ನಾಲ್ಕು ಜನರ ಕುಟುಂಬವು ಅಗತ್ಯವಿರುವ ಎಲ್ಲವನ್ನೂ ಎಷ್ಟು ಖರ್ಚು ಮಾಡುತ್ತದೆ ಎಂದು ಅಂದಾಜಿಸಲು ಈ ಸಂಖ್ಯೆಗಳನ್ನು ನಾಲ್ಕರಿಂದ ಗುಣಿಸಬೇಕು. ಹೀಗಾಗಿ, ಗ್ರಾಮೀಣ ಪ್ರದೇಶಗಳಲ್ಲಿ, ಅಂತಹ ಕುಟುಂಬದ ಸರಾಸರಿ ಮಾಸಿಕ ವೆಚ್ಚವು 2011–12ರ ಬೆಲೆಯಲ್ಲಿ ರೂ 8032 ಅಥವಾ ಪ್ರಸ್ತುತ ಬೆಲೆಗಳಲ್ಲಿ ರೂ. 15,092 ಆಗಿರುತ್ತದೆ. ಅದೇ ರೀತಿ, ನಗರ ಪ್ರದೇಶಗಳಲ್ಲಿ, ನಾಲ್ಕು ಸದಸ್ಯರ ಕುಟುಂಬಕ್ಕೆ, ತಿಂಗಳಿಗೆ ಸರಾಸರಿ ಖರ್ಚು 2011–12 ರಲ್ಲಿ ರೂ. 10,520 ಅಥವಾ ಪ್ರಸ್ತುತ ಬೆಲೆಯಲ್ಲಿ ರೂ. 14,040 ಆಗಿರುತ್ತದೆ. ಎರಡೂ ಸಂದರ್ಭಗಳಲ್ಲಿ, ಇದು ಸ್ಥೂಲವಾಗಿ ಅವರ ಆಯಾ ಆದಾಯದ ಅಳತೆಯಾಗಿದೆ.

ಶ್ರೀಮಂತ ಮತ್ತು ಬಡವರ ನಡುವೆ ದೊಡ್ಡ ಅಂತರ

ಈ ಮಾಹಿತಿಯು ಸಾರಾಂಶವು ಶ್ರೀಮಂತ ಮತ್ತು ಬಡವರ ನಡುವಿನ ಅಸಮಾನತೆಯ ಆಘಾತಕಾರಿ ಚಿತ್ರವನ್ನು ಒಳಗೊಂಡಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಬಡಜನರ ಸಂಖ್ಯೆಯ ಶೇಕಡಾ 5 ರಷ್ಟು ಜನರು ಪ್ರತಿ ತಿಂಗಳು ಬಳಕೆಗೆ ಕೇವಲ 1373 ರೂಪಾಯಿಗಳನ್ನು ಮಾತ್ರ ಖರ್ಚು ಮಾಡುತ್ತಾರೆ, ಆದರೆ ಶೇಕಡಾ 5 ರಷ್ಟು ಶ್ರೀಮಂತರು ಪ್ರತಿ ವ್ಯಕ್ತಿಗೆ 10,501 ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಅಂದರೆ ಶ್ರೀಮಂತ ವ್ಯಕ್ತಿಗಳು ಬಡವರಿಗಿಂತ ಸುಮಾರು 8 ಪಟ್ಟು ಹೆಚ್ಚು ಖರ್ಚು ಮಾಡುತ್ತಾರೆ.

ನಗರ ಪ್ರದೇಶಗಳಲ್ಲಿ, ಇದೇ ರೀತಿಯ ಕಂದಕವಿದೆ–ಬಡ ಶೇಕಡಾ 5 ಜನರು ಪ್ರತಿ ವ್ಯಕ್ತಿಗೆ ತಿಂಗಳಿಗೆ 2001 ರೂ.ಗಳನ್ನು ಖರ್ಚು ಮಾಡುತ್ತಾರೆ, ಆದರೆ ಶೇಕಡಾ 5 ಶ್ರೀಮಂತರು ಪ್ರತಿ ವ್ಯಕ್ತಿಗೆ 20,824 ರೂ.ಗಳನ್ನು ಖರ್ಚು ಮಾಡುತ್ತಾರೆ. ಅಂದರೆ ಶ್ರೀಮಂತರ ಖರ್ಚು ಬಡವರಿಗಿಂತ ಸುಮಾರು 10 ಪಟ್ಟು ಹೆಚ್ಚು.

ವಾಸ್ತವವಾಗಿ ಗ್ರಾಮೀಣ ಪ್ರದೇಶಗಳಲ್ಲಿ, 70 ರಷ್ಟು ಜನಸಂಖ್ಯೆಯು ಒಬ್ಬ ವ್ಯಕ್ತಿಗೆ ತಿಂಗಳಿಗೆ 4000 ರೂ.ಗಿಂತ ಕಡಿಮೆ ಖರ್ಚು ಮಾಡುತ್ತಾರೆ. ನಗರ ಪ್ರದೇಶಗಳಲ್ಲಿ, ಶೇಕಡಾ 50 ರಷ್ಟು ಜನಸಂಖ್ಯೆಯು ಪ್ರತಿ ವ್ಯಕ್ತಿಗೆ ತಿಂಗಳಿಗೆ 5000 ರೂಪಾಯಿಗಳಿಗಿಂತ ಕಡಿಮೆ ಖರ್ಚು ಮಾಡುತ್ತಾರೆ ಎಂದು ಡೇಟಾ ತೋರಿಸುತ್ತದೆ.

ಸಾರಾಂಶ ಡೇಟಾವು ವಿವಿಧ ಸಾಮಾಜಿಕ ಗುಂಪುಗಳಲ್ಲಿ MPCE ಯ ವಿಭಜನೆಯನ್ನು ಒಳಗೊಂಡಿದೆ. ಪರಿಶಿಷ್ಟ ಜಾತಿಗಳು (SC) ಮತ್ತು ಪರಿಶಿಷ್ಟ ಪಂಗಡಗಳ (ST) ಸದಸ್ಯರು ತಮ್ಮ ಕಡಿಮೆ ಆದಾಯದ ಮಟ್ಟವನ್ನು ಪ್ರತಿಬಿಂಬಿಸುವ ಕಡಿಮೆ ತಲಾ ವೆಚ್ಚವನ್ನು ಹೊಂದಿದ್ದಾರೆ ಎಂದು ಅದು ಬಹಿರಂಗಪಡಿಸುತ್ತದೆ.

ಗ್ರಾಮೀಣ ಪ್ರದೇಶಗಳಲ್ಲಿ, ಆದಿವಾಸಿಗಳಿಗೆ (ಎಸ್‌ಟಿ ಸಮುದಾಯದ ಸದಸ್ಯರಿಗೆ) ಪ್ರತಿ ವ್ಯಕ್ತಿಗೆ ಸರಾಸರಿ ಮಾಸಿಕ 3016 ರೂ., ದಲಿತರಿಗೆ (ಎಸ್‌ಸಿ ಸಮುದಾಯದ ಸದಸ್ಯರು) 3474 ರೂ., ಇತರ ಹಿಂದುಳಿದ ವರ್ಗಗಳಿಗೆ (ಒಬಿಸಿ) 3848 ರೂ. ಮತ್ತು 'ಮೇಲ್ಜಾತಿಗಳು' ಮತ್ತು ಇತರ ನಂಬಿಕೆಗಳ ಅನುಯಾಯಿಗಳು ಎಂದು ಕರೆಯಲ್ಪಡುವ ಎಲ್ಲ ಇತರರಿಗೆ 4392 ರೂ.

ನಗರ ಪ್ರದೇಶಗಳಲ್ಲಿ, ಪ್ರತಿ ವ್ಯಕ್ತಿಗೆ ಸರಾಸರಿ ಮಾಸಿಕ ವೆಚ್ಚವು ಆದಿವಾಸಿಗಳಿಗೆ ರೂ. 5414, ದಲಿತರಿಗೆ ರೂ. 5307, ಒಬಿಸಿಗಳಿಗೆ ರೂ. 6177 ಮತ್ತು ಇತರ ಎಲ್ಲರಿಗೂ ರೂ. 7333.

ಸರ್ಕಾರದ ಕಲ್ಯಾಣ ಯೋಜನೆಗಳು ಎಷ್ಟು ಸಹಾಯ ಮಾಡುತ್ತವೆ?

ಈ ಸಾರಾಂಶ ವರದಿಯ ಕುತೂಹಲಕಾರಿ ಅಂಶವೆಂದರೆ, ಜನರಿಗೆ ಉಚಿತ ಅಥವಾ ಸಬ್ಸಿಡಿ ಬಳಕೆಯ ವಸ್ತುಗಳನ್ನು ಒದಗಿಸುವ ಹಲವಾರು ಸರ್ಕಾರಿ ಯೋಜನೆಗಳಿವೆ ಎಂಬ ಅಂಶಕ್ಕೆ ಇದರಲ್ಲಿ ಪ್ರತ್ಯೇಕ ಡೇಟಾವನ್ನು ನೀಡಲಾಗಿದೆ. ಸಾಂಕ್ರಾಮಿಕ ಸಮಯದಲ್ಲಿ ಎಲ್ಲಾ ಪಡಿತರ ಚೀಟಿದಾರರಿಗೆ (ಮತ್ತು ಇತರ ದುರ್ಬಲ ವರ್ಗಗಳಿಗೆ) 5 ಕೆಜಿ ಆಹಾರ ಧಾನ್ಯವನ್ನು ಉಚಿತವಾಗಿ ನೀಡಿದ ಪಿಎಂ ಗರೀಬ್ ಕಲ್ಯಾಣ್ ಅನ್ನಯೋಜನೆಯಡಿ ನೀಡಲಾದ ಉಚಿತ ಆಹಾರ ಧಾನ್ಯಗಳು ಇವುಗಳಲ್ಲಿ ಸೇರಿವೆ. ಲ್ಯಾಪ್‌ಟಾಪ್‌ಗಳು, ಮೊಬೈಲ್ ಹ್ಯಾಂಡ್‌ಸೆಟ್‌ಗಳು, ಬೈಸಿಕಲ್‌ಗಳು, ಶಾಲಾ ಸಮವಸ್ತ್ರಗಳು ಮುಂತಾದ ಇತರ ಉಚಿತ ವಸ್ತುಗಳ ಅಂದಾಜುಗಳನ್ನು ಸಹ ಲೆಕ್ಕಹಾಕಲಾಗಿದೆ.

ಈ ಫಲಿತಾಂಶಗಳು ಕಣ್ಣು ತೆರೆಸುವಂತಿವೆ. ಗ್ರಾಮೀಣ ಪ್ರದೇಶಗಳಿಗೆ, ಈ ವೆಚ್ಚಗಳನ್ನು ಒಳಗೊಂಡಂತೆ ಪ್ರತಿ ವ್ಯಕ್ತಿಗೆ ಮಾಸಿಕ ವೆಚ್ಚದ ನಡುವಿನ ವ್ಯತ್ಯಾಸವು ಕೇವಲ 87 ರೂ! ಈ ವೆಚ್ಚಗಳಿಲ್ಲದೆ, ಮಾಸಿಕ ವೆಚ್ಚವನ್ನು 3773 ರೂ. ಗಳಲ್ಲಿ ದಾಖಲಿಸಲಾಗಿದೆ ಆದರೆ ಈ ವೆಚ್ಚಗಳನ್ನು ಸೇರಿಸಿದರೆ ಇದು ರೂ. 3860 ಆಗಿತ್ತು. ಪ್ರಸ್ತುತ ಬೆಲೆಗಳನ್ನು ಹಣದುಬ್ಬರಕ್ಕೆ ಸರಿಹೊಂದಿಸಿದರೆ ಆಗ ವ್ಯತ್ಯಾಸವು ಕೇವಲ ರೂ. 46 ರಷ್ಟು ಇನ್ನೂ ಕಡಿಮೆಯಾಗುತ್ತದೆ. ಅದೇ ರೀತಿ ನಗರ ಪ್ರದೇಶಗಳಲ್ಲಿ, ನಡುವಿನ ಈ ವ್ಯತ್ಯಾಸ ಕಲ್ಯಾಣ ಯೋಜನೆಗಳ ಪ್ರಯೋಜನಗಳ ವೆಚ್ಚದೊಂದಿಗೆ ಅಥವಾ ಇಲ್ಲದೆಯೇ ಮಾಸಿಕ ಖರ್ಚು ಪ್ರತಿ ವ್ಯಕ್ತಿಗೆ ರೂ. 62. ಹಣದುಬ್ಬರವನ್ನು ಸರಿಹೊಂದಿಸಿದರೆ ಪ್ರತಿ ವ್ಯಕ್ತಿಗೆ 34 ರೂ.ಗೆ ಇದು ಕಡಿಮೆಯಾಗುತ್ತದೆ.

revdis ಮತ್ತು freebies ಬಗ್ಗೆ ಪ್ರಚಾರವು ಸಂಪೂರ್ಣವಾಗಿ ತಪ್ಪಾಗಿದೆ ಎಂದು ಇದು ತೋರಿಸುತ್ತದೆ. ಆದರೆ ಇದು ಜನರು ಎಷ್ಟು ಸಂಕಷ್ಟಕ್ಕೀಡಾಗಿದ್ದಾರೆ ಎಂಬುದನ್ನು ತೋರಿಸುತ್ತದೆ, ಸಣ್ಣ ಪ್ರಮಾಣದ ಸಹಾಯವೂ ಜನಪ್ರಿಯವಾಗಿದೆ ಮತ್ತು ಕೃತಜ್ಞತೆಯಿಂದ ಸ್ವೀಕರಿಸಲ್ಪಟ್ಟಿದೆ.

ಉಪರಾಜ್ಯಪಾಲರು ಮತ್ತೆ ಮನೆ ಕಟ್ಟಿಸಿ ಕೊಡದಿದ್ದರೆ ಸಿಪಿಐ(ಎಂ) ಕಟ್ಟಿಸಿಕೊಡುತ್ತದೆ – ಬೃಂದಾ ಕಾರಟ್

ಮಾರ್ಚ್ 1 ರಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಬೃಂದಾ ಕಾರಟ್ ನೇತೃತ್ವದಲ್ಲಿ ಪಕ್ಷದ ನಿಯೋಗವೊಂದು ವಕೀಲ್ ಹಸನ್ ಮತ್ತು ಅವರ ಕುಟುಂಬವನ್ನು ಭೇಟಿಯಾಗಿ ಅವರಿಗೆ ಸೌಹಾರ್ದವನ್ನು ವ್ಯಕ್ತಪಡಿಸಿತು. ಡಿಡಿಎ ಕ್ರಮವನ್ನು ಖಂಡಿಸಿದ ಅವರು ಸಾವಿರಾರು ಮನೆಗಳಿರುವ ಈ ಇಡೀ ಕಾಲನಿಯಲ್ಲಿ ಸುರಂಗ ಕುಸಿತದಲ್ಲಿ ಸಿಲುಕಿಕೊಂಡಿದ್ದ 41 ಗಣಿಗಾರರನ್ನು ರಕ್ಷಿಸುವಲ್ಲಿ ವೀರ ಪಾತ್ರವನ್ನು ವಹಿಸಿದವರೆಂದು ಎಲ್ಲರಿಂದಲೂ ಪ್ರಶಂಸೆಗೊಳಗಾದವರ ಒಂದು ಮನೆಯನ್ನು ಮಾತ್ರ ಕೆಡವಲಾಗಿದೆ. ಇದು ಡಿಡಿಎ ನಿರ್ಲಕ್ಷ್ಯಕ್ಕೆ ಮತ್ತು ಭ್ರಷ್ಟಾಚಾರಕ್ಕೆ ನಿದರ್ಶನ ಎಂದು ಬೃಂದಾ ಕಾರಟ್ ಹೇಳಿದರು. ಕೇಂದ್ರದ ಬಿಜೆಪಿ ಸರ್ಕಾರದ ಅಡಿಯಲ್ಲಿ ಡಿಡಿಎ ಕಾರ್ಯನಿರ್ವಹಿಸುತ್ತದೆ ಮತ್ತು ಉಪರಾಜ್ಯಪಾಲರು ಡಿಡಿಎ ಅಧ್ಯಕ್ಷರಾಗಿದ್ದಾರೆ ಎಂಬುದನ್ನು ನೆನಪಿಸಿದ ಅವರು ಮೋದಿ ಸರ್ಕಾರ 'ಸಬ್ ಕಾಸಾಥ್, ಸಬ್ ಕಾ ವಿಶ್ವಾಸ್' ತೋರಿಕೆಗೇನೋ ಎಂದು ಮಾತನಾಡುತ್ತದೆ, ಆದರೆ ವಾಸ್ತವದಲ್ಲಿ ಅದು ಬಡವರು, ದಲಿತರು ಮತ್ತು ಅಲ್ಪಸಂಖ್ಯಾತರ ವಿರುದ್ಧ ರಾಜಕೀಯ ಮಾಡುತ್ತದೆ ಎಂಬುದು ಇದರಿಂದ ಸ್ಪಷ್ಟವಾಗಿದೆ. ಮನೆಗಳನ್ನು ಜೋಡಿಸುವ ಬದಲು ಅದು ಬುಲ್ಡೋಜರ್‌ನಿಂದ ಮನೆ ಕೆಡಹುವ ರಾಜಕೀಯ ಮಾಡುತ್ತದೆ. ಎಂದು ಬೃಂದಾ ಕಾರಟ್ ಖಂಡಿಸಿದರು.

ಸಂತ್ರಸ್ತ ಕುಟುಂಬಕ್ಕೆ ತಕ್ಷಣ ಆರ್ಥಿಕ ನೆರವು ನೀಡುವುದಲ್ಲದೆ, ಮುಂದಿನ ದಿನಗಳಲ್ಲಿ ಅವರ ಸಂಘರ್ಷದಲ್ಲಿ ಬೆಂಬಲಕ್ಕೆ ನಿಲ್ಲುವುದಾಗಿ ಸಿಪಿಐ(ಎಂ) ನಿಯೋಗ ಭರವಸೆ ನೀಡಿತು. ನಿಯೋಗದಲ್ಲಿ ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿ ಕಾರ್ಯದರ್ಶಿ ಕೆ.ಎಂ.ತಿವಾರಿ, ಜನವಾದಿ ಮಹಿಳಾ ಸಮಿತಿ ಕಾರ್ಯದರ್ಶಿ ಆಶಾ ಶರ್ಮಾ, ರಾಜ್ಯ ಸಮಿತಿ ಸದಸ್ಯ ಪುಷ್ಪೇಂದ್ರ ಮತ್ತಿತರರು ಇದ್ದರು. ಸಿಪಿಐ(ಎಂ) ದಿಲ್ಲಿ ರಾಜ್ಯ ಸಮಿತಿಯು ವಕೀಲ್ ಹಸನ್ ಅವರಿಗೆ ಅದೇ ಸ್ಥಳದಲ್ಲಿ ಮನೆ ನಿರ್ಮಿಸಿ ಕೊಡಬೇಕು, ಅಲ್ಲಿಯವರೆಗೆ ಅವರ ವಾಸ್ತವ್ಯಕ್ಕೆ ತಕ್ಷಣದ ವ್ಯವಸ್ಥೆ ಮಾಡಬೇಕು ಎಂದು ಆಗ್ರಹಿಸಿದೆ. ಬಡವರ ವಸತಿ ಬಗ್ಗೆ ಮೋದಿ ಸರ್ಕಾರದ ಅಸಡ್ಡೆ, ಒಂದು ದಿನದ ಹಿಂದೆ ಸಂಗಮ್ ವಿಹಾರದಲ್ಲಿ ನಡೆದ ಬುಲ್ಡೋಜರ್ ಕಾರ್ಯಾಚರಣೆಯಲ್ಲೂ ಎದ್ದು ಕಾಣುತ್ತದೆ.




ಯಾವುದೇ ಪರ್ಯಾಯ ವಸತಿ ಯೋಜನೆ ಇಲ್ಲದೆ ದೆಹಲಿಯಲ್ಲಿ ಲಕ್ಷಾಂತರ ಬಡವರನ್ನು ಎತ್ತಂಗಡಿ ಮಾಡುವ ಪ್ರಕ್ರಿಯೆಯನ್ನು ಕೂಡಲೇ ನಿಲ್ಲಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

ಉಪರಾಜ್ಯಪಾಲರು ಮನೆ ಕಟ್ಟಿಸಿಕೊಡುವುದಾಗಿ ಹೇಳಿದ್ದಾರೆ. ಆದರೆ ಅವರಾಗಲೀ, ಅವರ ಕಡೆಯಿಂದ ಯಾರೇ ಆಗಲಿ ಇದುವರೆಗೆ ಇಲ್ಲಿಗೆ ಭೇಟಿ ನೀಡಿಲ್ಲ, ಕೇವಲ ಹತ್ತು ನಿಮಿಷದ ದೂರದಲ್ಲಿಯೇ ಇರುವ ಸ್ಥಳೀಯ ಎಂಎಲ್‌ಎ ಕೂಡ ಭೇಟಿ ನೀಡಿಲ್ಲ. ಉಪರಾಜ್ಯಪಾಲರು ಮತ್ತೆ ಮನೆ ಕಟ್ಟಿಸಿ ಕೊಡದಿದ್ದರೆ ಸಿಪಿಐ(ಎಂ) ಕಟ್ಟಿಸಿಕೊಡುತ್ತದೆ ಎಂದು ಬೃಂದಾ ಕಾರಟ್ ಹೇಳಿದರು.

ಏಕ–ಪಕ್ಷ ಆಡಳಿತ ಬಯಕೆ ಪ್ರತಿಪಕ್ಷಗಳ ನಾಶಕ್ಕೆ ಬಿಜೆಪಿ ಷಡ್ಯಂತ್ರ

ಪ್ರಕಾಶ್ ಕಾರತ್



ಕಾಂಗ್ರೆಸ್ ಮತ್ತು ಇತರ ಕೆಲವು ಪ್ರತಿಪಕ್ಷಗಳಿಂದ ಪಕ್ಷಾಂತರ ಮಾಡಿಸಲು ಬಿಜೆಪಿ ಪೂರ್ಣ ಪ್ರಮಾಣದ ಅಭಿಯಾನವನ್ನೇ ಆರಂಭಿಸಿದೆ. ನಿತೀಶ್ ಕುಮಾರ್‌ರ ಜೆಡಿಯು ಮತ್ತು ಜಯಂತ್ ಚೌಧರಿಯ ಆರ್‌ಎಲ್‌ಡಿ ಪಕ್ಷವನ್ನು ಬಿಜೆಪಿಗೆ ಪಕ್ಷಾಂತರ ಮಾಡಿಸಿದ ನಂತರ, ಇದೀಗ ಅನೇಕ ವ್ಯಕ್ತಿಗತ ನಾಯಕರು, ನಾನಾ ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಮತ್ತು ಮಾಜಿ ಶಾಸಕರನ್ನು ಪಕ್ಷಾಂತರ ಮಾಡಿಸುವ ದೊಡ್ಡ ಪ್ರಯತ್ನವನ್ನೇ ಬಿಜೆಪಿ ನಡೆಸಿದೆ.

ಕಳೆದ ಒಂದು ತಿಂಗಳಲ್ಲಿ ಅಸ್ಸಾಮ್‌ನ ಇಬ್ಬರು ಕಾಂಗ್ರೆಸ್ ಶಾಸಕರು ರಾಜ್ಯದ ಬಿಜೆಪಿ ಸರಕಾರಕ್ಕೆ ಬೆಂಬಲ ನೀಡುವುದಾಗಿ ಘೋಷಿಸಿದ್ದಾರೆ. ಅವರಲ್ಲಿ ಒಬ್ಬರು ಅಸ್ಸಾಮ್ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷರು. ಅದಾದ ನಂತರ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಮತ್ತು ಕಾಂಗ್ರೆಸ್ ನಾಯಕ ಅಶೋಕ್ ಚವ್ಹಾಣ್ ಬಿಜೆಪಿಗೆ ಹಾರಿದರು. ರಾಜಸ್ಥಾನದಲ್ಲಿ, ನಾಲ್ಕು ಬಾರಿ ಶಾಸಕರಾಗಿದ್ದ ಬುಡಕಟ್ಟು ನಾಯಕ ಮಹೇಂದ್ರಜಿತ್ ಸಿಂಗ್ ಮಾಳವೀಯ ಇದ್ದಕ್ಕಿದ್ದಂತೆ ಬಿಜೆಪಿಯ ಸಿದ್ಧಾಂತಕ್ಕೆ ಹತ್ತಿರವಾದರು. ಗುಜರಾತ್‌ನಲ್ಲಿ ವಿಧಾನಸಭೆಯಲ್ಲಿ ಪಕ್ಷದ ಮುಖ್ಯ ಸಚೇತಕರಾಗಿದ್ದವರ ಸಹಿತ ಕಾಂಗ್ರೆಸ್‌ನ ಇಬ್ಬರು ಶಾಸಕರು ಬಿಜೆಪಿ ಪಾಳೆಯಕ್ಕೆ ಜಿಗಿದರು. ಅವರ ಹಿಂದೆಯೇ, ರಾಜ್ಯಸಭೆಯ ನಿರ್ಗಮನ ಸದಸ್ಯ ಹಾಗೂ ಐದು ಬಾರಿ ಲೋಕಸಭೆ ಸದಸ್ಯರಾಗಿದ್ದ ಬುಡಕಟ್ಟು ನಾಯಕ ಕಾಂಗ್ರೆಸ್‌ನ ನರನ್ ರಾಥ್ವಾ ಹಾಗೂ ಅವರ ಮಗ ಕೂಡ ಬಿಜೆಪಿಗೆ ಹೋದರು. ಅರುಣಾಚಲ ಪ್ರದೇಶದಲ್ಲಿ ತನ್ನಲ್ಲೇ ಪಕ್ಷಾಂತರಿಗಳನ್ನು ಹೊಂದಿರುವ ಬಿಜೆಪಿಗೆ ಇಬ್ಬರು ಕಾಂಗ್ರೆಸ್ ಶಾಸಕರು ನ್ಯಾಶನಲ್ ಪೀಪಲ್ಸ್ ಪಕ್ಷದ ಇನ್ನಿಬ್ಬರು ಎಂಎಲ್‌ಎಗಳ ಜೊತೆ ಸೇರಿದರು. ಬಿಹಾರದಲ್ಲಿ ಇಬ್ಬರು ಕಾಂಗ್ರೆಸ್ ಹಾಗೂ ಒಬ್ಬ ಆರ್‌ಜೆಡಿ ಶಾಸಕ, ಅಸೆಂಬ್ಲಿ ಅಧಿವೇಶನದ ವೇಳೆಯೇ ಆಳುವ ಪಕ್ಷವನ್ನು ಸೇರಿದರು. ಇದಕ್ಕೂ ಮುನ್ನ, ವಿಶ್ವಾಸಮತದ ಸಂದರ್ಭದಲ್ಲಿ ಮೂವರು ಆರ್‌ಜೆಡಿ ಶಾಸಕರು ಪಕ್ಷಾಂತರ ಮಾಡಿದ್ದರು. ಜಾರ್ಖಂಡ್‌ನ ಏಕೈಕ ಕಾಂಗ್ರೆಸ್ ಸಂಸದರಾಗಿದ್ದ ಗೀತಾ ಕೋಡಾ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ.

ಕೇವಲ ಪಕ್ಷಾಂತರವಲ್ಲ

ಇದು ಸ್ವಾರ್ಥಿ ನಾಯಕರು ಮೇಯಲು ಹುಲುಸಾದ ಹುಲ್ಲುಗಾವಲನ್ನು ಅರಸಿಕೊಂಡು ಹೋಗುವ ಪಕ್ಷಾಂತರ ಪರ್ವದ ಇನ್ನೊಂದು ಅಧ್ಯಾಯ ಎಂದಷ್ಟೇ ನೋಡುವುದು ತಪ್ಪಾಗುತ್ತದೆ. ಕಾಂಗ್ರೆಸ್ ಪಕ್ಷವನ್ನು, ವಿಶೇಷವಾಗಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಕಾಂಗ್ರೆಸ್ ಮುಖ್ಯ ಪ್ರತಿಪಕ್ಷ ಆಗಿರುವ ಕಡೆಗಳಲ್ಲಿ ದುರ್ಬಲಗೊಳಿಸಿ ನಾಶ ಮಾಡುವ ದೊಡ್ಡ ಷಡ್ಯಂತ್ರದ ಭಾಗ ಇದಾಗಿದೆ. ಇಡೀ ಪ್ರತಿಪಕ್ಷವನ್ನು ದುರ್ಬಲಗೊಳಿಸುವುದು ಕೂಡ ಇದರ ಉದ್ದೇಶವಾಗಿದೆ.

ಕ್ಯಾರೆಟ್–ಸ್ಟಿಕ್ ತಂತ್ರ

ಕಾಂಗ್ರೆಸ್ ಮತ್ತು ಇತರ ನಿರ್ದಿಷ್ಟ ಪ್ರತಿಪಕ್ಷಗಳ ಮುಖಂಡರು ಪಕ್ಷಾಂತರ ಮಾಡಿ ಬಿಜೆಪಿಗೆ ಸೇರುವಂತೆ ಮಾಡಲು ಬಿಜೆಪಿ ಇಬ್ಬಗೆಯ ತಂತ್ರವನ್ನು ಅನುಸರಿಸುತ್ತಿದೆ. ಬಲವಂತದ ಬೆದರಿಕೆ ತಂತ್ರ ಮತ್ತು ಉತ್ತೇಜಕ ಆಮಿಷಗಳನ್ನು ಒಡ್ಡುವುದು ಅವುಗಳಲ್ಲಿ ಸೇರಿವೆ. ಹಣ್ಣು ಮತ್ತು ಬೆತ್ತದ (ಕ್ಯಾರೆಟ್ ಆ್ಯಂಡ್ ಸ್ಟಿಕ್) ನೀತಿ ಇದಾಗಿದೆ. ಅನುಷ್ಠಾನ ನಿರ್ದೇಶನಾಲಯ (ಇ.ಡಿ.), ಕೇಂದ್ರೀಯ ತನಿಖಾ ದಳ (ಸಿಬಿಐ), ಮತ್ತು ಇತರ ಕೇಂದ್ರೀಯ ಸಂಸ್ಥೆಗಳನ್ನು ದುರ್ಬಲ ನಾಯಕರನ್ನು ಟಾರ್ಗೆಟ್ ಮಾಡಲು ಬೆತ್ತವಾಗಿ ಬಳಸುವುದು. ಎಲ್ಲ ಭ್ರಷ್ಟಾಚಾರ ಆರೋಪಗಳಿಂದ ಮುಕ್ತಗೊಳಿಸುವುದು, ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ನೀಡುವುದು ಮತ್ತು ಉದಾರವಾಗಿ ಬೇಕಾದಷ್ಟು ಹಣ ನೀಡುವುದು 'ಹಣ್ಣು' ಕಾರ್ಯತಂತ್ರದ ಕಾರ್ಯಕ್ರಮವಾಗಿದೆ.

ಬಿಜೆಪಿಗೆ ಸೇರಿದ ಬಹಳಷ್ಟು ಜನರು ವಿಚಾರಣೆಗಳನ್ನು ಎದುರಿಸುತ್ತಿದ್ದವರು ಅಥವಾ ಭ್ರಷ್ಟಾಚಾರ ಪ್ರಕರಣಗಳಲ್ಲಿ ಒಳಗೊಂಡವರು ಎನ್ನುವುದನ್ನು ಗಮನಿಸಬೇಕು. ಅಶೋಕ್ ಚವ್ಹಾಣ್ ಅದಕ್ಕೆ ದೊಡ್ಡ ಉದಾಹರಣೆಯಾಗಿದ್ದಾರೆ. ಅವರು ಆದರ್ಶ ಹೌಸಿಂಗ್ ಹಗರಣದ ಆರೋಪಿಗಳಲ್ಲಿ ಒಬ್ಬರು. ಅಸ್ಸಾಮ್‌ನ ಕಾಂಗ್ರೆಸ್ ಶಾಸಕ ಪುರಕಾಯಸ್ಥ, ರಾಜ್ಯದ ವಿಜಿಲೆನ್ಸ್ ಇಲಾಖೆಯ ತನಿಖೆಯನ್ನು ಎದುರಿಸುತ್ತಿದ್ದಾರೆ. ಅದಕ್ಕೂ ಮುನ್ನ, ಎನ್‌ಸಿಪಿಯನ್ನು ಒಡೆದು ಪರ್ಯಾಯ ಪಕ್ಷ ಕಟ್ಟಿ ಬಿಜೆಪಿ ಜೊತೆ ಕೈಜೋಡಿಸಿದ ಎನ್‌ಸಿಪಿ ನಾಯಕರೆಲ್ಲರೂ ಇ.ಡಿ. ಹೂಡಿದ್ದ ವಿವಿಧ ತನಿಖೆಗಳನ್ನು ಮತ್ತು ಕೇಸ್‌ಗಳನ್ನು ಎದುರಿಸುತ್ತಿದ್ದವರೇ ಆಗಿದ್ದರು. ಇನ್ನು ಇತರರಿಗೆ ಆಮಿಷವೊಡ್ಡಿ ಅವರಿಗೆ ಮಾತ್ರವಲ್ಲದೆ ಕುಟುಂಬ ಸದಸ್ಯರಿಗೂ ಉತ್ತಮ ಅವಕಾಶಗಳ ಆಕರ್ಷಣೆಯೊಡ್ಡಿ ಗಾಳ ಹಾಕಲಾಗಿದೆ.

ಜಗ್ಗದವರಿಗೆ ಸೆರೆಮನೆಯೇ ಗತಿ

ಇ.ಡಿ./ಸಿಬಿಐನ ಒತ್ತಡ ತಂತ್ರಗಳಿಗೆ ಮಣಿಯದವರಿಗೆ ಸೆರೆಮನೆಗಳು ಕಾಯುತ್ತಿವೆ. ಜಾರ್ಖಂಡ್ ಮುಖ್ಯಮಂತ್ರಿಯಾಗಿದ್ದಾಗಲೇ ಬಂಧಿತರಾದ ಹೇಮಂತ್ ಸೊರೇನ್, ಮತ್ತು ದೆಹಲಿ ಸಿಎಂ ಅರವಿಂದ ಕೇಜ್ರಿವಾಲ್‌ರಿಗೆ ಬಂಧನದ ಬೆದರಿಕೆ ಪ್ರಕರಣಗಳು ಇದಕ್ಕೆ ದೃಷ್ಟಾಂತಗಳು.

ಬಿಜೆಪಿ ಮಾಸ್ಟರ್ ಪ್ಲಾನ್

ಪ್ರತಿಪಕ್ಷವನ್ನು ನಾಶಮಾಡಿ ಏಕ ಪಕ್ಷ ಅಧಿಕಾರವನ್ನು ಸ್ಥಾಪಿಸುವುದು ಬಿಜೆಪಿ ನಾಯಕತ್ವದ ಉದ್ದೇಶವಾಗಿದೆ. 'ಅಸ್ಸಾಮ್‌ನಲ್ಲಿ ನಿಜವಾದ ಪ್ರತಿಪಕ್ಷ ಎಂಬುದೇ ಇಲ್ಲ' ಎಂದು ಮುಖ್ಯಮಂತ್ರಿ ಹಿಮಂತ ಬಿಶ್ವ ಶರ್ಮಾ ಹೇಳಿದ್ದಾರೆ. 'ಎಲ್ಲಾ ಶಾಸಕರು ರಾಜ್ಯ ಮತ್ತು ಕೇಂದ್ರ ಸರಕಾರಗಳನ್ನು ಬೆಂಬಲಿಸುವ ರಾಜ್ಯ ಇದಾಗಿದೆ' ಎಂದಿದ್ದಾರೆ.

ಈಗಷ್ಟೇ ಮುಗಿದಿರುವ ರಾಜ್ಯಸಭೆ ಚುನಾವಣೆಯಲ್ಲಿ ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಏನಾಯಿತೆಂಬುದನ್ನು ನೋಡಿದರೆ ಬಿಜೆಪಿ ಒಂದು ಮಾಸ್ಟರ್ ಪ್ಲಾನ್ ಪ್ರಕಾರ ವರ್ತಿಸುತ್ತಿದೆ ಎನ್ನುವುದು ಸಾಬೀತಾಗುತ್ತದೆ.

ಉತ್ತರ ಭಾರತದಲ್ಲಿ ಕಾಂಗ್ರೆಸ್ ಆಡಳಿತವಿರುವ ಏಕೈಕ ರಾಜ್ಯವಾದ ಹಿಮಾಚಲ ಪ್ರದೇಶದಲ್ಲಿ 68 ಸದಸ್ಯ ಬಲದ ವಿಧಾನಸಭೆಯಲ್ಲಿ ಕಾಂಗ್ರೆಸ್ 40 ಹಾಗೂ ಬಿಜೆಪಿ 25 ಶಾಸಕರನ್ನು ಹೊಂದಿವೆ. ಮೂವರು ಪಕ್ಷೇತರ ಶಾಸಕರಿದ್ದು ಅವರು ಕಾಂಗ್ರೆಸ್ ಸರಕಾರವನ್ನು ಬೆಂಬಲಿಸಿದ್ದರು. ಹಾಗಿದ್ದಾಗ್ಯೂ ರಾಜ್ಯಸಭೆ ಚುನಾವಣೆಯಲ್ಲಿ ಬಿಜೆಪಿ ಸದಸ್ಯ ಆಯ್ಕೆಯಾಗಿದ್ದಾರೆ. ಅಸೆಂಬ್ಲಿಯಲ್ಲಿ ಬಜೆಟ್ ಮಂಡಿಸುವ ಹೊಸ್ತಿಲಲ್ಲಿ ಕಾಂಗ್ರೆಸ್‌ನ ಸುಖು ಸರಕಾರ ಈ ವಿದ್ಯಮಾನದಿಂದಾಗಿ ಬಹಳ ಅಪಾಯಕಾರಿ ಸ್ಥಿತಿಗೆ ಬಂದು ನಿಂತಿದೆ. ಉತ್ತರ ಪ್ರದೇಶದಲ್ಲಿ ಚುನಾವಣೆ ನಡೆದ 10 ಸ್ಥಾನಗಳಲ್ಲಿ ಸಮಾಜವಾದಿ ಪಕ್ಷ (ಎಸ್‌ಪಿ) ಅಸೆಂಬ್ಲಿಯಲ್ಲಿ ಹೊಂದಿರುವ ಸಂಖ್ಯಾ ಬಲದ ಆಧಾರದಲ್ಲಿ ಮೂರು ಸ್ಥಾನಗಳನ್ನು ಸುಲಭವಾಗಿ ಗೆಲ್ಲಬಹುದಿತ್ತು. ಆದರೆ, ಎಸ್‌ಪಿಯ ಮುಖ್ಯ ಸಚೇತಕನ ಸಹಿತ ಏಳು ಶಾಸಕರು ಪಕ್ಷಾಂತರ ಮಾಡಿ ಬಿಜೆಪಿಗೆ ಮತ ಹಾಕಿದರು. ಈ ರೀತಿಯಾಗಿ, ಎರಡು ಹೆಚ್ಚುವರಿ ಸ್ಥಾನಗಳನ್ನು ಗೆಲ್ಲಲು ಬಿಜೆಪಿಗೆ ಸಾಧ್ಯವಾಯಿತು. ಹಾಗೂ ಹಿಮಾಚಲ ಪ್ರದೇಶದಲ್ಲಿ ರಾಜ್ಯ ಸರಕಾರದ ಅಸ್ತಿತ್ವಕ್ಕೇ ಬೆದರಿಕೆ ಹಾಕಲು ಕೂಡ ಸಾಧ್ಯವಾಗಿದೆ.

ಕಾಂಗ್ರೆಸ್‌ಗೆ ಆತಂಕ

ಈ ವಿದ್ಯಮಾನದಿಂದ ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕತ್ವ ಭಾರಿ ಕಳವಳಗೊಂಡಿರಬಹುದು. ಬಿಜೆಪಿಯ ಭ್ರಷ್ಟ ತಂತ್ರಗಳನ್ನು ಯಾರಾದರೂ ಖಂಡಿಸಬಹುದಾದರೂ ಕಾಂಗ್ರೆಸ್ ಪಕ್ಷ ನಿದ್ದೆ ಮಾಡುತ್ತಿತ್ತೇ ಹಾಗೂ ತನ್ನ ಸದಸ್ಯರಲ್ಲಿ ಏನು ನಡೆಯುತ್ತಿದೆ ಎನುವುದರ ಬಗ್ಗೆ ಅದಕ್ಕೆ ಏನೂ ಗೊತ್ತಿರಲಿಲ್ಲವೇ ಎಂಬ ನ್ಯಾಯಯುತ ಪ್ರಶ್ನೆಯೂ ಎದುರಾಗುತ್ತದೆ. ಕಾಂಗ್ರೆಸ್ ಪಕ್ಷದ ಹಾಲಿ ದುಸ್ಥಿತಿ ಏನೆಂಬುದು ಕಮಲ್ ನಾಥ್‌ರಂಥವರ ದೃಷ್ಟಾಂತದಿಂದ ಗೊತ್ತಾಗುತ್ತದೆ. ಮಧ್ಯ ಪ್ರದೇಶದಲ್ಲಿ ಪಕ್ಷದ ಮುಂಚೂಣಿಯಲ್ಲಿರುವ ನಾಥ್, ತಮ್ಮ ಹಿಂದೂತ್ವ ಒಲವನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದಾರೆ. ಕಳೆದ ವರ್ಷದ ಚುನಾವಣಾ ಹಿನ್ನಡೆಯ ನಂತರ ಬಿಜೆಪಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅವರು ಸಿದ್ಧರಾಗಿದ್ದರು. ಆದರೆ ಯಾವುದೋ ಕಾರಣಕ್ಕೆ ಅದು ಬಿದ್ದು ಹೋಯಿತು. ಇದು ಕಾಂಗ್ರೆಸ್ ನಾಯಕರ ಸತ್ವವಾದರೆ ಅದು ಯಾವತ್ತೂ ಬಿಜೆಪಿ–ಆರ್‌ಎಸ್‌ಎಸ್ ವಿರುದ್ಧ ದೃಢ ಹಾಗೂ ಗಂಭೀರ ಹೋರಾಟ ನೀಡಲು ಸಾಧ್ಯವಾಗುವುದಿಲ್ಲ.

ಬಿಜೆಪಿ ವಿರುದ್ಧ ಹೋರಾಟ ನಡೆಸಲು ಹಿಂದೂತ್ವ ಕೋಮುವಾದಿ ಶಕ್ತಿಗಳ ವಿರುದ್ಧ ಸೈದ್ಧಾಂತಿಕ ಮತ್ತು ರಾಜಕೀಯ ಎರಡೂ ವಿಭಾಗಗಳಲ್ಲಿ ದಿಟ್ಟ ಹಾಗೂ ಸ್ಥಿರವಾದ ಹೋರಾಟ ಅಗತ್ಯವಾಗಿದೆ. ಇದು ಪ್ರಜಾಪ್ರಭುತ್ವವನ್ನು ರಕ್ಷಿಸುವಲ್ಲಿ ಅಸ್ತಿತ್ವದ ಹೋರಾಟ ಎನ್ನುವುದನ್ನು ಪ್ರತಿಪಕ್ಷಗಳು ತಿಳಿದುಕೊಳ್ಳಬೇಕಿದೆ. ಮುಂಬರುವ ಲೋಕಸಭೆ ಚುನಾವಣಾ ಹೋರಾಟವನ್ನು ಕೋಮುವಾದಿ–ಕಾರ್ಪೊರೇಟ್ ಆಡಳಿತ ಮತ್ತು ಅವರು ಪ್ರಜಾಪ್ರಭುತ್ವಕ್ಕೆ ಒಡ್ಡಿರುವ ಅಪಾಯದ ವಿರುದ್ಧದ ಪ್ರಬಲ ಆಂದೋಲನವಾಗಿ ನೋಡಬೇಕು. ಅದರಿಂದ ಮಾತ್ರವೇ ಜನರನ್ನು ಜಾಗೃತಗೊಳಿಸಿ ಬಿಜೆಪಿಯನ್ನು ಸೋಲಿಸಬಹುದು.

ಅನು: ವಿಶ್ವ

ಹನಿಗವಿತೆ

ಮೊಳೆಗಾಲ!

ಮಳೆ–ಚಳಿ–
ಬಿಸಿಲ್ಗಾಲದ
ಪರಿವೆಯರಿಯದೇ
ಬೆವರು ಬಸಿವ
ಅನ್ನದಾತರ
ನಡೆ
ರಾಜಧಾನಿಯೆಡೆ

ನಿವೇದನೆಗೆ
ತಮ್ಮೆದೆಯ ವೇದನೆ

ಹಲಧಾರಿಗಳ ನಂಟು
ಮುರಿಯಲು
ಹಲ ಯತ್ನಗಳುಂಟು

ಪ್ರಭುಗಳ ಮಿದುಳಿಂದ
ಮೊಳೆತ ಕೊಳಕಿಂದ
ಸೃಷ್ಟಿಯಾಗಿಹುದು
ಮೊಳೆಗಾಲ!

–ವಿಶ್ವ

ಯುವಜನರ ನೋವು-ನಲಿವುಗಳಿಗೆ ದನಿಯಾದ ಸಮ್ಮೇಳನ





'ನಿರುದ್ಯೋಗ ಸಮಸ್ಯೆಗೂ ಕೋಮುವಾದಕ್ಕೂ ಸಂಬಂಧವಿದೆ'

ಡಿ.ವೈ.ಎಫ್.ಐ. 12ನೇ ರಾಜ್ಯ ಸಮ್ಮೇಳನದಲ್ಲಿ ನ್ಯಾ.ಎಚ್.ಎನ್. ನಾಗಮೋಹನದಾಸ್

ಭಾರತ ಪ್ರಜ್ಞಾಸತ್ತಾತ್ಮಕ ಯುವಜನ ಫೆಡರೇಷನ್(ಡಿ.ವೈ.ಎಫ್.ಐ.)ನ 12ನೇ ಕರ್ನಾಟಕ ರಾಜ್ಯ ಸಮ್ಮೇಳನವು ಸಾಮರಸ್ಯ, ಉದ್ಯೋಗ, ಘನತೆಯ ಬದುಕಿಗಾಗಿ ಎಂಬ ಘೋಷಣೆಯೊಂದಿಗೆ ಫೆಬ್ರವರಿ 25,26,27, 2024 ರಂದು ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದ ಕಲ್ಲಾಪು ಬಳಿಯ ಯೂನಿಟಿ ಸಭಾಂಗಣದಲ್ಲಿ ಜರುಗಿತು. ಆಕರ್ಷಕ ಮೆರವಣಿಗೆ, ಮಹತ್ವದ ಉಪನ್ಯಾಸ, ಚರ್ಚೆ, ನಿರ್ಣಯಗಳು, ತೀರ್ಮಾನಗಳ ಮೂಲಕ ಯುವಜನ ಸಮ್ಮೇಳನ ಹೊಸ ಬಾಷ್ಯ ಬರೆಯಿತು. ಒಂದು ವರದಿ.

ಮೊದಲಿಗೆ ರಾಜ್ಯ ಸಮ್ಮೇಳನದ ಧ್ವಜಸ್ಥಂಭ ಹಾಗೂ ಹುತಾತ್ಮ ಜ್ಯೋತಿ ಮೆರವಣಿಗೆ ಹುತಾತ್ಮ ಸಂಗಾತಿಗಳಾದ ಕಾಮ್ರೇಡ್ ಶ್ರೀನಿವಾಸ್ ಬಜಾಲ್, ಕಾಮ್ರೇಡ್ ಭಾಸ್ಕರ ಕುಂಬ್ಳೆ ಕೋಮು ಶಕ್ತಿಗಳಿಗೆ ಬಲಿಯಾದ ಬಜಾಲ್ ಹಾಗೂ ಎಕ್ಕೂರಿನಿಂದ ಹೊರಟು ಸಮ್ಮೇಳನದ ಸ್ಥಳದಲ್ಲಿ ಸಮಾರೋಪಗೊಂಡಿತು. ಸಮ್ಮೇಳನದ ಅಂಗವಾಗಿ ಮಂಗಳೂರಿನ ತುಂಬೆಲ್ಲ ಕಣ್ಣು ಹಾಯಿಸಿದಷ್ಟೂ ಶ್ವೇತ ಪತಾಕೆಗಳ ಹಾರಾಟದ ಕಲರವ ಜನರನ್ನು ಆಕರ್ಷಿಸಿತು. ಸಮ್ಮೇಳನದ ಕೊನೆಯ ದಿನ ನಡೆದ ಮೆರವಣಿಗೆ ಜನರನ್ನು ಸೆಳೆಯಿತು. ಇತ್ತೀಚೆಗೆ ಕರಾವಳಿಯಲ್ಲಿ ನಡೆದ ಮೆರವಣಿಗೆಗಳು ಜನರನ್ನು ಘಾಸಿಗೊಳಿಸಿದ್ದೆ ಹೆಚ್ಚು. ಆದರೆ ಡಿ.ವೈ.ಎಫ್.ಐ. ಮೆರವಣಿಗೆ ಜನರೆಲ್ಲ ನಿಂತು ನೋಡುವಂತೆ ಮಾಡಿತು. ಹುಲಿ ಕುಣಿತ, ಧಫ್ ನೃತ್ಯ, ಘೋಷಣೆಗಳ, ಶಿಸ್ತಿನ ಮೆರವಣಿಗೆಯನ್ನು ನೋಡಿ ಜನ ಕಣ್ಣು ತುಂಬಿಕೊಂಡರು, ಅವರ ಜೇಬಿನಲ್ಲಿದ್ದ ಮೊಬೈಲ್ ಹೊರತೆಗೆದು ವಿಡಿಯೋ ಮಾಡುವುದು, ಫೋಟೊ ತೆಗೆಯುವುದು ಮುಂತಾದ ದೃಶ್ಯಗಳು ಸಾಮಾನ್ಯವಾಗಿದ್ದವು. ಫೆಬ್ರವರಿ 25 ರಂದು ಬೆಳಿಗ್ಗೆ ಸಮ್ಮೇಳನದ ಪ್ರತಿನಿಧಿ ಅಧಿವೇಶನ ಜರುಗಿತು.

ವರದಿ: **ಗುರುರಾಜ ದೇಸಾಯಿ**

ನಿರುದ್ಯೋಗ ಸಮಸ್ಯೆಗೆ ಬಹುಮುಖ ಆಯಾಮವಿದೆ. -ನ್ಯಾ ಎಚ್.ಎನ್. ನಾಗಮೋಹನದಾಸ್

ನಿರುದ್ಯೋಗ ಯುವಜನರನ್ನು ಕಾಡುತ್ತಿರುವ ಗಂಭೀರ ಸಮಸ್ಯೆಯಾಗಿದೆ. ಐವತ್ತು ವರ್ಷಗಳಲ್ಲಿ ದೇಶ ಕಾಣದ ನಿರುದ್ಯೋಗ ಪ್ರಮಾಣ ಪ್ರಸ್ತುತ ದೇಶದಲ್ಲಿದೆ. ನಮ್ಮಲ್ಲಿ ವಿದ್ಯೆ ಇದೆ, ಪದವಿ ಇದೆ ಆದರೆ ಉದ್ಯೋಗವಿಲ್ಲ. ನಮ್ಮ ವಿದ್ಯಾರ್ಹತೆಗೆ ತಕ್ಕ ಉದ್ಯೋಗವು ಸಿಗುತ್ತಿಲ್ಲ. ಪದವಿ ಇದ್ದರೂ ಏನು ಪ್ರಯೋಜನವಿಲ್ಲದಂತಾಗಿದೆ. ಎಲ್ಲ ವಲಯದಲ್ಲಿ ಅರ್ಹ ಅಭ್ಯರ್ಥಿಗಳಿಲ್ಲ. ಅಸಂಪೂರ್ಣೋದ್ಯೋಗ (underemployment) ಕೂಡಾ ಒಂದು ಸಮಸ್ಯೆ. ನಿರುದ್ಯೋಗ ಸಮಸ್ಯೆಗೂ ಕೋಮುವಾದಕ್ಕೂ ಸಂಬಂಧವಿದೆ ಎಂದು ಜಸ್ಟೀಸ್ ಎಚ್.ಎನ್. ನಾಗಮೋಹನದಾಸ್ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರು.

ಜಗತ್ತಿನ ಒಟ್ಟು ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗ ಯುವಜನರಿದ್ದಾರೆ. ವಿಮೋಚನಾ ಹೋರಾಟದಿಂದ ಹಿಡಿದು ಇಲ್ಲಿಯವರಿಗೆ ಭಾರತಕ್ಕಾಗಿ ಯುವಜನರ ಕೊಡುಗೆ ಬಹಳ ಮಹತ್ವದ್ದಾಗಿದೆ. ಅಬ್ಬಕ್ಕ ರಾಣಿಯಂತಹ ಕೆಚ್ಚಿನ ನಾಯಕಿಯ ಜಾಗದಲ್ಲಿ ಈ ಸಮ್ಮೇಳನ ನಡೆಯುತ್ತಿರುವುದು ಸಂತಸದ ಸಂಗತಿ.

ಯುವಜನರೆಂದರೆ ಬದಲಾವಣೆ, ಪ್ರಗತಿ, ಅನ್ಯಾಯ, ಶೋಷಣೆ, ದಬ್ಬಾಳಿಕೆ ವಿರುದ್ಧ ಹೋರಾಡುವ ಶಕ್ತಿಯಾಗಿದೆ. ಈ ಶಕ್ತಿ ಬಲಗೊಳ್ಳಲಿ ಎಂದ ದಾಸ್ ಅವರು ಎಲ್ಲಾ ಮಕ್ಕಳು ಒಂದೇ ಎನ್ನುತ್ತೇವೆ. ಆದರೆ ಶಿಕ್ಷಣದಲ್ಲಿ ಯಾಕೆ ತಾರತಮ್ಯ?. ಸಮಾನ ಶಿಕ್ಷಣದ ನೀತಿ, ಗುಣಾತ್ಮಕ ಶಿಕ್ಷಣ ನೀಡುವ ವ್ಯವಸ್ಥೆ ಜಾರಿ ಬರಬೇಕಾಗಿದೆ. ಹೊಸ ಶಿಕ್ಷಣ ನೀತಿಯ ಬಗ್ಗೆ ಚರ್ಚೆಯಾಗಬೇಕು ಎಂದರು. ಮುಂದುವರಿದು ಮಾತನಾಡಿದ ದಾಸ್ ಅವರು ಉದ್ಯೋಗ ಸೃಷ್ಟಿ ಕಡಿಮೆಯಾದಂತೆ ಅಪರಾಧೀಕರಣ, ಕೋಮುವಾದ, ಭಯೋತ್ಪಾದನೆ, ವೇಶ್ಯಾವಾಟಿಕೆ ಮೊದಲಾದವು ಹೆಚ್ಚಾಗುತ್ತವೆ ಎಂದು ವಿಶ್ಲೇಷಿಸಿದರು.

ಸಂವಿಧಾನದ ಮೂಲಕ ಪ್ರಜಾಪ್ರಭುತ್ವದಲ್ಲಿ ಬದಲಾವಣೆ ತರಲಾಗಿದೆ. ದಲಿತರು, ಮಹಿಳೆಯರು ಈ ದೇಶದ ಅಭಿವೃದ್ಧಿಯಲ್ಲಿ ದುಡಿಯಲು ಸಾಧ್ಯವಾಗಿದೆ. ಭಾರತೀಯರಿಗೆ ಮಹಾನ್ ಗ್ರಂಥ ಸಂವಿಧಾನ. ಇದನ್ನು ಓದಬೇಕು, ಅರ್ಥೈಸಿಕೊಳ್ಳಬೇಕು, ಅದರಂತೆ ನಡೆದುಕೊಳ್ಳಬೇಕು ಎಂದು ಕರೆ ನೀಡಿದರು. ಭಾರತ ಇನ್ನೂ ಬಡತನ, ನಿರುದ್ಯೋಗ, ಕೋಮುವಾದಗಳ ಬಲೆಯೊಳಗೆ ಸಿಕ್ಕು ನರಳುತ್ತಿದೆ. ಇದರ ವಿರುದ್ಧ ಯುವಜನರು ಹೋರಾಡಬೇಕಿದೆ ಎಂದ ದಾಸ್ ಅವರು ನನ್ನೊಳಗೆ ಬದಲಾವಣೆ, ಗಟ್ಟಿತನ, ಧೈರ್ಯ, ಬದ್ಧತೆ ತಂದು ಕೊಟ್ಟಿದ್ದು ಡಿವೈಎಫ್ಐ ಸಂಘಟನೆ, ನಾಲ್ಕು ದಶಕಗಳ ಹಿಂದೆ ನಾನು ರಾಜ್ಯವೆಲ್ಲ ಸುತ್ತಾಡಿ ಯುವಜನರನ್ನು ಸಂಘಟಿಸಿದ್ದೆ ಎಂದು ಹಿಂದಿನ ಹೋರಾಟಗಳನ್ನು ಮೆಲಕು ಹಾಕಿದರು.

ಸಂವಿಧಾನ ಉಳಿವು: ಜಾಹೀರಾತು ನೀಡಿದರೆ ಸಾಕಾಗದು

ವಿಶ್ರಾಂತ ಜಿಲ್ಲಾಧಿಕಾರಿ (ಐಎಎಸ್), ಸ್ವಾಗತ ಸಮಿತಿಯ ಗೌರವಾಧ್ಯಕ್ಷರೂ ಆದ ಎ.ಬಿ. ಇಬ್ರಾಹಿಂ, ಮಾತನಾಡಿ. "ಜನರು ಭ್ರಮಾಲೋಕದಲ್ಲಿದ್ದು ಮತ ಚಲಾಯಿಸುತ್ತಿದ್ದಾರೆ. ಕರಾವಳಿಯನ್ನು ಬುದ್ಧಿವಂತರ ಜಿಲ್ಲೆ ಎಂದು ಕರೆಯಲಾಗುತ್ತದೆ. ಆದರೆ ಪ್ರಸಕ್ತ ಸ್ಥಿತಿಯಲ್ಲಿ ನಾವು ಬುದ್ಧಿವಂತರು ಮತ್ತು ಅಕ್ಷರಸ್ಥರ ಬಗೆಗೆ ಬೇರೆಯೇ ವ್ಯಾಖ್ಯಾನವನ್ನು ನೀಡಬೇಕಾಗಿದೆ" ಎಂದು ಹೇಳಿದರು. "ಟಿಪ್ಪು ಸುಲ್ತಾನ್ ಬ್ರಿಟಿಷರ ವಿರುದ್ಧ ಹೋರಾಡಿದ ನೆಲವಿದು, ರಾಣಿ ಅಬ್ಬಕ್ಕರ ಮಾತೃ ಪ್ರಧಾನ ಸಮಾಜವಿದು. ಇದು ನಮಗೆ ಮಾದರಿಯಾಗಬೇಕಾದ ನೆಲ. ಇದು ಶೇಕಡ 100 ರಷ್ಟು ಅಕ್ಷರಸ್ಥರು ಇರುವ, ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ನಮ್ಮ ಜಿಲ್ಲೆ ಜಗತ್ತಿಗೆ ಮಾದರಿಯಾಗಬೇಕಾದ ಜಿಲ್ಲೆ. ಆದರೆ ಕಳೆದ ಮೂರು ದಶಕಗಳಲ್ಲಿ ನಮ್ಮ ಜಿಲ್ಲೆ, ನಗರ ಕುಖ್ಯಾತಿ ಪಡೆಯುತ್ತಾ ಬಂದಿರುವ ನೆಲವಾಗಿದೆ ಎಂದರು. ಸಂವಿಧಾನ ಉಳಿಸಬೇಕೆಂದು ಪೇಪರ್‌ನ ಮೊದಲ ಪುಟದಲ್ಲಿ ಜಾಹೀರಾತು ನೀಡಿದರೆ ಸಾಕಾಗದು. ಸಂವಿಧಾನ ಉಳಿಸಲು ಚಳುವಳಿ ಕಟ್ಟಬೇಕು, ಹೋರಾಡಬೇಕು ಎಂದು ತಿಳಿಸಿದರು. ಮಂಗಳೂರನ್ನು ಕೋಮುವಾದಿಗಳ ಪ್ರಯೋಗಶಾಲೆ ಎಂದು





ಸಮ್ಮೇಳನದ ಆರಂಭದಲ್ಲಿ ಧ್ವಜಾರೋಹಣ, ಸಮ್ಮೇಳನದ ಕೊನೆಯ ದಿನ 'ಯೂತ್ ಮಾರ್ಚ್'





ಸಮ್ಮೇಳನದ ಪೂರ್ವಭಾವಿಯಾಗಿ ಹುತಾತ್ಮ ಜ್ಯೋತಿ, 'ಯುವಜನರ ಮೆರವಣಿಗೆ'ಯಲ್ಲಿ 'ಪುಲಿ ಕುಣಿತ'.







ರಾಣಿ ಅಬ್ಬಕ್ಕ, ಡಾ. ಬಿ.ಆರ್. ಅಂಬೇಡ್ಕರ್, ನಾರಾಯಣ ಗುರುಗಳು ಮುಂತಾದದವರ ಸ್ತಬ್ಧ ಚಿತ್ರಗಳು.

ಕರೆಯಲಾಗುತ್ತದೆ. ಆದರೆ ಅದು ತಪ್ಪು. ಪ್ರಯೋಗ ಮುಗಿದಿದೆ, ಯಶಸ್ವಿಯಾಗಿದೆ. ಈಗ ಮಂಡ್ಯ, ಇನ್ಯಾವುದೋ ಜಿಲ್ಲೆಗೆ ವಿಸ್ತರಿಸಲಾಗುತ್ತಿದೆ ಎಂದು ಅಭಿಪ್ರಾಯಿಸಿದರು. ಎಲ್ಲಾ ಸಮುದಾಯ ಇರುವ ಕರಾವಳಿ ನೆಲದಲ್ಲಿ ಕೋಮು ಸೌಹಾರ್ದತೆ ಯಾಕೆ ನಶಿಸಿಹೋಗುತ್ತಿದೆ ಎಂಬ ಚರ್ಚೆಯಾಗಬೇಕಿದೆ ಎಂದರು.

ಡಿ.ವೈ.ಎಫ್.ಐ. ಅಖಿಲ ಭಾರತ ಸಮಿತಿ ಸದಸ್ಯ ಜ್ಯಾಕ್.ಸಿ. ಥಾಮಸ್ ಮಾತನಾಡಿ, "ಕಾನೂನುಬಾಹಿರ ಆಗಿರುವುದನ್ನು ಕಾನೂನಿನ ಚೌಕಟ್ಟಿನ ಒಳಗೆ ತಂದದ್ದಕ್ಕೆ ಉದಾಹರಣೆ ಎಂದರೆ, ಅದುವೇ ಚುನಾವಣಾ ಬಾಂಡ್ ವ್ಯವಸ್ಥೆಯಾಗಿದೆ. ಇತ್ತೀಚೆಗೆ ಚುನಾವಣಾ ಬಾಂಡ್ ಅನ್ನು ದೇಶದಲ್ಲಿ ನಿಷೇಧ ಮಾಡಲಾಗಿದೆ. ಚುನಾವಣಾ ಬಾಂಡ್ ಮೂಲಕ ಯಾವುದೇ ಪಕ್ಷ ಲೆಕ್ಕವಿಲ್ಲದೆ ಕೋಟ್ಯಾಂತರ ರೂಪಾಯಿ ಪಡೆಯಬಹುದಾಗಿತ್ತು. ಇದರ ಖಾತೆಯನ್ನು ಎಸ್‌ಬಿಐನಲ್ಲಿ ತೆರೆಯಲಾಗುತ್ತದೆ. ಆದರೆ ಈ ದೇಶದಲ್ಲಿ ಚುನಾವಣಾ ಬಾಂಡ್‌ಗಾಗಿ ಖಾತೆ ಇಲ್ಲದ ಏಕೈಕ ಪಕ್ಷ ಎಡ ಪಕ್ಷ," ಎಂದು ತಿಳಿಸಿದರು.

ನಾವು ಜನರ ಹೃದಯದಲ್ಲಿದ್ದೇವೆ–ಮುನೀರ್

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಿ.ವೈ. ಎಫ್.ಐ. ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿ, "ನೀವು ಪಾರ್ಲಿಮೆಂಟ್‌ನಲ್ಲಿ ಇಲ್ಲ, ನೀವು ಎಲ್ಲಿದ್ದೀರಿ ಎಂದು ನಮ್ಮನ್ನು ಕೇಳುತ್ತೀರಿ. ನೀವು ಬಿಲ್ಡರ್‌ಗಳ, ದಣಿಗಳ ಜೊತೆ ಇರಬಹುದು. ಆದರೆ ನಾವು ಪ್ರಸ್ತುತ ಮುಚ್ಚಲಾದ ಸುರತ್ಕಲ್ ಟೋಲ್‌ಗೇಟ್‌ನಲ್ಲಿ, ಶವವನ್ನು ಬಂಧನದಲ್ಲಿಟ್ಟು ಹಣಕ್ಕಾಗಿ ಕುಟುಂಬದವರನ್ನು ಸತಾಯಿಸುವ ಖಾಸಗಿ ಆಸ್ಪತ್ರೆಗಳ ಹೊರಗೆ ಹೋರಾಟದಲ್ಲಿ, ಕುಡಿಯುವ ನೀರಿಗಾಗಿ ನಡೆದ ಚಳುವಳಿಯಲ್ಲಿ, ಎಂ.ಆರ್.ಪಿ.ಎಲ್.ನಲ್ಲಿ ಸ್ಥಳೀಯರಿಗೆ ಉದ್ಯೋಗ

ಪುಟ 14 ಕ್ಕೆ

ಕರಾವಳಿಗೆ ಚಲನೆಯನ್ನು ಕೊಟ್ಟವರು ಕ್ರಿಶ್ಚಿಯನ್ ಮಿಷನರಿಗಳು–ಪ್ರೊ. ಪುರುಷೋತ್ತಮ ಬಿಳಿಮಲೆ

ಕರಾವಳಿಯಲ್ಲಿ ಇತಿಹಾಸ ಬರೆದವರಲ್ಲಿ ಪ್ರಮುಖ ಪಾತ್ರವನ್ನು ಬಿ.ಎ. ಸಾಲೆತ್ತೂರು, ಗೋವಿಂದ ಪೈ ಮೊದಲಾದವರುಗಳು ಹೊಂದಿದ್ದಾರೆ. ಆದರೆ ನಮ್ಮ ಕರಾವಳಿಯ ಇತಿಹಾಸವನ್ನು ಕಟ್ಟಿದವರು ಯಾರು ಎಂಬ ಪ್ರಶ್ನೆ ಬಂದಾಗ ಅದರಲ್ಲಿ ಮೊದಲ ಸ್ಥಾನವನ್ನು ಪಡೆಯುವುದು ಬಾಸೆಲ್ ಮಿಷನರಿಗಳು. ಕರಾವಳಿಗೆ ಒಂದು ಚಲನೆಯನ್ನು ಕೊಟ್ಟವರು ಮಿಷನರಿಗಳು ಎಂದು ಹಿರಿಯ ಚಿಂತಕ ಪುರುಷೋತ್ತಮ ಬಿಳಿಮಲೆ ಹೇಳಿದರು.

ಡಿವೈಎಫ್‌ಐನ 12 ನೇ ರಾಜ್ಯ ಸಮ್ಮೇಳನದ ಎರಡನೆಯ ದಿನ ನಡೆದ "ಕರಾವಳಿ ಕಟ್ಟಿದ ಬಗೆ" ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಅವರು, ಪಾರಂಪರಿಕತೆಯನ್ನು ಸಾರ್ವತ್ರಿಕಗೊಳಿಸಿದ ಕ್ರಾಂತಿ ಕರಾವಳಿಯಲ್ಲಿ ಮಿಷನರಿಗಳು ಮಾಡಿವೆ. ಈ ಮಿಷನರಿಗಳಿಗೆ ನಾವೆಲ್ಲರೂ ಅಬಾರಿಯಾಗಿರಬೇಕು. ನಮ್ಮಲ್ಲಿರುವ ಮಠಗಳು ಸಾವಿರಾರು ವರ್ಷಗಳ ಹಿಂದಿನದ್ದು ಎಂದು ಹೇಳಲಾಗುತ್ತದೆ. ಆದರೆ ನಮ್ಮ ಕರಾವಳಿಯಲ್ಲಿ ಮೊದಲ ಬಾರಿಗೆ ಮುದ್ರಣಾಲಯವನ್ನು ಈ ಮಠದವರು ಹಾಕಿದ್ದಾರಾ?. ಅದಕ್ಕಾಗಿ ಮಿಷನರಿಗಳು ಬರಬೇಕಾಯಿತು. ಈ ನಿಟ್ಟಿನಲ್ಲಿ ಮಿಷನರಿಗಳ ಕೊಡುಗೆಯನ್ನು ನಾವು ಸ್ಮರಿಸಬೇಕು ಎಂದು ಶ್ಲಾಘಿಸಿದರು.

ಈ ಹಿಂದೆ ಸಮಾಜಕ್ಕೆ ಕೊಡುಗೆ ನೀಡಿದವರು ಎಂದರೆ ಮಂಗಳೂರಿಗರು ಎಂಬಂತೆ ಆಗಿದ್ದರು. ಆದರೆ ಈಗ ಯಾವುದೇ ಜಿಲ್ಲೆ, ಪ್ರದೇಶದಲ್ಲಿ ಗಲಾಟೆ, ಗಲಭೆ ನಡೆದರೂ ಆ ಜಿಲ್ಲೆಯನ್ನು "ಮಂಗಳೂರಿನಂತೆ" ಎಂದು ಹೋಲಿಕೆ ಮಾಡಲಾಗುತ್ತದೆ. ಆ ಮಟ್ಟಿಗೆ ನಮ್ಮ ನಗರ ತಲುಪಿದೆ ಎಂದು ವಿಷಾಧ ವ್ಯಕ್ತಪಡಿಸಿದರು.

ಒಂದು ಮೇಲ್ಸೆತುವೆ ನಿರ್ಮಾಣ ಮಾಡಲು ಎರಡು ಬಾರಿ ಗೆದ್ದು ಬಂದ ಎಂ.ಎಲ್.ಎ.ಗಳ ನಡುವೆ ನಾವು ಶ್ರೀನಿವಾಸ ಮಲ್ಯರ ಕೊಡುಗೆಯನ್ನು ನೆನೆಯಬೇಕು ಎಂದರು. ಜಾತಕವನ್ನು ಬರೆಯುವಾಗ ಎಂದಿಗೂ ಕೂಡಾ ಬ್ರಾಹ್ಮಣರೇತರಿಗೆ ವಿದ್ಯೆ ಇಲ್ಲ ಎಂದು ಬರೆಯಲಾಗುತ್ತದೆ. ನನಗೂ ಹಾಗೆಯೇ ಬರೆಯಲಾಗಿತ್ತು. ಆದರೆ ಆ ಜ್ಯೋತಿಷಿ ಬರೆದ ಜಾತಕಕ್ಕೆ ಸಡ್ಡು ಹೊಡೆದವರು ನಮ್ಮ ತಾಯಿ. ನನಗೆ ತನ್ನ ಕಿವಿಯೋಲೆ ಅಡವಿಟ್ಟು ವಿದ್ಯೆ ನೀಡಿದರು. ಇಂದು ನಾನು ಪ್ರೊಫೆಸರ್ ಆಗಿ ಬೆಳೆದಿದ್ದೇನೆ ಎಂದು ತಿಳಿಸಿದರು. ಕನ್ನಡ ಪರ ಹೋರಾಟಗಾರ ರಮೇಶ್ ಬೆಲ್ಲದಕೊಂಡ ಪ್ರತಿಕ್ರಿಯೆ ನೀಡಿದರು.

ಸಮ್ಮೇಳನವು ಅಂಗೀಕರಿಸಿದ ಹತ್ತು ಮಹತ್ವದ ನಿರ್ಣಯಗಳು

1. ಉದ್ಯೋಗದ ಮೂಲ ಭೂತ ಹಕ್ಕಿಗಾಗಿ.
2. ಜಾತಿವಾದ, ಕೋಮುವಾದ ವಿರೋಧಿಸಿ.
3. ಖಾಸಗೀ ರಂಗದಲ್ಲಿ ಮೀಸಲಾತಿ ಜಾರಿಗೆ ಒತ್ತಾಯಿಸಿ.
4. ಯುವತಿಯರ, ಮಹಿಳೆಯರ ಮೇಲಿನ ದೌರ್ಜನ್ಯ ಖಂಡಿಸಿ,
5. ಸಂವಿಧಾನ, ಪ್ರಜಾಪ್ರಭುತ್ವ ಅಭಿವ್ಯಕ್ತಿ ಸ್ವಾತಂತ್ರ್ಯಗಳ ರಕ್ಷಣೆಗಾಗಿ,
6. ಗಲ್ಫ್ ಸೇರಿದಂತೆ ವಿದೇಶದಲ್ಲಿ ದುಡಿಯುವ ಉದ್ಯೋಗಿಗಳ, ವ್ಯಾಪಾರಿಗಳ ಕಲ್ಯಾಣ ಯೋಜನೆ ಜಾರಿಗಾಗಿ.
7. ಸಮಾನ ಶಿಕ್ಷಣ ನೀತಿ ಜಾರಿಗಾಗಿ.
8. ಸೌಹಾರ್ದತೆ ಐಕ್ಯತೆ ಸಮಗ್ರತೆ ರಕ್ಷಣೆಗಾಗಿ.
9. ಸಮಾನ ನಾಗರಿಕ ಸಂಹಿತೆ(ಯು.ಸಿ.ಸಿ.), ಪೌರತ್ವ ತಿದ್ದುಪಡೆ ಕಾಯ್ದೆ(ಸಿ.ಎ.ಎ.) ವಿರೋಧಿಸಿ.
10. ಅಲ್ಪಸಂಖ್ಯಾತರು ಹಾಗೂ ಅಲ್ಪಸಂಖ್ಯಾತರ ಸಂಸ್ಥೆಗಳ ಮೇಲಿನ ದಾಳಿ ಖಂಡಿಸಿ.

ಫೆ.27, 2024 ರ ಬಹಿರಂಗ ಸಭೆಯ ದೃಶ್ಯ, ಕಲಾವಿದ ಪ್ರಕಾಶ್ ರಾಜ್ ಮಾತನಾಡುತ್ತಿದ್ದಾರೆ.





ಈ ಹಿಂದೆ ಗುಹೆಗೆ, ಈಗ ನೀರಿಗೆ, ಮುಂದಿನ ಬಾರಿ ಚಂದ್ರನಲ್ಲಿಗೆ – ಪ್ರಕಾಶ ರೈ

ನಮ್ಮ ದೇಶದಲ್ಲೊಬ್ಬ ನಟನಿದ್ದಾನೆ. 2019 ರಲ್ಲಿ ಗುಹೆಗೆ ಹೋಗಿದ್ದರು. ಈ ಬಾರಿ ನೀರಿಗೆ ಹೋದರು. ಮುಂದಿನ ಬಾರಿ ಚಂದ್ರನ ಮೇಲೆ ನಿಲ್ಲುತ್ತಾರೆ. ಇನ್ನಷ್ಟು ಆಳಕ್ಕೆ ಇಳಿದಿದ್ದರೆ ಭಾರತದ ಸಮಸ್ಯೆಗಳಾದರೂ ಕಾಣುತ್ತಿದ್ದವು ಎಂದು ಬಹುಭಾಷಾ ನಟ ಪಕ್ರಾಶ್ ರಾಜ್ ಅವರು ಮೋದಿ ಹೆಸರೇಳದೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದರು. ಮಂಗಳೂರಿನ ತೊಕ್ಕೊಟ್ಟಿನ ಯೂನಿಟಿ ಹಾಲ್‌ನ ಮೈದಾನದಲ್ಲಿ ಫೆಬ್ರವರಿ 27 ರಂದು ಡಿವೈಎಫ್‌ಐ ನ 12 ನೇ ರಾಜ್ಯ ಸಮ್ಮೇಳನದ ಬಹಿರಂಗ ಸಭೆಯಲ್ಲಿ ಪ್ರಕಾಶ್ ರಾಜ್ ಮಾತನಾಡಿದರು.

ನಾನು ಜನರ ಪಕ್ಷ. ಯಾಕೆಂದರೆ ನಾನು ಕಲಾವಿದ. ಕಲಾವಿದನಾಗಿ ನಾನು ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ಗೊತ್ತಿದೆ. ಕಲಾವಿದ ಮಾತನಾಡಬೇಕು, ಕಲಾವಿದ ಮೌನವಾದರೆ ಸಮಾಜವೇ ಮೌನವಾದಂತೆ. ಹಾಗಾಗಿ ನಾನು ಮಾತನಾಡುತ್ತೇನೆ. ಜನರ ಸಹೃದಯ ಸಿಕ್ಕಿದೆ ಎಂದರು.

ಆರ್.ಎಸ್.ಎಸ್., ಬಿ.ಜೆ.ಪಿ.ಗಳು ಕಿಡ್ನ್ಯಾಪ್ ಪಕ್ಷಗಳು. ಭಗತ್ ಸಿಂಗ್‌ನನ್ನು ಕಿಡ್ನ್ಯಾಪ್ ಮಾಡಲು ಪ್ರಯತ್ನಿಸಿದರು. ವಲ್ಲಭ ಬಾಯಿ ಪಟೇಲ್‌ರನ್ನು ಕಿಡ್ನ್ಯಾಪ್ ಮಾಡಿ ಮೂರ್ತಿಯನ್ನಾಗಿಸಿದ್ದಾರೆ. ಕೋಟಿ ಚೆನ್ನಯ್ಯರನ್ನು ರಾಮ–ಲಕ್ಷ್ಮಣ ಎಂದು ಕಿಡ್ನ್ಯಾಪ್ ಮಾಡಲು ಬಂದರು. ಕರಾವಳಿಯ ಜನ ಅವರಿಗೆ ಒದ್ದು ಬುದ್ದಿ ಕಲಿಸಿದರು ಎಂದರು.

ದೇಹಕ್ಕಾದ ಗಾಯ ಗುಣವಾಗುತ್ತದೆ. ಆದರೆ ಸಮಾಜಕ್ಕಾದ ಗಾಯ ಗುಣವಾಗದು. ನಾವು ಸುಮ್ಮನಿದ್ದಷ್ಟು ಸಮಾಜದ ಗಾಯ ಹೆಚ್ಚಾಗುತ್ತೆ. ಅದರಲ್ಲೂ ದನಿ ಇಲ್ಲದವರಿಗೆ, ಅಲ್ಪಸಂಖ್ಯಾತರಿಗೆ ಆಗುವ ಗಾಯಗಳು ಅಧಿಕವಾಗುತ್ತದೆ. ಯಾಕೆಂದರೆ ನಮ್ಮ ಬೆರಳು ಕಡಿದರೆ ಅದು ನಮ್ಮ ದೇಹಕ್ಕಾಗುವ ನೋವು. ಆದರೆ ಏಕಲವ್ಯನ ಬೆರಳು ಕಡಿದರೆ ಅದು ಸಮಾಜಕ್ಕಾಗುವ ನೋವು ಎಂದು ಹೇಳಿದರು. ಮೋದಿ ತಿನ್ನುವ ಅಣಬೆ, ಹಾಕುವ ಬಟ್ಟೆ, ತಿರುಗಾಟ ಎಲ್ಲವೂ ನಾವು ಕಟ್ಟುತ್ತಿರುವ ತೆರಿಗೆಯಿಂದ. ಯುವಜನರಿಗೆ ಕೆಲಸ ಇಲ್ಲ, ಹಾಗಾಗಿ ಪ್ರಧಾನಿಯವರ ವಿರುದ್ಧ ಯುವಜನತೆ ಪ್ರತಿಭಟಿಸುತ್ತಿದೆ ಎಂದು ತಿಳಿಸಿದರು.

ದೇಶದ ಸ್ವಾತಂತ್ರ್ಯಕ್ಕಾಗಿ ಈ ಹಿಂದೆ ನಾಯಕರು ಉಪವಾಸ ಮಾಡಿದ್ದರು. ಆದರೆ ಈಗ ದೇವಸ್ಥಾನ ಉದ್ಘಾಟನೆಗಾಗಿ ಉಪವಾಸ ಮಾಡುವ ನಾಯಕರು ಇದ್ದಾರೆ ಎಂದ ಪ್ರಕಾಶ್ ರಾಜ್ ಒಂದು ದೇಶದಲ್ಲಿ ಅಲ್ಪಸಂಖ್ಯಾತರನ್ನು ನೋಡಿಕೊಳ್ಳುವುದು, ಕಾಪಾಡುವುದೇ ಬಹುಸಂಖ್ಯಾತರ ಹೊಣೆ. ಪ್ರಜಾಪ್ರಭುತ್ವದಲ್ಲಿ ಸೂಕ್ಷ್ಮತೆ ಇರಬೇಕು. ಎಲ್ಲರೂ ಜೊತೆಯಾಗಿ ದಡ ಸೇರಿದರೆ ಮಾತ್ರ ಮೆರವಣಿಗೆ ಎಂದರು.

ಡಿ.ವೈ.ಎಫ್.ಐ. ರಾಷ್ಟ್ರಾಧ್ಯಕ್ಷರು ಹಾಗೂ ರಾಜ್ಯ ಸಭಾ ಸದಸ್ಯರೂ ಆದ ಎ.ಎ. ರಹೀಮ್ ಮಾತನಾಡಿ, ಆರ್.ಎಸ್.ಎಸ್.ನ ಅಜೆಂಡಾವಾದ 'ಒಂದು ರಾಷ್ಟ್ರ, ಒಂದು ಭಾಷೆ, ಒಂದು ಸಂಸ್ಕೃತಿ' ಎಂಬುವುದನ್ನು ನಾವೆಲ್ಲರೂ ವಿರೋಧ ಮಾಡುವ ಅಗತ್ಯವಿದೆ. ಇದು ಬಹುತ್ವವನ್ನು ಸಾರುವ, ವಿವಿಧತೆಯಲ್ಲಿ ಏಕತೆಯನ್ನು ಎತ್ತಿ ಹಿಡಿಯುವ ನಮ್ಮ ಸಂವಿಧಾನಕ್ಕೆ ವಿರುದ್ಧವಾದದ್ದು ಎಂದರು.

ಈ ಚುನಾವಣೆಯ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ತನ್ನ ಸಾಧನೆ ಎಂದು ಹೇಳಿಕೊಳ್ಳುವಂತದ್ದು ಏನೂ ಇಲ್ಲ. ಅಪನಗದೀಕರಣ ಅವರ ದೊಡ್ಡ ಸಾಧನೆಯೇ ಅಥವಾ ಕೋವಿಡ್‌ನಿಂದಾದ ದೊಡ್ಡ ಪ್ರಮಾಣದ ಸಾವು ಅವರ ಸಾಧನೆಯೇ? ಅಥವಾ ಜಾಗತಿಕ ಹಸಿವಿನ ಸೂಚ್ಯಂಕದಲ್ಲಿ ನಮ್ಮ ನೆರೆಹೊರೆಯ ದೇಶಗಳು ನಮಗಿಂತ ಉತ್ತಮ ಸ್ಥಿತಿಯಲ್ಲಿರುವಾಗ ನಾವು 111 ಸ್ಥಾನದಲ್ಲಿರುವುದು ನಮ್ಮ ಸಾಧನೆಯೇ ಎಂದು ಪ್ರಶ್ನಿಸಿದರು.

ಪ್ರಸಕ್ತ ದೇಶದಲ್ಲಿ ನಿವೇಶನ ರಹಿತರ ಸಂಖ್ಯೆಯು ಅಧಿಕವಾಗುತ್ತಿದೆ. ಅದರೊಂದಿಗೆ ಬೆಲೆ ಏರಿಕೆಯಿಂದಾಗಿ ಜನರು ಕಂಗಾಲಾಗಿದ್ದಾರೆ. ಈ ನಡುವೆಯೇ ನಮ್ಮ ದೇಶದಲ್ಲಿ ಜಾತ್ಯಾತೀತೆಯು ಈ ಜಿಲ್ಲೆಯಲ್ಲಿ ಅಪಾಯದಲ್ಲಿದೆ ಎಂದರು.

ಬಿಜೆಪಿಯು ಶ್ರೀ ರಾಮನನ್ನು ತನ್ನ ರಾಜಕೀಯ ಆಯುಧವಾಗಿ ಬಳಸಿಕೊಳ್ಳುತ್ತಿದೆ. ಭಾರತದಲ್ಲಿ ನಡೆದ ಮೊದಲ ಹೇಯ ಅಪರಾಧ ಮಹಾತ್ಮ ಗಾಂಧಿಯ ಹತ್ಯೆ ಮತ್ತು ಎರಡನೆಯದು ಬಾಬ್ರಿ ಮಸೀದಿ ಧ್ವಂಸ. ಅವರೀಗ ಇತಿಹಾಸದಿಂದ ಗಾಂಧಿಯ ಹೆಸರನ್ನು ಅಳಿಸುವ, ಸಂವಿಧಾನವನ್ನು ನಾಶ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ. ಅದಕ್ಕೆ ನಾವು ಅವಕಾಶ ನೀಡಲಾರೆವು ಎಂದರು.

ಅಧ್ಯಕ್ಷೀಯ ಮಾತುಗಳನ್ನಾಡಿದ ಡಿ.ವೈ. ಎಫ್.ಐ. ರಾಜ್ಯ ಮುಖಂಡ ಮುನೀರ್ ಕಾಟಿಪಳ್ಳ, ಒಎಂಪಿಎಲ್‌ನಲ್ಲಿ ಉದ್ಯೋಗಿಗಳು ವೇತನಕ್ಕಾಗಿ ಧರಣಿ ಕೂತಿದ್ದು, ಎಂಎಸ್‌ಇಝೆಡ್‌ನಲ್ಲಿ ಉದ್ಯೋಗಕ್ಕಾಗಿ ಪ್ರತಿಭಟನೆ ಮಾಡಲಾಗುತ್ತಿದೆ. ಆದರೆ ಅಲ್ಲಿಗೆ ನಮ್ಮ ಶಾಸಕರು, ಸಂಸದರು ಬಂದಿಲ್ಲ. ಆದರೆ ಅಮಾಯಕ ಶಿಕ್ಷಕರನ್ನು ಅಮಾನತು ಮಾಡಿ ಎಂದು ಈ ಶಾಸಕರು ಧರಣಿ ಕೂರುತ್ತಾರೆ ಎಂದು ಭರತ್ ಶೆಟ್ಟಿ ವಿರುದ್ಧ ವಾಗ್ದಾಳಿ ನಡೆಸಿದರು.

ಹಿಂದೂಗಳು ಕ್ರೈಸ್ತ ಶಾಲೆಯನ್ನು ತೊರೆಯಿರಿ ಎಂದು ಕರೆ ನೀಡುತ್ತಾರೆ. ಹಾಗಾದರೆ ಇವರು ಪ್ರಭಾಕರ್ ಭಟ್ಟರ ಶಾಲೆಯಲ್ಲಿ ಹಿಂದೂಗಳಿಗೆ ಸೀಟು ನೀಡುತ್ತಾರಾ?, ಸರ್ಕಾರಿ ಶಾಲೆಯನ್ನು ಅಭಿವೃದ್ಧಿ ಮಾಡುತ್ತಾರಾ? ಎಂದು ಪ್ರಶ್ನಿಸಿದ ಮುನೀರ್ ಕಾಟಿಪಳ್ಳ, ಹಿಂದೂ ಮುಸ್ಲಿಂ ಎಂಬ ಭೇದ ಭಾವ ನಮ್ಮ ಆದರ್ಶ ಪುರುಷರಿಗೆ ಮಹಿಳೆಯರಿಗೆ ಇರಲಿಲ್ಲ. ಹಾಗಿರುವಾಗ ನಮಗೆ ಯಾಕೆ ಕೋಮುವಾದ ಇರಬೇಕು ಎಂದರು.

ಇಲ್ಲಿ ಒಂದು ಮೇಲ್ಸುತೇವೆ ನಿರ್ಮಿಸಲು 12 ವರ್ಷ ಕಳೆದವು, ಎಂಆರ್‌ಪಿಎಲ್‌ನಲ್ಲಿ ಸ್ಥಳೀಯರ ಮೇಲೆ ನಡೆಯುವ ದೌರ್ಜನ್ಯ ನಿಲ್ಲಿಸಲು ಆಗುತ್ತಿಲ್ಲ. ಯುವಜನರ ಬಗ್ಗೆ ಇಲ್ಲಿನ ಶಾಸಕರು, ಸಂಸದರು ಬಾಯಿ ಬಿಡುತ್ತಿಲ್ಲ. ಯಾರಾದರೂ ಬೀದಿ ಹೆಣವಾದರೆ ಇದು ಯಾರ ಹೆಣ ಎಂದು ತಿಳಿದು 'ಧರ್ಮ ದಂಗಲ್' ನಡೆಸುವ ಇವರಿಗೆ ಯುವಕರ ಸಮಸ್ಯೆಗಳು ಕಾಣುತ್ತಿಲ್ಲ ಎಂದರು. ಕೂಳೂರು ಸೇತುವೆ ಅರ್ಧಕ್ಕೆ ನಿಂತಿವೆ. ಮಂಗಳೂರು ವಿಮಾನ ನಿಲ್ದಾಣವನ್ನು ಅದಾನಿಗೆ ಮಾರಾಟ ಮಾಡಿದರು. ಇಲ್ಲಿನ ಬ್ಯಾಂಕ್‌ಗಳನ್ನು ಮೋದಿಯವರ ಗೆಳೆಯರು ಕೊಂಡುಕೊಂಡಿದ್ದಾರೆ. ಇವೆಲ್ಲವನ್ನು ತುಳುನಾಡಿನ ಜನ ಅರ್ಥ ಮಾಡಿಕೊಳ್ಳಬೇಕಿದೆ ಎಂದು ತಿಳಿಸಿದರು.

ಕಲ್ಲಡ್ಕ ಪ್ರಭಾಕರನ ಭಾಷಣಕ್ಕೆ ಕುಣಿದು ಕುಪ್ಪಳಿಸಿದ ತಕ್ಷಣ, ನಮ್ಮ ಸಮಸ್ಯೆ ನಿವಾರಣೆಯಗುವುದಿಲ್ಲ. ಶಿಕ್ಷಣ ಸಿಗಲಿಲ್ಲ, ಆರೋಗ್ಯ ಕ್ಷೇತ್ರ ದಿವಾಳಿಯಾಗಿದೆ. ಹಾಗಾಗಿ ಅವರ ಅಮಲಿನ ಭಾಷಣಕ್ಕೆ ಚಪ್ಪಾಳೆ ಹೊಡೆಯುವ ಬದಲು ಪ್ರಶ್ನಿಸಲು ಆರಂಭಿಸಿ, ಅವರು ಹೆದರಿ ಓಡಿಹೋಗುತ್ತಾರೆ ಎಂದು ತಿಳಿಸಿದರು.

ಉದ್ಯೋಗದ ಹಕ್ಕಿಗಾಗಿ ಐಕ್ಯತೆಯಿಂದ ಹೋರಾಡಬೇಕಿದೆ. ಆತ್ಮಗೌರವ, ಭದ್ರತೆ ಇಲ್ಲದ ಬದುಕು ಸಾಕು, ನೆಮ್ಮದಿಯ ಜೀವನ ನಡೆಸಲು ನಮಗೆ ಉದ್ಯೋಗ ಕೊಡಿ ಎಂದು ಹೋರಾಡಲು ಸಜ್ಜಾಬೇಕು ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಕೇಂದ್ರ ಸಮಿತಿ ಸದಸ್ಯ ಜಾಕ್.ಸಿ ಥಾಮಸ್, ಸ್ವಾಗತ ಸಮಿತಿ ಕಾರ್ಯದರ್ಶಿ ಸುನೀಲ್ ಕುಮಾರ್ ಬಜಾಲ್, ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ್ ಪೂಜಾರ್, ರಾಜ್ಯ ಸಮಿತಿ ನಾಯಕರಾದ ಲವಿತ್ರ ಕಲ್ಬುರ್ಗಿ, ರೇಣುಕಾ ಕಹಾರ್, ಸ್ವಾಗತಿ ಸಮಿತಿ ಸದಸ್ಯರಾದ ರಾಮಚಂದ್ರ ಬಬ್ಬುಕಟ್ಟೆ, ಡಾ. ಜೀವನ್ ರಾಜ್ ಕುತ್ತಾರ್, ಡಾ. ಕೃಷ್ಣಪ್ಪ ಕೊಂಚಾಡಿ, ಡಿವೈಎಫ್‌ಐ ಜಿಲ್ಲಾಧ್ಯಕ್ಷ ಸಂತೋಷ್ ಬಜಾಲ್, ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಬಿ.ಕೆ. ಇಮ್ತಿಯಾಜ್ ಉಪಸ್ಥಿತರಿದ್ದರು.

ಚಳುವಳಿಗಳ ನೆನಪಿನ ಪೋಸ್ಟರ್ ಗ್ಯಾಲರಿ



ಸಮ್ಮೇಳನದ ಆರಂಭಕ್ಕೂ ಮುನ್ನ ರಮೇಶ್ ಕುಮಾರ್ ಸ್ಮರಣೆಯಲ್ಲಿ ಹೋರಾಟ ಚಳುವಳಿಗಳ ನೆನಪಿನ ಪೋಸ್ಟರ್ ಗ್ಯಾಲರಿಯನ್ನು ವಿಶ್ರಾಂತ ಜಿಲ್ಲಾಧಿಕಾರಿ (ಐ.ಎ.ಎಸ್.), ಸ್ವಾಗತ ಸಮಿತಿಯ ಗೌರವಾಧ್ಯಕ್ಷರು ಆದ ಎ.ಬಿ. ಇಬ್ರಾಹಿಂ ಅವರು ಉದ್ಘಾಟನೆ ಮಾಡಿದರು.

ಪುಸ್ತಕಗಳ ಬಿಡುಗಡೆ

ಡಿ.ವೈ.ಎಫ್.ಐ. ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಒಟ್ಟು ಮೂರು ಪುಸ್ತಕಗಳು ಬಿಡುಗಡೆಗೊಂಡವು. ಭಜರಂಗದಳದ ರಾಜ್ಯ ಸಂಚಾಲಕರಾಗಿದ್ದ ಮಹೇಂದ್ರ ಕುಮಾರ್ ಅವರ ಆತ್ಮಕತೆ, 'ನಡು ಬಗ್ಗಿಸದ ಎದೆಯ ದನಿ', ಶಿಕ್ಷಣ ನೀತಿಗಳ ಕುರಿತ ಶಿಕ್ಷಣ ತಜ್ಞ ಶ್ರೀಪಾದ್ ಭಟ್ ಅವರ 'ವಿಷವಟ್ಟಿ ಸುಡುವಲ್ಲಿ' ಹಾಗೂ ಮೂಲ ಶಂಸುಲ್ ಇಸ್ಲಾಮ್ ಅವರು ಬರೆದ, ಕನ್ನಡಕ್ಕೆ ಟಿ. ಸುರೇಂದ್ರ ರಾವ್ ಅವರು ಅನುವಾದಿಸಿರುವ 'ವಿ.ಡಿ.ಸಾವರ್‌ಕರ್ ಏಳು ಮಿಥ್ಯೆಗಳು'. ಇವು ಮೂರು ಪುಸ್ತಕಗಳು. ಹಾಗೆಯೇ ಸಮ್ಮೇಳನದ ಅಂಗವಾಗಿ ಹಲವು ಸಾಂಸ್ಕೃತಿಕ ಕಾರ್ಯಕ್ರಮಗಳು ಸಹ ನಡೆದವು. ಸಮ್ಮೇಳನಕ್ಕೆ ಶುಭ ಕೋರಿ ನಾನಾ ಸಾಮಾಹಿಕ ಸಂಘಟನೆಗಳ ಮುಖಂಡರು ಮಾತನಾಡಿದರು.



‘ಮೋದಿ 9 ವರ್ಷಗಳ ಆಡಳಿತದಲ್ಲಿ ಸಾಧಿಸಿದ್ದೇನು?’ ಅಂಕಣದಲ್ಲಿ ಇದುವರೆಗೆ 40 ಲೇಖನಗಳು ಪ್ರಕಟವಾಗಿವೆ. ಈ ಲೇಖನಗಳನ್ನು ಮೂರು ವಿಭಾಗಳನ್ನಾಗಿ ವಿಂಗಡಣೆ ಮಾಡಿ ‘ಅಚ್ಛೇ ದಿನಗಳಿಗೆ ಕಾದ 10 ವರ್ಷಗಳಲ್ಲಿ ನಡೆದದ್ದೇನು?’ ಎಂಬ ಹೆಸರಿನಲ್ಲಿ ಮೂರು ಪುಸ್ತಕಗಳನ್ನು ಮುದ್ರಿಸಲಾಗಿದೆ. ಈ ಅಂಕಣವು ಇನ್ನು ಮುಂದೆ ‘ಮೋದಿ 10 ವರ್ಷಗಳ ಆಡಳಿತದಲ್ಲಿ ಸಾಧಿಸಿದ್ದೇನು?’ ಎಂಬ ಬದಲಾವಣೆಯೊಂದಿಗೆ ಮುಂದುವರಿಯುತ್ತದೆ.

ಮೋದಿ–10 ವರ್ಷಗಳು–ಭಾಗ–41

‘ಅಮೃತ್ ಭಾರತ್ ಸ್ಟೇಷನ್ ಯೋಜನೆ’– ಖಾಸಗಿಯವರ ತೆಕ್ಕೆಗೆ ರೈಲು ನಿಲ್ದಾಣಗಳು

2024ರ ಲೋಕಸಭಾ ಚುನಾವಣೆ ಘೋಷಣೆಯಾಗಲಿರುವ ಒಂದೆರಡು ವಾರಗಳ ಹಿಂದೆ, ಫೆಬ್ರವರಿ 26ರಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅಬ್ಬರದ ಪ್ರಚಾರದೊಂದಿಗೆ ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’ ಅಡಿಯಲ್ಲಿ 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿರುವ 553 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಚಾಲನೆ ನೀಡಿದ್ದಾರೆ. ಈ ಮೂಲಕ, ಒಕ್ಕೂಟ ಸರ್ಕಾರದ ಗುರಿಯಾದ ರೈಲ್ವೇ ವಲಯವನ್ನು ಖಾಸಗಿಯವರಿಗೆ ಒಪ್ಪಿಸುವ ‘ಖಾಸಗೀಕರಣ’ದ ಹಾದಿಯ ಗುರಿಯತ್ತ ಮತ್ತೊಂದು ಹೆಜ್ಜೆ ಇಟ್ಟಂತಾಗಿದೆ. ಮಾತ್ರವಲ್ಲ, ಆರ್.ಎಸ್.ಎಸ್. ನ ಹಿಂದುತ್ವದ ಅಜೆಂಡಾಗಳನ್ನು ಜಾರಿಗೆ ತರುವ ಪ್ರಯತ್ನವೂ ಇದರಲ್ಲಿದೆ. ಭಾರತದ ಪ್ರಾಚೀನ ಪರಂಪರೆಯೊಂದಿಗೆ ಮರುಸಂಪರ್ಕ ಪಡೆಯುವ ಹೆಸರಿನಲ್ಲಿ ರೈಲು ನಿಲ್ದಾಣಗಳನ್ನು ಮಂದಿರಗಳ ಶೈಲಿಯಲ್ಲಿ ನಿರ್ಮಾಣ ಮಾಡಲಾಗುತ್ತದೆ ಮತ್ತು ಸಂಸ್ಕೃತ ಭಾಷೆಯನ್ನು ಮುಂದೆ ತರುವ ಪ್ರಯತ್ನವೂ ಖಾಸಗೀಕರಣದ ಜೊತೆ ಜೊತೆಗೆ ನಡೆಯುತ್ತದೆ. “ಕಾರ್ಪೊರೇಟ್–ಹಿಂದುತ್ವವಾದಿ ಕೂಟ” ಆಡಳಿತದಿಂದ ಮತ್ತೇನನ್ನು ನಿರೀಕ್ಷಿಸಲಾದೀತು?

ಸಿ. ಸಿದ್ದಯ್ಯ

ಫೆಬ್ರವರಿ 25 ರಂದು ನರೇಂದ್ರ ಮೋದಿ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ರೂ. 41,000 ಕೋಟಿಗೂ ಹೆಚ್ಚು ಮೊತ್ತದ ಸುಮಾರು 2,000 ರೈಲ್ವೆ ಮೂಲಸೌಕರ್ಯ ಯೋಜನೆಗಳನ್ನು ಉದ್ಘಾಟಿಸಿದರು. ಈ 2,000 ರೈಲ್ವೇ ಮೂಲಸೌಕರ್ಯ ಯೋಜನೆಗಳಲ್ಲಿ, ಅಮೃತ್ ಭಾರತ್ ಸ್ಟೇಷನ್ ಯೋಜನೆಯಡಿಯಲ್ಲಿ 553 ರೈಲು ನಿಲ್ದಾಣಗಳ ಪುನರಾಭಿವೃದ್ಧಿಗೆ ಪ್ರಧಾನಮಂತ್ರಿ ಚಾಲನೆ ನೀಡಿದರು. (ಹೊಸ ನಿಲ್ದಾಣಗಳ ನಿರ್ಮಾಣವಲ್ಲ). 27 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿರುವ ಈ ನಿಲ್ದಾಣಗಳನ್ನು ರೂ. 19,000 ಕೋಟಿಗೂ ಹೆಚ್ಚು ವೆಚ್ಚದಲ್ಲಿ ಮರು ಅಭಿವೃದ್ಧಿಗೊಳಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಮುಂದಿನ ಚುನಾವಣೆಯಲ್ಲಿ ಗೆಲುವು ಸಾಧಿಸುವ ಭರವಸೆ ಬಿಜೆಪಿ ನಾಯಕರಿಗೆ ಇದ್ದರೆ, ತಮ್ಮ ಅಧಿಕಾರದ ಅವಧಿ ಮುಗಿಯುತ್ತಿರುವ ಈ ಸಂದರ್ಭದಲ್ಲಿ, ಅದೂ ಕೂಡ ಚುನಾವಣೆ ಘೋಷಣೆಗೆ ಇನ್ನು ಕೆಲವೇ ದಿನಗಳು ಬಾಕಿ ಇರುವಾಗ, ಇಂತಹ ಆತುರದ ಘೋಷಣೆಯ ಅನಿವಾರ್ಯತೆ ಏನಿತ್ತು ಎಂಬ ಪ್ರಶ್ನೆ ಮೂಡುತ್ತದೆ. ತಾವು ಮತ್ತೆ ಅಧಿಕಾರಕ್ಕೆ ಬರುತ್ತೇವೆಯೋ ಇಲ್ಲವೋ, ಆದರೆ, ಅವರು ಹೊಂದಿರುವ ಖಾಸಗೀಕರಣ ನೀತಿಗಳನ್ನು ಮತ್ತು ಹಿಂದುತ್ವವನ್ನು ಹೇರುವ ತಮ್ಮ ಅಜೆಂಡಾವನ್ನು ಸಾಧ್ಯವಾದಷ್ಟು ಮುಂದಕ್ಕೊಯ್ಯಬೇಕು ಎಂಬುದೇ ಬಿಜೆಪಿಯವರ ಉದ್ದೇಶ. ಹೀಗಾಗಿಯೇ ಆತುರಾತುವಾಗಿ ಈ ಯೋಜನೆಗೆ ಚಾಲನೆ ನೀಡಿದ್ದಾರೆ.

ಏನಿದು ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’

ಮೊದಲು ನಾವು ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’ ಏನೆಂಬುದನ್ನು ನೋಡೋಣ. ಈ ಯೋಜನೆಯನ್ನು 2022ರ ಫೆಬ್ರವರಿಯಲ್ಲಿ ಪ್ರಾರಂಭಿಸಲಾಯಿತು. ದೇಶಾದ್ಯಂತ ರೈಲು ನಿಲ್ದಾಣಗಳ ಅಭಿವೃದ್ಧಿ, ಆಧುನೀಕರಣ ಮತ್ತು ಸುಂದರೀಕರಣಕ್ಕಾಗಿ ಎಂದು ಹೇಳುತ್ತಾ ಈ ಯೋಜನೆಯನ್ನು ಪ್ರಾರಂಭಿಸಲಾಗಿದೆ. ನಿಲ್ದಾಣಗಳ ನಿರಂತರ ಅಭಿವೃದ್ಧಿಗೆ ಇದು ದೀರ್ಘಾವಧಿಯ ದೃಷ್ಟಿಯನ್ನು ಹೊಂದಿದೆ. ವಿವಿಧ ನಿಲ್ದಾಣಗಳ ಸೌಲಭ್ಯಗಳನ್ನು ಹೆಚ್ಚಿಸಲು ಮಾಸ್ಟರ್ ಪ್ಲಾನ್ ಗಳನ್ನು ರಚಿಸುವುದು ಮತ್ತು ಅವುಗಳನ್ನು ಹಂತಹಂತವಾಗಿ ಕಾರ್ಯಗತಗೊಳಿಸುವುದನ್ನು ಯೋಜನೆಯ ಅಡಿಯಲ್ಲಿ ಆದ್ಯತೆಯ ಆಧಾರದ ಮೇಲೆ ತೆಗೆದುಕೊಳ್ಳಲಾಗುವುದು.

ಈ ಅಭಿವೃದ್ಧಿಗಳಲ್ಲಿ ನಿಲ್ದಾಣದ ಪ್ರವೇಶವನ್ನು ಉತ್ತಮಗೊಳಿಸುವುದು, ಕಾಯುವ ಪ್ರದೇಶಗಳು (ವೆಯ್ಟಿಂಗ್ ರೂಂ), ಶೌಚಾಲಯಗಳ ಸೌಲಭ್ಯಗಳು, ಅಗತ್ಯವಿರುವಷ್ಟು ಲಿಫ್ಟ್ ಮತ್ತು ಎಸ್ಕಲೇಟರ್ ಗಳ ಸ್ಥಾಪನೆ, ಸ್ವಚ್ಛತೆ, ಉಚಿತ ವೈಫೈ ನೀಡುವಿಕೆ ಮತ್ತು ‘ಒಂದು ನಿಲ್ದಾಣ ಒಂದು ಉತ್ಪನ್ನ’ ದಂತಹ ಉಪಕ್ರಮಗಳ ಮೂಲಕ ಸ್ಥಳೀಯ ಉತ್ಪನ್ನಗಳಿಗೆ ಕಿಯೋಸ್ಕ್ ಗಳನ್ನು ಸ್ಥಾಪಿಸುವುದು ಸೇರಿವೆ. ಈ ನಿಲ್ದಾಣಗಳು ಮೇಲ್ಛಾವಣಿ ಪ್ಲಾಜಾ, ಸುಂದರವಾದ ಭೂದೃಶ್ಯ, ಇಂಟರ್ಮೋಡಲ್ ಸಂಪರ್ಕ, ಸುಧಾರಿತ ಆಧುನಿಕ ಮುಂಭಾಗ, ಮಕ್ಕಳ ಆಟದ ಪ್ರದೇಶ, ಕಿಯೋಸ್ಕ್ ಗಳು, ಫುಡ್ ಕೋರ್ಟ್ ಗಳು ಮುಂತಾದ ಆಧುನಿಕ ಪ್ರಯಾಣಿಕರ ಸೌಕರ್ಯಗಳನ್ನು ಹೊಂದಿರುತ್ತದೆ. ಅವುಗಳನ್ನು ಪರಿಸರ ಸ್ನೇಹಿ ಮತ್ತು ದಿವ್ಯಾಂಗ ಸ್ನೇಹಿಯಾಗಿ ಪುನರಾಭಿವೃದ್ಧಿ ಮಾಡಲಾಗುತ್ತದೆ. ಈ ನಿಲ್ದಾಣದ ಕಟ್ಟಡಗಳ ವಿನ್ಯಾಸವು ಸ್ಥಳೀಯ ಸಂಸ್ಕೃತಿ, ಪರಂಪರೆ ಮತ್ತು ವಾಸ್ತುಶಿಲ್ಪದಿಂದ ಪ್ರೇರೇಪಿಸಲ್ಪಡುತ್ತದೆ,” ಇವಿಷ್ಟು ರೈಲ್ವೆ ಇಲಾಖೆ ಹೊರಡಿಸಿದ ಹೇಳಿಕೆಯಲ್ಲಿದೆ.



ಎಲ್ಲವೂ ಪಿಪಿಪಿ ಆಧಾರದಲ್ಲಿ

ರೈಲು ನಿಲ್ದಾಣಗಳನ್ನು ಇಷ್ಟೆಲ್ಲಾ ಆಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿ ಪಡಿಸಲಾಗುತ್ತದೆ ಎಂದರೆ ಎಂತಹವರಿಗೂ ಸಂತೋಷ ಉಂಟಾಗುತ್ತದೆ ಅಲ್ಲವೆ? “ನೋಡಿ, ಮೋದಿ ನಮ್ಮ ರೈಲು ನಿಲ್ದಾಣಗಳನ್ನು ವಿಮಾನ ನಿಲ್ದಾಣಗಳ ರೀತಿ ಬದಲಾಯಿಸಿದ್ದಾರೆ” ಎಂದು ಮೋದಿ ಭಕ್ತರು ಹೇಳಿದರೆ ಅದಕ್ಕೆ ಯಾರಾದರೂ ತಲೆಭಾಗದೆ ಇರುತ್ತಾರೆಯೆ? ರೈಲು ನಿಲ್ದಾಣಗಳನ್ನು ರೈಲ್ವೇ ಅಥವಾ ಸರ್ಕಾರದ ವೆಚ್ಚದಿಂದ ಇಷ್ಟೆಲ್ಲಾ ಆಧುನೀಕರಣ ಮಾಡುವುದಾದರೆ, ಈ ಎಲ್ಲಾ ಸೌಲಭ್ಯಗಳನ್ನು ಉಚಿತವಾಗಿ ಬಳಕೆ ಮಾಡಬಹುದು ಎಂದಾದರೆ ನಿಜಕ್ಕೂ ಎಲ್ಲರೂ ಸಂಭ್ರಮಿಸಬಹುದಿತ್ತು.

ಆದರೆ, ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’ಯು ಸಾರ್ವಜನಿಕ, ಖಾಸಗಿ ಸಹಭಾಗಿತ್ವ(PPP) ದ ಒಂದು ಯೋಜನೆ. ಈ ಪುನರ್ ಅಭಿವೃದ್ಧಿಗೆ ಖಾಸಗಿಯವರು ಬಂಡವಾಳ ಹೂಡಿಕೆ ಮಾಡುತ್ತಾರೆ. ಖಾಸಗಿ ಬಂಡವಾಳ ಎಂದರೆ, ಅದು ಲಾಭದ ದೃಷ್ಟಿಯಿಂದಲೇ ಇರುತ್ತದೆ ಎಂಬುದು ಎಲ್ಲರಿಗೂ ಗೊತ್ತೇ ಇದೆ. ಅಂದರೆ, ನಮ್ಮ ಈಗಿನ ರೈಲು ನಿಲ್ದಾಣಗಳನ್ನು ಒಂದಷ್ಟು ಆಧುನೀಕರಣ ಗೊಳಿಸಿ, ಒಂದಷ್ಟು ಅಭಿವೃದ್ಧಿ ಪಡಿಸಿ, ಅದಕ್ಕೆ ಸೇವಾ ಶುಲ್ಕ ನಿಗಧಿಪಡಿಸಿ ಹಣ ಗಳಿಸುವುದು ಮತ್ತು ಹೋಟೆಲ್, ವಾಣಿಜ್ಯ ಮಳಿಗೆಗಳನ್ನು ಕಟ್ಟಿ ಬಾಡಿಗೆಗೆ ಕೊಟ್ಟು ಹಣ ಗಳಿಸುವುದು. ಒಟ್ಟಿನಲ್ಲಿ ಹೇಳುವುದಾದರೆ, ರೈಲ್ವೇ ಇಲಾಖೆಗೆ ಸೇರಿದ ಸಾರ್ವಜನಿಕ ಆಸ್ತಿಯನ್ನು ರಿಯಲ್ ಎಸ್ಟೇಟ್ ಉದ್ಯಮಿಗಳಿಗೆ, ವಾಣಿಜ್ಯ ಸಂಸ್ಥೆಗಳಿಗೆ ಬಿಟ್ಟುಕೊಡಲಾಗುತ್ತದೆ.

ರೈಲ್ವೆ ಸೇವೆ ಬಳಸುವ ಸಾಮಾನ್ಯ ಜನರಿಗೆ ಹೊರೆಯಾಗಲಿದೆ

ಇಂತಹ ಖಾಸಗಿ ಸಹಭಾಗಿತ್ವದ ಯೋಜನೆಯಿಂದಾಗಿ ರೈಲ್ವೆ ಸೇವೆ ಬಳಸುವ ಸಾಮಾನ್ಯ ಜನರಿಗೆ ಹೊರೆಯಾಗಲಿದೆ. ಇದನ್ನು ನಾವು ಟೋಲ್ ರಸ್ತೆ ಬಳಕೆಯಲ್ಲಿ ಅನುಭವಿಸುತ್ತಿದ್ದೇವೆ. ಇದುವರೆಗೂ ಉಚಿತವಾಗಿ ಬಳಕೆ ಮಾಡುತ್ತಿದ್ದ ಹೆದ್ದಾರಿಗಳನ್ನು ಖಾಸಗಿ ಸಹ ಭಾಗಿತ್ವದಲ್ಲಿ ವಿಸ್ತರಣೆ ಮತ್ತು ಅಭಿವೃದ್ಧಿಗೊಳಿಸಿದ ನಂತರ, ಟೋಲ್ ಕಟ್ಟಿಯೇ ಆ ರಸ್ತೆಗಳನ್ನು ಬಳಕೆ ಮಾಡಬೇಕಲ್ಲಾ ಹಾಗೆ ರೈಲು ನಿಲ್ದಾಣ ಬಳಕೆ ಮಾಡಲು ದುಬಾರಿ ಶುಲ್ಕ ತೆರಬೇಕಾಗುತ್ತದೆ. ಅಲ್ಲಿನ ಯಾವುದೇ ಸೌಲಭ್ಯಗಳನ್ನು ಉಪಯೋಗಿಸಿಕೊಳ್ಳಬೇಕೆಂದರೆ ಹೆಚ್ಚಿನ ಹಣ ತೆರಬೇಕಾಗುತ್ತದೆ.

ವಿಮಾನ ನಿಲ್ದಾಣ ಇದಕ್ಕೆ ಮತ್ತೊಂದು ಉದಾಹರಣೆಯಾಗಿದೆ. ವಿಮಾನ ಪ್ರಯಾಣಿಕರು ಖರೀದಿಸುವ ಪ್ರಯಾಣ ಟಿಕೆಟ್ ದರದಲ್ಲಿ ವಿಮಾನ ನಿಲ್ದಾಣ ಬಳಕೆದಾರ ಅಭಿವೃದ್ಧಿ ಶುಲ್ಕವೂ ಸೇರಿರುತ್ತದೆ. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಈ ಶುಲ್ಕ ಈಗ ಅಂತರಾಷ್ಟ್ರೀಯ ಪ್ರಯಾಣಿಕರಿಗೆ 1,400 ರೂ. ಮತ್ತು ದೇಶೀಯ ಪ್ರಯಾಣಿಕರಿಗೆ 450 ರೂ. ಇದೆ. ವಾಹನಗಳ ನಿಲುಗಡೆಗೆ ಅಧಿಕ ಶುಲ್ಕ ವಸೂಲಿ ಮಾಡುತ್ತಾರೆ. ನಿಲ್ದಾಣದ ಒಳ ಭಾಗದಲ್ಲಿ ಮಾರಾಟ ಮಾಡುವ ತಿಂಡಿ, ತಿನಿಸುಗಳು, ವಸ್ತುಗಳು ದುಬಾರಿ ಬೆಲೆಯಲ್ಲಿ ಮಾರಾಟವಾಗುತ್ತಿವೆ.

ಸಂಪೂರ್ಣವಾಗಿ ಖಾಸಗೀಕರಿಸುವ ದಿಕ್ಕಿನೆಡೆಗೆ

ಇಷ್ಟು ಮಾತ್ರವೇ ಆಗಿದ್ದರೆ, ರೈಲು ಪ್ರಯಾಣ ಮಾಡುವ ಬಡವರಿಗೆ ಏನೂ ನಷ್ಟ ಇಲ್ಲವಲ್ಲ, ಹಣವಂತರು ಇವುಗಳ ಉಪಯೋಗ ಪಡೆದುಕೊಳ್ಳುತ್ತಾರೆ, ಅದರಿಂದ ನಮಗೇನು ತೊಂದರೆ ಎನಿಸಬಹುದು. ಆದರೆ, ಇದು, ಆಧುನೀಕರಣ ಮತ್ತು ಪ್ರಯಾಣಿಕರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವ ಹೆಸರಿನ ಮರೆಯಲ್ಲಿ ರೈಲ್ವೇ ವಲಯವನ್ನು ಸಂಪೂರ್ಣವಾಗಿ ಖಾಸಗೀಕರಣಗೊಳಿಸುವ ದಿಕ್ಕಿನೆಡೆಗೆ ಕೇಂದ್ರ ಸರ್ಕಾರ ಇಟ್ಟಿರುವ ಮತ್ತೊಂದು ಹೆಜ್ಜೆಯಷ್ಟೆ.

2021ರಿಂದ 2025ರ ಮಾರ್ಚ್ ವೇಳೆಗೆ ಆರ್ಥಿಕ ವರ್ಷದವರೆಗೆ ನಾಲ್ಕು ವರ್ಷಗಳಲ್ಲಿ ನ್ಯಾಷನಲ್ ಮಾನಿಟೈಸೇಶನ್ (NMP) ಪೈಪ್ ಲೈನ್ ಯೋಜನೆ ಮೂಲಕ, ಸಾರ್ವಜನಿಕ ಉದ್ಯಮಗಳ ಆಸ್ತಿಗಳ ಮಾರಾಟದಿಂದ ರೂ. 6 ಲಕ್ಷ ಕೋಟಿ (ರೂ. 6 ಟ್ರಿಲಿಯನ್) ಗಳಿಸುವ

ಪುಟ 14 ಕ್ಕೆ

ಜೋಯಿಡಾ ತಾಲೂಕಿನ ಗಡಿಭಾಗಗಳಿಗೆ ರಸ್ತೆ, ಸೇತುವೆ, ಸಾರಿಗೆ ಮೂಲಸೌಕರ್ಯ ಮತ್ತು ಅರಣ್ಯ ಇಲಾಖೆಯ ಕಿರುಕುಳ ತಪ್ಪಿಸಲು

ಬೃಹತ್ ಕಾಲ್ನಡಿಗೆ ಯಾತ್ರೆ

ವರದಿ: **ಯಮುನಾ ಗಾಂವ್ಕರ್**

ಜೋಯಿಡಾದ ಸಮಗ್ರ ಅಭಿವೃದ್ಧಿಗೆ ಆಗ್ರಹಿಸಿ ಹಲವಾರು ಕಾಲ್ನಡಿಗೆ ಹೋರಾಟಗಳು, ಪ್ರತಿಭಟನೆಗಳು ನಡೆದಿವೆ; ನಡೆಯುತ್ತಿವೆ. ಈ ಬಾರಿ ಫೆಬ್ರವರಿ 27-28 ಎರಡು ದಿನಗಳ ಕಾಲ ಹಿರಿಯ ರೈತ ಹೋರಾಟಗಾರ ಕಾಮ್ರೇಡ್ ಮಂಜುನಾಥ ಪುಲ್ಕರ್ ನೆನಪಿನಲ್ಲಿ ಮೂರು ಗ್ರಾಮಗಳಿಂದ ಭೃಹತ್ ಪಾದಯಾತ್ರೆಯನ್ನು ಯಶಸ್ವಿಯಾಗಿ ನಡೆಸಿ ಸರ್ಕಾರದ ಗಮನ ಸೆಳೆಯುವಲ್ಲಿ ರೈತಾಪಿ ಜನತೆ ಯಶಸ್ವಿಯಾದರು.

ಹೋರಾಟದ ಹಿನ್ನೆಲೆ:

ಕಳೆದ ಇಪ್ಪತ್ತು ವರ್ಷಗಳ ಹಿಂದೆ ಇದೇ ಅವಧಿಯಲ್ಲಿ ಜೋಯಿಡಾ ಇಡೀ ತಾಲೂಕಿಗೆ ಸಮಗ್ರ ಅಭಿವೃದ್ಧಿಗೆ ವಿಶೇಷ ಪ್ಯಾಕೇಜ್ ನೀಡಲು, ರಸ್ತೆ, ಸೇತುವೆ, ಸಾರಿಗೆ ಬಸ್, ಕುಡಿಯುವ ನೀರು, ಕೃಷಿ ನೀರಾವರಿ, ಮೂಲಸೌಕರ್ಯ, ಮಾನವ ಹಕ್ಕು, ಶಿಕ್ಷಣ, ನ್ಯಾಯಾಂಗ, ನ್ಯಾಯಬೆಲೆ ಅಂಗಡಿ, ಕುಣಬಿ ಸಂವಿಧಾನಬದ್ಧ ಬುಡಕಟ್ಟೆಂದು ಘೋಷಿಸಲು ಒತ್ತಾಯಿಸಿ ಇನ್ನುಳಿದ 30 ಬೇಡಿಕೆಗಳನ್ನಿಟ್ಟು ಕೆಪಿಆರ್ ಎಸ್ ನಿಂದ ಉತ್ತರ ಕನ್ನಡ ಜಿಲ್ಲಾ ಪಂಚಾಯತ, ಕಾರವಾರಕ್ಕೆ ಪಾದಯಾತ್ರೆ ನಡೆಸಲಾಗಿತ್ತು. ನೂರಾರು ಜನರು 50-60 ಕಿಮಿ ನಡೆದು ತಾಲೂಕು ಕೇಂದ್ರಕ್ಕೆ ಬಂದು ತಮ್ಮ ಕಾಲ್ನಡಿಗೆ ಯಾತ್ರೆ ಉದ್ಘಾಟಿಸಿಕೊಂಡು ಕಾರವಾರದತ್ತ ಮುನ್ನಡೆದಿದ್ದರು. ಅದರ ಫಲವಾಗಿ ಡಾ. ಬರಗೂರು ಗಡಿ ವರದಿಯಲ್ಲಿ ನಿರ್ದಿಷ್ಟ ಹಳ್ಳಿಗಳ ಅಭಿವೃದ್ಧಿಗೆ ಪ್ರಸ್ತಾವನೆಗಳು ಹೋದವು. ಪ್ರಾದೇಶಿಕ ಅಸಮಾನತೆ ನಿವಾರಣೆಗೆ ಡಾ. ನಂಜುಂಡಪ್ಪ ಸಮಿತಿ ಬಂದಾಗ ಗಮನ ಸೆಳೆಯಲು ಸಾಧ್ಯವಾಯಿತು. ಹೈಕೋರ್ಟಿನ ಮತ್ತು ಸುಪ್ರಿಂ ಕೋರ್ಟಿನ ನ್ಯಾಯಮೂರ್ತಿಗಳನ್ನು ಕರೆಯಿಸಿ ಗಮನಸೆಳೆಯಲಾಯಿತು. ಮಾನವ ಹಕ್ಕು ಆಯೋಗದ ರಾಜ್ಯ ಅಧ್ಯಕ್ಷರನ್ನು ಕರೆಯಿಸಿ ಕಣ್ಣಿಗೆ ರಾಚುವ ಸಮಸ್ಯೆಗಳನ್ನು ತೋರಿಸಿಕೊಡಲಾಯಿತು. ಸಾಕಷ್ಟು ಅನುದಾನಗಳು ಬರಲು ಶುರುವಾದವು. ಜಿಲ್ಲಾ ಪಂಚಾಯತ್ ಸಾಮಾನ್ಯ ವಿಶೇಷ ಸಭೆ



ಜೋಯಿಡಾದಲ್ಲಿ ನಡೆಯಿತು. ಗಡಿ ಅಭಿವೃದ್ಧಿ ಪ್ರಾಧಿಕಾರದ ಉತ್ಸವ ನಡೆಯಿತು. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಿತು. ಆನಂತರವಂತೂ ಹತ್ತಾರು ಹೋರಾಟಗಳನ್ನು ಕರ್ನಾಟಕ ಪ್ರಾಂತ ರೈತ ಸಂಘ ಹಾಗೂ ಸಿಐಟಿಯು ಮತ್ತಿತರೇ ಜನಪರ ಸಂಘಟನೆಗಳು ನಡೆಸಿವೆ. ಇಷ್ಟಾದ ಮೇಲೂ ಬಹುತೇಕ ಕೆಲಸಗಳು ನೆನಗುದಿಗೆ ಬಿದ್ದಿವೆ ಇಲ್ಲವೇ ವಿಳಂಬವಾಗಿವೆ ಇಲ್ಲವೇ ಪ್ರತಿಮಳೆಗಾಲದಲ್ಲೂ ಊರೂರು ದ್ವೀಪವಾಗುವ ಪರಿಸ್ಥಿತಿ ತಂದಿಡಲಾಗಿದೆ. ಮಂಜೂರಾದ ಹಣ ಪಾರದರ್ಶಕವಾಗಿ ವಿನಿಯೋಗವಾಗಿದೆಯೇ ಪ್ರಶ್ನಾರ್ಹವಾಗಿದೆ.

ಹಾಗಾಗಿ ಜೋಯಿಡಾದ ಜನತೆಯ ಪರವಾಗಿ ಕರ್ನಾಟಕ ಪ್ರಾಂತ ರೈತ ಸಂಘ ತಾಲೂಕು ಸಮಿತಿಯು ಸರ್ಕಾರದ ಮುಂದಿಟ್ಟ ಹಕ್ಕೊತ್ತಾಯಗಳನ್ನು ದೊರಕಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರದ ಕಾಯ್ದೆಗಳ ತೊಡಕು ನಿವಾರಣೆಗೆ ಮುಂದಾಗಬೇಕೆಂದು ಈ ಭಾಗದ ಉಸ್ತುವಾರಿ ಸಚಿವರಾದ ಮಾನ್ಯ ಮಂಕಾಳು ವೈದ್ಯರನ್ನು, ಶಾಸಕರು ಹಿರಿಯ ರಾಜಕಾರಣಿಗಳು ಆದ ಆರ್.ವಿ. ದೇಶಪಾಂಡೆಯವರನ್ನು, ಜಿಲ್ಲೆಯ ಉಳಿದ ಶಾಸಕರನ್ನು ಮತ್ತು ಜಿಲ್ಲಾಡಳಿತವನ್ನು ಒಕ್ಕೊರಲಿನಿಂದ ಒತ್ತಾಯಿಸಲು ಕಾಲ್ನಡಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಈ ಬಾರಿಯ ಮುಖ್ಯ ಹಕ್ಕೊತ್ತಾಯಗಳು ಹೀಗಿದ್ದವು:

ಗಡಿಗ್ರಾಮಗಳಿಗೆ ಮೂಲ ಸೌಕರ್ಯಗಳಾದ ರಸ್ತೆ, ಸೇತುವೆ, ಸರ್ಕಾರಿ ಬಸ್ ಸೌಲಭ್ಯ, ಕಿರವತ್ತಿ, ಕಾರ್ಟೋಳಿ, ಡಿಗ್ಗಿ ಗೋವಾ ಗಡಿತನಕ ರಾಜ್ಯ ಹೆದ್ದಾರಿ ಡಾಂಬರಿಕರಣಕ್ಕೆ, ಡಿಗ್ಗಿಯಿಂದ ವಾಗೇಲಿ ಮರು ಡಾಂಬರಿಕರಣ, ಡಿಗ್ಗಿ-ಕ್ಯಾಸಲ್ ರಾಕ್- ರಸ್ತೆ ಡಾಂಬರಿಕರಣ, ಸೇತುವೆ ನಿರ್ಮಾಣಕ್ಕೆ, ಮಧ್ಯಾಹ್ನ 1 ಗಂಟೆಗೆ ಜೋಯಿಡಾದಿಂದ ವಾಗೇಲಿಗೆ ಬಸ್, ತೇರಾಳಿ, ಡಿಗ್ಗಿ ಗೌಳಾದೇವಿ ಮತ್ತು ಕ್ಯಾಸಲ್ ರಾಕ್ ಡಿಗ್ಗಿ ಗೆ ವಸತಿ ಬಸ್, ಕುಂಡಲ ಇನ್ನಿತರ ಗ್ರಾಮಗಳಿಗೆ ಸಮಯಕ್ಕೆ ಆದ್ಯತೆಯ ಬಸ್ ಸೌಲಭ್ಯ ಒದಗಿಸುವುದು, ಅರ್ಧದಲ್ಲೇ ನಿಂತ ಕಾಮಗಾರಿ ಪೂರ್ಣಗೊಳಿಸಿ, ಕಳಪೆ ಕಾಮಗಾರಿ ಮಾಡಿದುದನ್ನು ಸರಿಪಡಿಸಿ ಮತ್ತು ಅರಣ್ಯ ಇಲಾಖೆ ವನ್ಯಜೀವಿ ವಿಭಾಗದಿಂದ ಅಭಿವೃದ್ಧಿ ಕೆಲಸಗಳಿಗೆ ಮತ್ತು ಜನತೆಯ ಹಕ್ಕುಗಳಿಗೆ ತೊಂದರೆ ತಪ್ಪಿಸಲು ಆಗ್ರಹ ಮಾಡಿದ್ದರು.

ತಾಲೂಕಿನ ಸಮಗ್ರ ಅಭಿವೃದ್ಧಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಆಡಳಿತಾತ್ಮಕ ಬದ್ಧತೆಯ ಕೊರತೆ ನೀಗಿಸಲು: -ಯಮುನಾ ಗಾಂವ್ಕರ್ ಆಗ್ರಹ

ಸಿಸ್ಯೆ ಎಂಬ ಗ್ರಾಮದಿಂದ ಜೋಯಿಡಾಕ್ಕೆ ಕಾಲ್ನಡಿಗೆ ಹೋರಾಟದ ಉದ್ಘಾಟನೆಯನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ, ಆಖಿಲಭಾರತ ಕಿಸಾನ್ ಸಭಾ ಕಾರ್ಯಕರ್ತರಾದ ಯಮುನಾ ಗಾಂವ್ಕರ್ ಇವರು ಶಾಂತ ವೆಳಿಪರಿಗೆ, ಪ್ರಕಾಶ್ ಸಿಸ್ಯೆ, ಪ್ರಕಾಶ್ ವೆಳಿಪ್, ರತ್ನಾಕರ ಇವರಿಗೆ ಕೆಂಬಾವುಟ ನೀಡಿ ನೆರವೇರಿಸಿದರು.

ಸಿಸ್ಯೆ ಗ್ರಾಮದಿಂದ ಹೊರಟ ಕಾಲ್ನಡಿಯನ್ನು ಉದ್ಘಾಟಿಸಿ ಮಾತನಾಡಿದ ಯಮುನಾ ಗಾಂವ್ಕರ್ "ಸ್ವಾತಂತ್ರ್ಯನೂ ಬೇಕು ಭೂಮಿನೂ ಬೇಕೆಂದು ಹೋರಾಡಿ ಯಶಸ್ವಿಯಾದ ಕಿಸಾನ್ ಸಭಾದ ಮುಂದುವರಿದ ಆಂದೋಲನವಿದು. ಜೋಯಿಡಾ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹಾಗೂ ತೀವ್ರ ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿರುವ ಜನತೆಯ ಮಾನವ ಹಕ್ಕುಗಳ ರಕ್ಷಣೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆಸಕ್ತಿ ವಹಿಸದೇ ಇರುವುದರಿಂದ ಕಳೆದ 25 ವರ್ಷಗಳಿಂದ ಸತತವಾಗಿ ಹೋರಾಟಗಳು ನಡೆಯುತ್ತಿವೆ. ಸೇತುವೆ, ರಸ್ತೆ, ಕುಡಿಯುವ ಮತ್ತು ಕೃಷಿಗೆ ಬೇಕಾಗುವ ನೀರು, ಹೆಜ್ಜೆ ಹೆಜ್ಜೆಗೂ ಎದುರಾಗುವ ಅರಣ್ಯ ಕಾಯ್ದೆಯ ತೊಡಕು, ಶಿಕ್ಷಣ, ಆರೋಗ್ಯ, ಸಾರಿಗೆ ಹೀಗೆ ಎಲ್ಲಾ ಹಂತದಲ್ಲಿ, ಎಲ್ಲಾ ಕ್ಷೇತ್ರಗಳಲ್ಲಿ ಇರುವ ವಿಭಿನ್ನ ಮೂಲಭೂತ ಸಮಸ್ಯೆಗಳನ್ನು ಪರಿಹರಿಸದೇ, ಪ್ರತಿದಿನವೂ ಎದುರಾಗುವ ಹತ್ತಾರು ಪ್ರಶ್ನೆಗಳನ್ನು ಇತ್ಯರ್ಥ ಮಾಡದೇ ಜನತೆಯ ಸಂಕಷ್ಟಗಳನ್ನು ಮಾತ್ರ ಆಕಾಶದೆತ್ತರಕ್ಕೆ ಬೆಳೆಸುತ್ತಲೇ ಇರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೇ. ಅದರಲ್ಲೂ ಜೋಯ್ಡಾದ ಅಭಿವೃದ್ಧಿಗೆ ಸಂಬಂಧಿಸಿದಂತೆ ನಡೆಯುತ್ತಿರುವ ಹೋರಾಟ ಮತ್ತು ಇಲ್ಲಿಯ ಸಮಸ್ಯೆ ಆಳುವವರಿಗೆ ಗೊತ್ತಿಲ್ಲ ಅಂತಲ್ಲ; ಇದನ್ನು ಅರ್ಥಮಾಡಿಕೊಳ್ಳಬೇಕಾದರೆ ತಪಸ್ಸು ಮಾಡಬೇಕಾಗಿಲ್ಲ ಅಥವಾ ಪಿ.ಎಚ್.ಡಿ. ಸಂಶೋಧನೆ ಮಾಡಬೇಕಾಗಿಲ್ಲ. ನಿಸರ್ಗ ವಿವೇಕ ಇರುವ ಯಾವುದೇ ಮನುಷ್ಯರಿಗೆ ಸರಳ ಸತ್ಯ ಗೊತ್ತಾಗುತ್ತದೆ. ಆದರೆ ಸಮಸ್ಯೆ ಅರ್ಥಮಾಡಿಕೊಳ್ಳುವ ಆಲಿಸುವ ವ್ಯವಧಾನ ಮತ್ತು ಪರಿಹಾರ ಕಂಡುಕೊಳ್ಳುವ ಆಸಕ್ತಿ ➚

ರೈತಾಪಿಗಳ ಈ ಕಾಲ್ನಡಿಗೆಯು ಸೌಲಭ್ಯದಿಂದ ವಂಚಿಸಿದವರ ಎದೆಯ ಮೇಲಿನ ಹೆಜ್ಜೆಯಾಗಿದೆ: -ಟಿ. ಯಶವಂತ

ಡಿಗ್ಗಿಯ ಗಾವಳಾದೇವಿಯಿಂದ ಪಾದಯಾತ್ರೆಯನ್ನು 27-2-2024 ರಂದು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ ಯಶ್ವಂತರು ತಾಲೂಕು ಕಾರ್ಯದರ್ಶಿ ರಾಜೇಶ ಗಾವಡಾ ಅವರಿಗೆ ಕಿಸಾನ್ ಸಭಾದ ಕೆಂಬಾವುಟ ನೀಡಿ ಉದ್ಘಾಟಿಸಿದರು.

ಕಾಳಿ ನದಿಯ ಹುಟ್ಟೂರಿನ ಸಮೀಪದ ಡಿಗ್ಗಿ ಗೌಳಾದೇವಿ ಸಭಾಂಗಣದಲ್ಲಿ ಅಣಿನೆರೆದ ರೈತಾಪಿ ಸ್ತೋಮವನ್ನು ಉದ್ದೇಶಿಸಿ ಕಾಲ್ನಡಿಗೆ ಉದ್ಘಾಟಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ ಯಶ್ವಂತ ಅವರು ಮಾತನಾಡಿ "ರಾಜ್ಯದ ರೈತ ಆಂದೋಲನದ ತಾಯಿ ಬೇರು ಉತ್ತರ ಕನ್ನಡದ ಕಿಸಾನ್ ಸಭಾದಿಂದ ನಡೆದ ರೈತ ಹೋರಾಟ. ಸ್ವಾಂತಂತ್ರ್ಯ ಹೋರಾಟದ ಕಾಲದಿಂದಲೂ ಸದಾ ಎಚ್ಚೆತ್ತಪ್ರಜ್ಞೆ ಕಾಯ್ದುಕೊಂಡು ರೈತಾಪಿಗಳ ಒಳಿತಿಗಾಗಿ ಶ್ರಮಿಸುತ್ತಿರುವುದು ಅಖಿಲ ಭಾರತ ಕಿಸಾನ್ ಸಭಾ (ಎಐಕೆಎಸ್) ಕರ್ನಾಟಕದಲ್ಲಿ ಇದರ ಘಟಕವಾಗಿ ಕೆಲಸ ಮಾಡುತ್ತಿರುವ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್ ಎಸ್) ಜೋಯಿಡಾದ ಅಭಿವೃದ್ಧಿ ವಿಷಯದಲ್ಲಿ ಜಿಲ್ಲಾ ಪಂಚಾಯತ್ ಗೆ ಪಾದಯಾತ್ರೆ, ತಾಲೂಕು ಆಡಳಿತಕ್ಕೆ ಪಾದಯಾತ್ರೆ, ಧರಣ, ರಸ್ತೆತಡೆಯಂತ ಹಲವು ಹೋರಾಟಗಳನ್ನು ನಡೆಸಿದ್ದು ತಮಗೆ ಗೊತ್ತಿದೆ. ಈಗ ತಾವು ಹಮ್ಮಿಕೊಂಡಿರುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಾಗೂ ಜಿಲ್ಲಾಡಳಿತಗಳ ಗಮನ ಸೆಳೆಯುವ ಐತಿಹಾಸಿಕ ರೈತ ಚಳುವಳಿಯ ಒಂದು ಮಹತ್ವದ ಅಧ್ಯಾಯವಾಗಿದೆ. ಈ ಭಾಗದಲ್ಲಿ ಮೂಲಸೌಕರ್ಯಗಳು ಇಲ್ಲದುದು ಕಣ್ಣಿಗೆ ರಾಚುವಂತೆ ಇದೆ. ರಸ್ತೆ ಸೇತುವೆಗಳೇ ಇಲ್ಲವೆಂದಮೇಲೆ ಮಳೆಗಾಲದಲ್ಲಿ ನಿಮ್ಮ ಪರಿಸ್ಥಿತಿ ಹೇಗಿರಬಹುದು? ಮಕ್ಕಳು ವಿದ್ಯಾರ್ಥಿಗಳ ಪರಿಸ್ಥಿತಿ ಏನಾಗಬಹುದು? ಹೆಜ್ಜೆಹೆಜ್ಜೆಗೂ ಅರಣ್ಯ ಇಲಾಖೆ ವನ್ಯಜೀವಿ ರಕ್ಷಣೆಯ ಸಲುವಾಗಿ ಜನತೆಯ ಬದುಕುವ ಹಕ್ಕನ್ನೇ ಕಸಿಯುತ್ತಿರುವುದರ ವಿರುದ್ಧ ನೀವು ಎಷ್ಟೊಂದು ಸೆಣಸುತ್ತಿರಬಹುದೆಂಬ ಅರಿವು ನಮಗಿದೆ. ಹಾಗಾಗಿ ಇಪ್ಪತ್ತು ವರ್ಷಗಳ ಹಿಂದಿನ ಪಾದಯಾತ್ರೆ ಮತ್ತು ಈಗಿನ ಪಾದಯಾತ್ರೆಗಳು ನಮ್ಮನ್ನು ನಿರ್ಲಕ್ಷಿಸಿದ, ಸೌಲಭ್ಯಗಳಿಂದ ವಂಚಿಸಿದ ಜನಪ್ರತಿನಿಧಿಗಳ ಎದೆಯ ಮೇಲಿನ ಹೆಜ್ಜೆಗಳು. ಪಕ್ಕದ ಗೋವಾದಲ್ಲಿ ಕುಣಬಿಗಳು ಎಸ್ ಟಿ ಆದರೂ ಈ ಭಾಗದಲ್ಲಿ ಅಧಿಕೃತ ಬುಡಕಟ್ಟೆಂದು ಪರಿಗಣಿಸದ,



ಈ ಭಾಗದ ಎಲ್ಲಾ ಜನತೆಯ ಪ್ರಶ್ನೆಯನ್ನು ಒಮ್ಮೆಯೂ ಸಂಸತ್ತಿನಲ್ಲಿ ಮಾತಾಡದವರು ಮತ ಕೇಳಲು ಬರುತ್ತಾರೆ, ಅವರಿಗೆ ನಾಚಿಕೆ ಆಗಬೇಕು ಮತ್ತು ನೀವು ನಿಮ್ಮ ಸ್ವಾಭಿಮಾನದಿಂದ ಕೆಂಬಾವುಟ ಎತ್ತಿ ಹಿಡಿದು ತೀರಾ ಸರಳ ಬೇಡಿಕೆಗಳನ್ನು ಕೂಡ ಈಡೇರಿಸದ ಸರ್ಕಾಗಳ ನೀತಿ ಬಯಲು ಗೊಳಿಸುವ ಈ ಹೋರಾಟ ಯಶಸ್ವಿಯಾಗಲಿ. ಕೆಪಿಆರ್ಎಸ್ ಪರವಾಗಿ ಈ ಜೀವನಾವಶ್ಯಕ ಬೇಡಿಕೆಗಳನ್ನು ಮುಖ್ಯಮಂತ್ರಿಗಳು ಮತ್ತು ಸಂಬಂಧಿಸಿದವರ ಗಮನಕ್ಕೆ ತರುತ್ತೇವೆ" ಎಂದರು. ಗ್ರಾಮ ಪಂಚಾಯತ್ ಸದಸ್ಯರು ಪಾದಯಾತ್ರೆಗೆ ಶುಭಕೋರಿದರು. ಜಿಲ್ಲಾ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ತಾಲೂಕು ಅಧ್ಯಕ್ಷರಾದ ಪ್ರೇಮಾನಂದ ವೆಳಿಪ, ಖಜಾಂಚಿ ಶಾಂತ ವೆಳಿಪ್, ದಿಗಂಬರ ದೇಸಾಯಿ, ಸುಭಾಸ್ ಮಿರಾಶಿ, ಸಿಐಟಿಯುನ ಯಮುನಾ ಗಾಂವ್ಕರ್, ರತ್ನಾಕರ ದೇಸಾಯಿ ತೆರಾಳಿ ಸಾಂದರ್ಭಿಕ ಮಾತಾಡಿದರು.. ಡಿಗ್ಗಿ ಗವಳಾದೇವಿ-ಜೋಯಿಡಾ ಪಾದಯಾತ್ರೆಯಲ್ಲಿ ಗಾವಳದೇವಿ ಡಿಗ್ಗಿ, ಮ್ಹಾಯಿರೆ, ಕಣ್ಣೆ, ದೂಧಮಾಳಾ, ಕರಂಜೆ, ಬೊಂಡೇಲಿ, ಅಸುಳಿ, ಸೋಲಿಯೆ, ಕಿಂದಳೆ, ಬಾಜಾರಕುಣಂಗ್, ಪಾಡಸೇತ್, ವಿರಲ್, ಘಾಟ್ ಕುಣಂಗ್, ಕುಕುರ್ಡೆ ಊರುಗಳ ಪರವಾಗಿ ಸುಭಾಷ್ ಮಿರಾಶಿ-ಡಿಗ್ಗಿ, ದೇವಿದಾಸ ಮಿರಾಶಿ-ಬೊಂಡೇಲಿ, ಪ್ರಕಾಶ ಮಿರಾಶಿ-ಬೊಂಡೇಲಿ, ಅನಂತ ದೇಸಾಯಿ-ಕರಂಜೆ, ಶಿವಾ ಮಿರಾಶಿ-ಕಣ್ಣೆ, ಚಂದ್ರಶೇಖರ ವೇಳಿಪೆ-ದುಧಮಳಾ, ಶ್ಯಾಬಾ ಮಿರಾಶಿ-ಮಾಯರೇ, ವಿರೋಭಾ ಮಿರಾಶಿ- ಡಿಗ್ಗಿ ಗಣಪತಿ ಗಾವಡಾ- ಡಿಗ್ಗಿ, ಮಹಾದೇವ ಮಿರಾಶಿ-ಅಸುಳ್ಳಿ, ಮನೋಹರ ಮಿರಾಶಿ-ಅಸುಳ್ಳಿ, ಶಂಕರ ಮಿರಾಶಿ-ಸೋಲಿಯೇ ನೇತೃತ್ವ ನೀಡಿದರು.

ಇರಬೇಕು ಅಷ್ಟೆ. ಅರಣ್ಯ ಕಾಯ್ದೆಗಳಲ್ಲಿರುವ ಜನವಿರೋಧಿಯಾದ ಅನೇಕ ಅಂಶಗಳನ್ನು ಈ ಭಾಗದಿಂದ ಸತತವಾಗಿ ಆರಿಸಿಹೋದ ಬಿಜೆಪಿಯ ಸಂಸದ ಅನಂತಕುಮಾರ ಹೆಗಡೆ ಒಮ್ಮೆಯೂ ಸಂಸತ್ತಿನಲ್ಲಿ ಮಾತಾಡಲಿಲ್ಲ. ಜನತೆಯ ಸಂಕಷ್ಟದ ಕಾಲದಲ್ಲಿ ಬಾಯಿ ಮುಚ್ಚಿಕುಳಿತರು. ದೊಡ್ಡದೊಡ್ಡ ರಾಜಕೀಯ ಪಕ್ಷಗಳು ಇವರನ್ನು ಕಠಿಣವಾಗಿ ಪ್ರಶ್ನಿಸುವ ಅಥವಾ ತಮ್ಮದೇ ರಾಜ್ಯ ಸರ್ಕಾರದ ಪ್ರತಿನಿಧಿಗಳಿದ್ದರೂ ಪ್ರಬಲ ಹೋರಾಟಗಳನ್ನು ಮಾಡುವ ಸ್ಪಷ್ಟ ಕಣ್ಣೋಟ ಹೊಂದಲೇ ಇಲ್ಲ. ಈ ಭಾಗದ ಜನತೆ ರಾಜಕೀಯವಾಗಿ ನಿರ್ಣಾಯಕರಲ್ಲ ಎಂಬ ತಾತ್ಸಾರ ಆಳುವವರಿಂದ ಎದ್ದು ಕಾಣುತ್ತಿದೆ. ಸರ್ಕಾರಕ್ಕೆ ಜೋಯಿಡಾದ ಸಂಪತ್ತು ಬೇಕು; ಆದರೆ ಜನತೆಯ ಬದುಕುವ ಹಕ್ಕಿನ ರಕ್ಷಣೆ ಬೇಡವಾಗಿದೆ. ಹಾಗಾಗಿ ಜೋಯಿಡಾ ತಾಲೂಕಿನ ಸಮಗ್ರ ಅಭಿವೃದ್ಧಿಗೆ ರಾಜಕೀಯ ಇಚ್ಛಾಶಕ್ತಿ ಮತ್ತು ಆಡಳಿತಾತ್ಮಕ ಬದ್ಧತೆಯ ಕೊರತೆ ನೀಗಿಸಿಕೊಳ್ಳಿ" ಎಂದು ಆಗ್ರಹಿಸಿದರು. ಸಭೆಯನ್ನುದ್ದೇಶಿಸಿ ಪಂಚಾಯತ್ ಸದಸ್ಯರಾದ ರತ್ನಾಕರ ದೇಸಾಯಿ ಮತ್ತು ದಿಗಂಬರ ದೇಸಾಯಿ ಮಾತಾಡಿದರು. ಪ್ರಕಾಶ ನಿರ್ವಹಿಸಿದರು.

ಸಿಸ್ಯೆ ಸಭಾಭವನದಿಂದ ಹೊರಟ ಶಿಸ್ಯೆ–ತೇರಾಳಿ– ಜೋಯಿಡಾ ಕಾಲ್ನಡಿಗೆಯಲ್ಲಿ ಬಾಮಣೆ, ಪಾತಾಗುಡಿ, ಶಿರವಳೆ, ತೆರಾಳಿ, ಡೇರಿಯೆ ಇನ್ನೂ ಅನೇಕ ಗ್ರಾಮಗಳ ಪರವಾಗಿ ರತ್ನಾಕರ ದೇಸಾಯಿ, ತೇರಾಳಿ, ಪ್ರಕಾಶ ಮಿರಾಶಿ, ಸಿಸ್ಯೆ, ದತ್ತಾ ಮಿರಾಶಿ, ಸಿಸ್ಯೆ, ನಂದಾ ಗಾವಡಾ, ಭಾಮುಣೆ, ನಾಗೇಶ ಗಾವಡಾ, ಭಾಮುಣೆ, ಕಮಲಾಕರ ಗಾವಡಾ, ಶೇರವಳೆ ಪಾಲ್ಗೊಂಡಿದ್ದರು. ನಂತರ ಕಾರವಾರ ಬೆಳಗಾಂವ್ ಮುಖ್ಯ ರಸ್ತೆಗೆ ರಾತ್ರಿ 9.30 ಕ್ಕೆ ತಲುಪಿ ಕಿರವತ್ತಿಯ ಕಾಡಿನಲ್ಲಿ ಠಿಕಾಣಿ ಹೂಡಲಾಯಿತು. ಅದಾಗಲೇ ಡಿಗ್ಗಿ, ವಾಗೇಲಿ ಭಾಗದ ಕಾಲ್ನಡಿಗೆ ಹೋರಾಟ ಯಾತ್ರೆ ಬಂದು ಸೇರಿತು. ಅಲ್ಲೇ ಎಲ್ಲರೂ ಕೂಡಿ ಊಟೋಪಹಾರ ವಿಶ್ರಾಂತಿ ಎಲ್ಲವನ್ನೂ ಪೂರೈಸಿಕೊಂಡರು.

ಮನುಷ್ಯರನ್ನು ಉಳಿಸುವ ಯೋಜನೆಯನ್ನೂ ಸರ್ಕಾರ ಜಾರಿ ಮಾಡಲಿ. ಶ್ಯಾಮನಾಥ ನಾಯ್ಕ ಆಗ್ರಹ

ವಾಗೇಲಿ ಊರಿನಿಂದ ಅದಾಗಲೇ ರೈತಾಪಿ ಜನರು ನಡಿಗೆಗೆ ಸುಸಜ್ಜಿತರಾಗಿ ಮುನ್ನಡೆದಿದ್ದರು. ಇವರನ್ನುದ್ದೇಶಿಸಿ ಬಾವುಟ ನೀಡಿ ಉದ್ಘಾಟಿಸಿದ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ ಮಾತನಾಡುತ್ತಾ "ನಮ್ಮ ಅಭಿವೃದ್ಧಿಗೆ ಹೀನತೆಗೆ ಬಂಡವಾಳಶಾಹಿ ರಾಜಕಾರಣದ ಮೋಸದ ನೀತಿಯೇ ಕಾರಣ ಆಗಿದೆ. ಈವರೆಗೆ ಈ ಕ್ಷೇತ್ರವನ್ನು ಪ್ರತಿನಿಧಿಸಿದ ರಾಜಕೀಯ ಪಕ್ಷಗಳ ಜನ ಪ್ರತಿನಿಧಿಗಳು ಸರಿಯಾಗಿ ಆತ್ಮಾವಲೋಕನ ಮಾಡಿಕೊಳ್ಳಿ. ಆನರ ಮುಗ್ಧತೆಯನ್ನು ಬಲಿಪಡೆಯಬೇಡಿರಿ. ಅಭಿವೃದ್ಧಿ ಎಂದರೇನೆಂದು ತಿಳಿಯವವರು ಕೆಲವು ಪ್ರತಿನಿಧಿಗಳು ಅಧಿಕಾರಿಗಳೂ ಇದ್ದಾರೆ, ಸ್ವ ಅಭಿವೃದ್ಧಿಯ ಕಡೆಗೆ ಗಮನಕೊಟ್ಟವರು ಹಲವರಿದ್ದಾರೆ. ಈ ಭಾಗದಲ್ಲಿ ಕುಂಬ್ರಿ ಜಮೀನಿನ ಸಮಸ್ಯೆ, ರಸ್ತೆ ಸೇತುವೆ ಸಮಸ್ಯೆ, ಅತಿಕ್ರಮಣ ಭೂಮಿ ಸಮಸ್ಯೆ, ವಿದ್ಯುತ್ ಯೋಜನೆಯ ನಿರಾಶ್ರಿತರ ಸಮಸ್ಯೆ ನ್ಯಾಶನಲ್ ಪಾರ್ಕ ಸಮಸ್ಯೆ ಜೊತೆಗೆ ಈಗ ಹುಲಿಯೋಜನೆಯ ಭೀಕರ ಸ್ಥಿತಿ ಜೀವಂತ ಇದೆ; ಇವರ ವಿರುದ್ಧ ಜನ ಸಂಘಟಿತ ಆಗ್ತಿದ್ದಾರೆ. ಮಹಾನಗರಕ್ಕೆ ವಿದ್ಯುತ್ ಕೊಡುವ ಜೋಯಿಡಾ ಮಾತ್ರ ಕತ್ತಲಲ್ಲೇ ಇರಬೇಕಾ? ಮನುಷ್ಯರನ್ನು ಉಳಿಸುವ ಯೋಜನೆಯನ್ನೂ ಸರ್ಕಾರ ಜಾರಿ ಮಾಡಲಿ. ಇನ್ನು ಯಾವ ಸಮಸ್ಯೆ ಎದುರಾಗುತ್ತದೋ ಖಾಯಂ ರಾಜಕಾರಣದಲ್ಲೇ ಇರುವವರೇ ಹೇಳಬೇಕು. ಈ ಎಲ್ಲ ಕಾನೂನು ಆಗ್ತಿರೋದು ಎಲ್ಲಿ ಎಂದರೆ ವಿಧಾನ ಸಭೆಯಲ್ಲಿ ಮತ್ತು ಸಂಸತ್ತಿನಲ್ಲಿ. ರೈತ ಸಂಘಟನೆ ನಾವು ಹೋರಾಟ ಮಾಡಲು ಎಂದೂ ಹಿಂದೆ ಬಿದ್ದಿಲ್ಲ ಆದರೆ ಹೋರಾಟ ಮುರಿಯುವ ಹಣವಂತರ ರಾಜಕಾರಣ ಅರಿಯಬೇಕಿದೆ" ಎಂದರು. ವಾಗೇಲಿ–ಜೋಯಿಡಾ ಪಾದಯಾತ್ರೆಯಲ್ಲಿ ಖಾನಗಾಂವ್, ಮಾರ್ಲಿ, ಕಟೋರ್ಳಿ, ಕಸಂಬಾ, ಬುಳಬುಳೆ, ಕರಂಜೋಯಿಡಾ, ಮುಡಿಯೆ, ವಾಗ್ಬಂಧ್ ಊರುಗಳ ಪರವಾಗಿ ಮಹಾದೇವ ಸಾವಂತ, ಬೀಕೋ ಸಾವಂತ, ಚಂದು ಸಾವಂತ, ವಿಧ್ಯಾ ಸಾವಂತ, ಊರ್ಮಿಲಾ ವೇಳಿಪ ಕಾರಟೋ, ದಿವ್ಯಾ ನಾಯ್ಕ ಕಸಂಬಾ, ಕೃಷ್ಣ ಸಾವಂತ, ಉಮೇಶ ಸಾವಂತ, ಶಾಂತಾ ವೇಳಿಪ ಕಾರಟೋಳಿ, ಯಶವಂತ ವೇಳಿಪ ಕಾರಟೋಳಿ, ಪ್ರಕಾಶ ವೇಳಿಪ, ಮುಡಿಯೇ, ದಿಗಂಬರ ದೇಶಾಯಿ ಕರಂಜೋಯಿಡಾ, ದಯಾನಂದ ನಾಯ್ಕ, ಕಸಂಬಾ, ಜಯಂತ ವೇಳಪ, ಮುಡಿಯೇ, ರತ್ನಾಕರ ನಾಯ್ಕ, ಮುಡಿಯೇ, ಚುಡಗೋ ನಾಯ್ಕ, ಮುಡಿಯೇ, ಉಮೇಶ ವೇಳಿಪ ಕುಂಡಲ ನೇತೃತ್ವ ವಹಿಸಿದ್ದರು. ದಿಟ್ಟವಾಗಿ ಘೋಷಣೆ ಹಾಕುತ್ತ, ತಮ್ಮನ್ನು ಕತ್ತಲಲ್ಲಿಟ್ಟ ರಾಜಕಾರಣಕ್ಕೆ ಧಿಕ್ಕಾರ ಹಾಕುತ್ತಾ ಕೆಂಬಾವುಟ ಹಿಡಿದು ಮುನ್ನಡೆದರು.

ಈ ಮೂರೂ ಕಡೆಗಳಲ್ಲಿ ತಾಲೂಕು ಅಧ್ಯಕ್ಷರಾದ ಪ್ರೇಮಾನಂದ ವೆಳಿಪ್ ಪ್ರಾಸ್ತಾವಿಕ ಮಾತಾಡಿ ಜೋಯಿಡಾ ಗಡಿಭಾಗದವರ ಸಂಕಷ್ಟಗಳ ಹೆಚ್ಚಳಕ್ಕೆ ಕಾರಣವಾದ ಆಳುವವರ ನೀತಿಗಳನ್ನು ವಿವರಿಸಿದರು.

ಕಾಟೋರ್ಳಿ ಗ್ರಾಮಕ್ಕೆ ಪಾದಯಾತ್ರಿಗಳು ಬರುತ್ತಿದ್ದಂತೆ ಮಕ್ಕಳು ವಿಶೇಷವಾಗಿ ಸ್ವಾಗತಿಸಿದರು. ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ)ನ ವೀರೇಶ್ ರಾಠೋಡ್, ರೋಶನ್ ಸಾವಂತ್, ರಾಜು, ಲವ, ವಿಭಾಕರ ಸಾವಂತ, ಯುವರಾಜ್ ಪ್ರಾಣೇಶ್ ವೆಳಿಪ್ ಪಾದಯಾತ್ರೆಯ ಜೊತೆಗಿದ್ದರು. ಕಸಂಬಾದಲ್ಲಿ ಪಂಚಾಯತ್ ಸದಸ್ಯರು ಅಧ್ಯಕ್ಷರು ಪಾಲ್ಗೊಂಡರು.

ಡಿಗ್ಗಿ, ಸಿಸ್ಯೆ ಮತ್ತು ವಾಗೇಲಿ ಭಾಗದ ಮೂರೂ ಕಾಲ್ನಡಿಗೆ ಹೋರಾಟ ಯಾತ್ರೆ ಬಂದು ವಾಗ್ಬಂಧ ಎಂಬಲ್ಲಿ ಚೆಕ್ ಪೋಸ್ಟ್ ಬಳಿ ಸೇರಿತು. ಎಲ್ಲವೂ ಸಮ್ಮಿಳನಗೊಂಡು ಮುಂದೆ ಸಾಗಿ ಕಿರವತ್ತಿ ಕುಂಬಾರವಾಡಾದ ಕಾಡಿನಲ್ಲಿ ಠಿಕಾಣಿ ಹೂಡಿದರು. ಅಲ್ಲೇ ಎಲ್ಲರೂ ಕೂಡಿ ಊಟೋಪಹಾರ ವಿಶ್ರಾಂತಿಯನ್ನು ಪಡೆದರು. ಕಟ್ಟಿಗೆಯಿಂದ ಶಿಬಿರಾಗ್ನಿಯನ್ನು ತಯಾರಿಸಿ ಅದರ ಸುತ್ತ ಕುಳಿತರು. ತಾವು ಜೀವನದಲ್ಲಿ ಅನುಭವಿಸಿದ್ದನ್ನು, ಈಗ ಜೀವನೋಪಾಯಕ್ಕಾಗಿ ಕ್ರಮಿಸಿದ ದಾರಿಯನ್ನು ನೆನಪಿಸಿಕೊಂಡರು.

ಅಷ್ಟರಲ್ಲಿ ರಾತ್ರಿ 10.30 ಕ್ಕೆ ಪೋಲಿಸ್ ಹಿರಿಯ ಅಧಿಕಾರಿಗಳು ಬಂದು ಹೋರಾಟಗಾರರು ಜೋಯಿಡಾದ ತಹಸಿಲ್ದಾರರ ಕಛೇರಿ ಎದುರು ಹೋಗಬಾರದೆಂದು ದೂರದಲ್ಲಿರುವ ಆಟದ ಮೈದಾನಕ್ಕೆ ಮಾತ್ರ ಹೋಗಬೇಕೆಂದು ಹೇಳಿದರು. ಆದರೆ ಯಾರೂ ಕೂಡ ಇದನ್ನು ಒಪ್ಪಲಿಲ್ಲ. "ಮೊದಲ ದಿನದಂದು ಆರಕ್ಷಕರು ನಲವತ್ತು ಕಿಮಿ ಯಾರೂ ಇರಲಿಲ್ಲ. ಎರಡನೇ ದಿನದ ತಮ್ಮ ಪಾದಯಾತ್ರೆಯಲ್ಲಾದರೂ ಸ್ವತಃ ಪಾಲ್ಗೊಳ್ಳಿ ನಮ್ಮಂತೆ ನಡೆಯಿರಿ" ಎಂದು ವಿನಂತಿಸಿದರು. ಜೋಯಿಡಾ ಹೋರಾಟದ ವೀರಗಾಥೆ ಇರುವ ಪುಸ್ತಕವನ್ನು ನೀಡಿ ರಾತ್ರಿಯೇ ಪೋಲಿಸರನ್ನು ಬೀಳ್ಕೊಟ್ಟರು.

ಎರಡನೇ ದಿನ ಬೆಳಗಿಂಜಾವ ವೈಯಕ್ತಿಕ ಶುಚಿ ಕೆಲಸ ಮುಗಿಸಿ ಉಪಾಹಾರ ಸೇವಿಸಿ 8 ಗಂಟೆಗೇ ಉತ್ಸಾಹದಿಂದ ಅಣಿನೆರೆದರು. ಸುಡು ಬಿಸಿಲ ಮಧ್ಯಾಹ್ನ ಭಾರೀ ಘೋಷಣೆಗಳೊಂದಿಗೆ ಜೋಯಿಡಾ ಕೇಂದ್ರವನ್ನು ತಲುಪಲಾಯಿತು.

ತಮಗೆ ತೊಂದರೆ ನೀಡುವ ಅರಣ್ಯ ಇಲಾಖೆಯ ಎದುರು, ಪಿಡಬ್ಲುಡಿ, ಜಿಪಂ ಕಛೇರಿಯ ಎದುರು ಸಾಗುವಾಗ ಇನ್ನಷ್ಟು ಆಕ್ರೋಶದ ಘೋಷಣೆಗಳು ಮೊಳಗಿದವು.

ಹೋರಾಟಗಾರರು ತಹಶಿಲ್ದಾರರ ಕಛೇರಿಯಿಂದ ಬಹುದೂರ ಇರುವ ಕ್ರೀಡಾಂಗಣಕ್ಕೆ ತೆರಳಲು ಸೂಚಿಸಿದ ಪೋಲಿಸರಿಗೂ ತಹಸಿಲ್ದಾರರಿಗೂ ಆ ಆದೇಶವೇ ಸರಿ ಇಲ್ಲವೆಂದು ಹೇಳಿದ ಹೋರಾಟಗಾರರು ತಹಶಿಲ್ದಾರರ ಕಛೇರಿ ಸಮ್ಮುಖದಲ್ಲೇ ಠಿಕಾಣಿ ಹೂಡಿದರು. ಅಲ್ಲೇ ಹಾಡು, ಘೋಷಣೆಗಳು ಭಾಷಣಗಳು ನಡೆದವು.

ಮಾನ್ಯ ತಹಶಿಲ್ದಾರರ ಕಛೇರಿ ಎದುರು ಬಂದಾಗ ತಮ್ಮ ಬೇಡಿಕೆಗಳ ಕುರಿತು ಹೋರಾಟಗಾರರ ಗಟ್ಟಿಸ್ವರದ ಅರ್ಥಪೂರ್ಣ ಘೋಷಣೆ ಕೇಳಿ ತಾಲೂಕು ಆಡಳಿತ ದಂಗು ಬಡಿದಂತೆ ಬೆರಗಾಗಿದ್ದು ಕಂಡುಬಂತು. ಅಧಿಕಾರಿಗಳ ಎದುರು ಬಹಿರಂಗ ಸಭೆ ನಡೆಯಿತು. ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ ಯಶವಂತ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ಯಾಮನಾಥ ನಾಯ್ಕ, ತಾಲೂಕು ಅಧ್ಯಕ್ಷರಾದ ಪ್ರೇಮಾನಂದ ವೇಳಿಪ್, ಕಾರ್ಯದರ್ಶಿ ರಾಜೇಶ ಗಾವಡಾ, ಸಿಐಟಿಯು ರಾಜ್ಯ ಕಾರ್ಯದರ್ಶಿ ಯಮುನಾ ಗಾಂವ್ಕರ್, ದಲಿತ ಹಕ್ಕುಗಳ ಸಮಿತಿಯ ಡಿ. ಸ್ಯಾಮ್ಸನ್, ದಿಗಂಬರ ದೇಸಾಯಿ, ರತ್ನಾಕರ ದೇಸಾಯಿ, ಸುಭಾಷ್ ಮಿರಾಶಿ, ಶಾಂತ ವೆಳಿಪ್, ಉಮೇಶ್ ವೆಳಿಪ್ ಮಾತಾಡಿದರು. ಜೋಯಿಡಾ ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಜರಿದ್ದರು.

ತಾಲೂಕು ಆಡಳಿತದಿಂದ ಜಿಲ್ಲಾಧಿಕಾರಿಗಳನ್ನು, ಅಸಿಸ್ಟಂಟ್ ಕಮಿಶನರ್ ರನ್ನು ಸಂಪರ್ಕಿಸಿ ಎರಡು ಹಂತದಲ್ಲಿ ರೈತ ಸಂಘದ ಜೊತೆಗೆ ಸಭೆ ನಡೆಸಿದೆ. ಅರಣ್ಯ, ಪಿಡಬ್ಲುಡಿ, ಜಿಪಂ, ಅರಣ್ಯ ಹೀಗೆ ವಿವಿಧ ಇಲಾಖೆಗಳ ಅಧಿಕಾರಿಗಳ ಕರೆಯಿಸಿ ರೈತರ ಸಮ್ಮುಖದಲ್ಲೇ ಚರ್ಚಿಸಿದ ಮಾನ್ಯ ತಹಸಿಲ್ದಾರರು, ರಸ್ತೆ, ಸೇತುವೆ, ವಸತಿ ಬಸ್, ಮಧ್ಯಾಹ್ನದ ಬಸ್, ಇತರ ಮೂಲ ಸೌಕರ್ಯಗಳ ಬಗ್ಗೆ ಪತ್ರ ಬರೆದು ತಾಕೀತು ಮಾಡಿದರು. ಆ ಕುರಿತು ಲಿಖಿತವಾಗಿ ಸಂಘಟಕರಿಗೂ ನೀಡಿದರು. ವಾಗೇಲಿಗೆ ಶೀರ್ಘವಾಗಿ ಬಸ್ಸು ಬಿಡಲು ಒಪ್ಪಿದರು. ತೆರಾಳಿ ಡಿಗ್ಗಿ ಮಾರ್ಗದ ಬಸ್ ಕುರಿತು ಸ್ಥಳ ಸರಿಯಾಗಿ ಪರಿಶೀಲಿಸಿ ಬಸ್ ಬಿಡುವುದಾಗಿ ಚರ್ಚಿಸಿದರು. ಪ್ರಾಂತ ರೈತ ಸಂಘ ಡಿಗ್ಗಿ ತೆರಾಳಿ ಬಸ್ ಬಿಡಲೇಬೇಕೆಂಬ ಬೇಡಿಕೆ ಸಡಿಲಿಸುವ ಪ್ರಶ್ನೆಯೇ ಇಲ್ಲ ಎಂದು ತಿಳಿಸಿದೆ. ಸೇತುವೆ ನಿರ್ಮಾಣ ಕೆಲಸ ಕಾಮಗಾರಿ ವಿಳಂಬ ಮಾಡದಂತೆ ನೋಡಿಕೊಳ್ಳಲು, ಹಾಳಾಗಿ ಹೋದಲ್ಲಿ ದುರಸ್ತಿ ಆಗಬೇಕೆಂದು. ಕಳಪೆ

ಪುಟ 15 ಕ್ಕೆ

ಹೋರಾಟದ ಹೆಜ್ಜೆಹೆಜ್ಜೆಗೂ ಹುಟ್ಟಿಕೊಂಡ ಹಾಡಿನ ರಂಗು ಹೀಗಿದೆ

ಆಯ್ಕಯಾ ಆಯ್ಕಯಾ
ಅರೆ ಸರ್ಕಾರ್ ಆಯ್ಕಯಾ
ರೈತ್ ಲೋಗ್ ಯವು ಲಾಗ್ಲಾ ಯವು ಲಾಗ್ಲಾ
ಖೆಡೆ ಗಾಂವಾತ್ಲೆ ಲೋಗ್ ಯೆವು ಲಾಗ್ಲಾ
ವಾಟ್ ಸೊಡಾ ವಾಟ್ ಸೊಡಾ
ರೈತ್ ಲೋಗ್ ಯವು ಲಾಗ್ಲಾ..... ॥

ಆಯ್ಕಯಾ ಆಯ್ಕಯಾ
ಬಸ್ ಜಾಯ್ ಬ್ರಿಜ್ ಜಾಯ್
ರಸ್ತೊ ಜಾಯ್ ಜಮೀಣ್ ಜಾಯ್
ಮೂಳ್ ಸೌಕರ್ಯ ಅಮ್ಕಾ ಜಾಯ್॥

ಸದ್ದಾ ಚಲನ್ ಯತಾ ಚಲೋನ್ ವತಾ
ಪಾಠಿ ಪಡ್ನಾ ಪಾಠೀ ವತ್ನ
ಆಮಿ, ಕೆನ್ನಾಬಿ ಪಾಠಿ ಪಡ್ನಾ ಪಾಠೀ ಸರ್ನಾ
ಅರೆ ಸರ್ಕಾರ್ ಆಯ್ಕಯಾ ಆಯ್ಕಯಾ ॥

ಪೋಲಿಸ್ ಉರೋ ಲಾಠಿ ಮಾರೋ
ಫಾರೆಸ್ಟರ್ ಯವೊ ಭೋ ಮಾರೋ
ಕೊಣ್ಣಿ ಯವು ಕಾಯ್ಯೀ ಕರು
ಏಕೀ ರಾವ್ತಾ ಏಕೀ ರಾವ್ತಾ
ಆಮಿ ಕೆನ್ನಾಬಿ ಏಕೀ ಉರ್ತಾ ॥

ವಾಗ್ ಯೆವೂ ವಾಸೆಲ್ ಯೆವು
ದಿವೋಡ್ ಉರೋ ಡುಕ್ಕರ್ ಉರೋ
ಗಯೆರೆಡೊ ಉರೋ ಕಾಯ್ಯೀ ಉರೋ
ಕೆನ್ನಾ ಭೀನಾ ಪಾಠೀ ಸರ್ನಾ
ಚಲತ್ ವಯ್ತಾ ಚಲತ್ ಯತಾ
ಚಮ್ಕುನ್ ವಯ್ತಾ ಚಮ್ಕೂನ್ ಯತಾ...
ಕೆನ್ನಾಭೀ ಪಾಠಿ ಪಡ್ನಾರೆ...॥

ಖಡ್ಡೆ ಉರೊ ಧೂಳ್ ಉರೊ
ಚಡಾವ್ ಉರೊ ದೇವಣಿ ಉರೊ
ಮಾತಿ ಉರೊ ಗುಂಡೆ ಉರೊ
ಚಲತ್ ಯತಾ ಚಲತ್ ವೈಯ್ತಾ...
ಕೆನ್ನಾಭಿ ಪಾಠಿ ಪಡ್ನಾ ಪಾಠಿ ಯಯ್ನಾ ॥

ಪಾವ್ಸ್ ಯೆವೂ ಪೂರ್ ಯೆವೂ
ಹೂನತ್ ಉರೋ ಸಾವಳಿ ಉರೊ
ವಾರೋ ಯೆವೂ ವಾದಳ್ ಯೆವೂ
ಚಮ್ಕೂನ್ ಯತಾ ಚಮ್ಕೂನ್ ವೈತಾ॥

ಜವಣ್ ನಾಸೊ ಭಾಕ್ರಿ ನಾಸೋ
ಚಾಯ್ ನಾಸೋ ಪಾಣಿ ನಾಸೊ
ಫುಡೇ ವತಾ ಫುಡೆ ವತಾ
ಕೆನ್ನಾಬಿ ಪಾಠಿ ಪಡ್ನ ಪಾಠಿ ಯಯ್ನಾ॥

ಘಾಮ್ ಯೆವು ವಾಸ್ ಯೆವು
ಫೊಡ್ ಯೆವೂ ರಗತ್ ಎವೂ
ಜಾಮ್ ಜಾಯ್ನಾ ಜಾಮ್ ಜಾಯ್ನಾ
ಕೆನ್ನಾಭಿ ಜಾಮ್ ಜಾಯ್ನಾ॥

ರಾತಿ ಜಾವು ದೀಸ್ ಜಾವು
ಕೆನ್ನಾಬಿ ಉಕ್ಲೂನ್ ಹೊರ್ತಾ
ಥಂಡಿ ಉರೊ ಗರ್ಮಿ ಉರೊ
ಚಮ್ಕೂನ್ ವೈತಾ ಚಮ್ಕೂನ್ ಯತಾ॥

ನೆಂಟೆ ಉರೋ ದಾಂಟೆ ಉರೊ
ಕಾಟೆ ಉರೋ ಪಾತರ್ ಉರೊ
ಚಪ್ಪಲ್ ಆಸೊ ಚಪ್ಪಲ್ ನಾಸೊ
ಪಾಠೀ ಪಡ್ನಾ ಪಾಠಿ ಯಯ್ನಾ॥

ಜೀವ್ ಆಸೊ ಜೀವ್ ನಾಸೋ
ಕೆನ್ನಾಬಿ ಉಕ್ಲೂನ್ ಹೊರ್ತಾ
ಉಕ್ಲೂನ್ ಹಾಟ್ತಾ...
ರಾತ್ ಆಸೂ ದೀಸ್ ಆಸು
ಉಕ್ಲೂನ್ ಹೊರ್ತಾ...ಉಕ್ಲೂನ್ ಹಾಟ್ತಾ...
ಕೆನ್ನಾಭಿ ಫಾಠಿ ಪಡ್ನಾ ಫಾಠಿ ಯಯ್ನಾ ॥

ಯಮುನಾ ಗಾಂವ್ಕರ್,
ಜೋಯಿಡಾ

‘ಅಮೃತ್ ಭಾರತ್ ಸ್ಟೇಷನ್ ಯೋಜನೆ’– ಖಾಸಗಿಯವರ ತೆಕ್ಕೆಗೆ ರೈಲು ನಿಲ್ದಾಣಗಳು............

ಪುಟ 11 ರಿಂದ

ಗುರಿಯನ್ನು ಮೋದಿ ಸರ್ಕಾರ ಹೊಂದಿತ್ತು. ಇದರಲ್ಲಿ ರೈಲ್ವೇ ಪಾಲು ರೂ. 1.52 ಲಕ್ಷ ಕೋಟಿ (1.52 ಟ್ರಿಲಿಯನ್). ಅಂದರೆ, ಒಟ್ಟು NMP ಯ ಕಾಲುಭಾಗದಷ್ಟಿದೆ.

NMP ಅಡಿಯಲ್ಲಿ, 23 ರಲ್ಲಿ ರೈಲ್ವೇಗಳು 120 ನಿಲ್ದಾಣಗಳು, 30 ರೈಲುಗಳು ಮತ್ತು 1,400 ಕಿಮೀ ಟ್ರ್ಯಾಕ್ ಗಳನ್ನು ಹಣಗಳಿಸುವ ಅಗತ್ಯವಿತ್ತು. ಆದರೆ, ಇದನ್ನು ನಿರೀಕ್ಷಿಸಿದ ಮಟ್ಟದಲ್ಲಿ ಸಾಧಿಸಲು ಸಾಧ್ಯವಾಗಲಿಲ್ಲ. 2022 ರಲ್ಲಿ ರೂ. 18,000 ಕೋಟಿ ಗುರಿಯ ಬದಲಾಗಿ ಕೇವಲ ರೂ. 800 ಕೋಟಿ ಹಣಗಳಿಕೆ ಮಾಡಿದೆ. ಹಲವು ಕ್ರಮಗಳ ಮೂಲಕ ಈ ಅತ್ಯಲ್ಪ ಗಳಿಕೆಯನ್ನು ಮಾಡಿದೆ. ಇದರ ಮುಂದುವರೆದ ಭಾಗವೇ ಈ ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’.

2019–20 ರ ಕೇಂದ್ರ ಬಜೆಟ್ ನಲ್ಲಿ ಪ್ರಸ್ತಾಪ

2019–20 ರ ಕೇಂದ್ರ ಬಜೆಟ್ ನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಟ್ರ್ಯಾಕ್ ಗಳನ್ನು ಹಾಕುವುದು, ರೋಲಿಂಗ್ ಸ್ಟಾಕ್ ತಯಾರಿಕೆ, ಪ್ರಯಾಣಿಕರ ಸರಕು ಸೇವೆಗಳ ವಿತರಣೆ ಮತ್ತು ಇತರ ಮೂಲಸೌಕರ್ಯ ಅಭಿವೃದ್ಧಿ ಸೇರಿದಂತೆ, ರೈಲ್ವೆ ಯೋಜನೆಗಳ ತ್ವರಿತ ಅಭಿವೃದ್ಧಿ ಮತ್ತು ಪೂರ್ಣಗೊಳಿಸುವಿಕೆಗಾಗಿ ಪಿಪಿಪಿ ಬಳಕೆಯನ್ನು ಪ್ರಸ್ತಾಪಿಸಿದ್ದರು. ರೈಲ್ವೆಯು 2021ರಲ್ಲಿ ನಿಲ್ದಾಣದ ಪುನರಾಭಿವೃದ್ಧಿಯಲ್ಲಿ ಪಿಪಿಪಿ ಮಾದರಿಯನ್ನು ಪರಿಗಣಿಸಲು ಪ್ರಾರಂಭಿಸಿತು. ಆದರೆ ಪಿಪಿಪಿ ಮಾದರಿಯನ್ನು ಒಂದು ವರ್ಷ ಮುಂದೂಡಿತು ಮತ್ತು ಎಂಜಿನಿಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ (EPC) ಮೋಡ್ ಅಡಿಯಲ್ಲಿ ನಿಲ್ದಾಣಗಳನ್ನು ನೀಡಲು ನಿರ್ಧಾರವನ್ನು ತೆಗೆದುಕೊಳ್ಳಲಾಯಿತು. ಅಲ್ಲಿ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರವು ಭರಿಸುತ್ತದೆ ಮತ್ತು ಖಾಸಗಿ ವಲಯದ ಭಾಗವಹಿಸುವಿಕೆ ಕಡಿಮೆ ಮತ್ತು ಎಂಜಿನಿಯರಿಂಗ್ ಪರಿಣತಿಯನ್ನು ಒದಗಿಸುವುದಕ್ಕೆ ಸೀಮಿತವಾಗಿದೆ.

ಸನಾತನವಾದಿಗಳ ಪರಂಪರೆಯೊಂದಿಗೆ

ರೈಲ್ವೇ ನಿಲ್ದಾಣಗಳ ಪುನರಾಭಿವೃದ್ಧಿಪಡಿಸುವ ‘ಅಮೃತ್ ಭಾರತ್ ಸ್ಟೇಷನ್ ಯೋಜನೆ’ಯ ಗಮನಿಸಬೇಕಾದ ವಿಷಯವೆಂದರೆ, ಪುನರಾಭಿವೃದ್ಧಿ ಪ್ರಕ್ರಿಯೆಯು ಪ್ರಾರಂಭವಾಗುತ್ತಿದ್ದಂತೆ ಮೋದಿ ಸರ್ಕಾರವು ಭಾರತದ ಸನಾತನ ಪರಂಪರೆಯೊಂದಿಗೆ ತಳಹದಿಯನ್ನು ಸ್ಪರ್ಶಿಸಲು ನಿರ್ಧರಿಸಿದೆ. ಇದು ಮೂಲಸೌಕರ್ಯ ನವೀಕರಣಗಳನ್ನು ಮಾತ್ರವಲ್ಲದೆ ಭಾರತದ ಪರಂಪರೆಯೊಂದಿಗೆ ಮರುಸಂಪರ್ಕವನ್ನು ಸೂಚಿಸುತ್ತದೆ ಎಂದು ಮೋದಿ ಹೇಳುತ್ತಾರೆ. ಈ ಯೋಜನೆಯ ಹೆಸರಿನಲ್ಲೇ ಸಂಸ್ಕೃತ ಭಾಷೆ (ಅಮೃತ್) ಇದೆ. ಫೆಬ್ರವರಿ 26 ರ ಕಾರ್ಯಕ್ರಮದ ಫಲಕಗಳನ್ನು ಹಿಂದಿ, ಇಂಗ್ಲಿಷ್ ಮತ್ತು ಸ್ಥಳೀಯ ಭಾಷೆಗಳನ್ನು ಹೊರತುಪಡಿಸಿ ಸಂಸ್ಕೃತದಲ್ಲಿ ವಿನ್ಯಾಸಗೊಳಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಲು ಭಾರತೀಯ ರೈಲ್ವೆ ತನ್ನ ಎಲ್ಲಾ ವಲಯ ಸಾರ್ವಜನಿಕ ಸಂಪರ್ಕ ಕಚೇರಿಗಳಿಗೆ ಸಲಹೆ ನೀಡಿತ್ತು ಎಂದು News18.com ವರದಿ ಮಾಡಿವೆ.

ದೇವಾಲಯಗಳ ಶೈಲಿಯಲ್ಲಿ ಕಟ್ಟಡ ನಿರ್ಮಾಣ

ಒಡಿಶಾದ ಬಾಲೇಶ್ವರ ನಿಲ್ದಾಣದ ವಿನ್ಯಾಸವು ಭಗವಾನ್ ಜಗನ್ನಾಥ ದೇವಾಲಯದಿಂದ ಸ್ಫೂರ್ತಿ ಪಡೆದಿದ್ದರೆ, ಸಿಕ್ಕಿಂನ ರಂಗ್ಪುರ ನಿಲ್ದಾಣವು ಸ್ಥಳೀಯ ವಾಸ್ತುಶಿಲ್ಪವನ್ನು ಪ್ರತಿಬಿಂಬಿಸುತ್ತದೆ ಎಂದು ಪ್ರಧಾನಿ ಮೋದಿ ತಿಳಿಸಿದರು. ರಾಜಸ್ಥಾನದ ಸಾಂಗ್ನರ್ ನಿಲ್ದಾಣವು 16 ನೇ ಶತಮಾನದ ಹ್ಯಾಂಡ್–ಬ್ಲಾಕ್ ಮುದ್ರಣವನ್ನು ಪ್ರದರ್ಶಿಸುತ್ತದೆ, ತಮಿಳುನಾಡಿನ ಕುಂಭಕೋಣಂ ನಿಲ್ದಾಣವು ಚೋಳರ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ ಮತ್ತು ಅಹಮದಾಬಾದ್ ನಿಲ್ದಾಣವು ಮೊಧೇರಾ ಸೂರ್ಯ ಮಂದಿರದಿಂದ ಸ್ಫೂರ್ತಿ ಪಡೆಯುತ್ತದೆ. ದ್ವಾರಕಾ ನಿಲ್ದಾಣದ ವಿನ್ಯಾಸವು ದ್ವಾರಕಾಧೀಶ ದೇವಸ್ಥಾನದಿಂದ ಪ್ರಭಾವಿತವಾಗಿದೆ.

ಭಾರತದ ಪ್ರಾಚೀನ ಪರಂಪರೆಯೊಂದಿಗೆ ಮರುಸಂಪರ್ಕ ಪಡೆಯುವ ಹೆಸರಿನಲ್ಲಿ ರೈಲು ನಿಲ್ದಾಣಗಳನ್ನು ಮಂದಿರಗಳ ಶೈಲಿಯಲ್ಲಿ ನಿರ್ಮಾಣ ಮಾಡುವ ಮೂಲಕ ಸನಾತನ ಧರ್ಮವನ್ನು ಮತ್ತು ಸಂಸ್ಕೃತ ಭಾಷೆಯನ್ನು ಮುಂದೆ ತರುವ ಪ್ರಯತ್ನವೂ ಖಾಸಗೀಕರಣದ ಜೊತೆ ಜೊತೆಗೆ ನಡೆಯುತ್ತದೆ. “ಕಾರ್ಪೊರೇಟ್–ಹಿಂದುತ್ವವಾದಿ ಕೂಟ”ದ ಆಡಳಿತದಿಂದ ಇದಲ್ಲದೆ ಮತ್ತೇನನ್ನು ನಿರೀಕ್ಷಿಸಲಾದೀತು?

ಕಾರ್ಮಿಕ ಸಂಘಟನೆಗಳ ವಿರೋಧ

ಹೊಸ ತಂತ್ರಜ್ಞಾನವು ಸುರಕ್ಷತೆ ಮತ್ತು ಸೌಕರ್ಯವನ್ನು ಸುಧಾರಿಸಬಹುದು ಮತ್ತು ಖಾಸಗೀಕರಣವು ರೈಲ್ವೇಗಳನ್ನು ವಿಮಾನ ಪ್ರಯಾಣದ ಸೌಕರ್ಯಗಳೊಂದಿಗೆ ಸ್ಪರ್ಧಿಸುವಂತೆ ಮಾಡಬಹುದು. ಇಂತಹ ರೈಲುಗಳನ್ನು ಸಿರಿವಂತರು ಬಳಸಬಹುದೇ ವಿನಃ, ಸಾಮಾನ್ಯ ಪ್ರಯಾಣಿಕರ ಮೇಲೆ ಪರಿಣಾಮ ಬೀರುತ್ತದೆ. ರೈಲು ಪ್ರಯಾಣ ದರ ಏರಿಕೆಯಾಗುತ್ತದೆ. ವಿಶೇಷವಾಗಿ, ಇದು ಉದ್ಯೋಗಾವಕಾಶಗಳ ಮೇಲೆ ಪರಿಣಾಮ ಬೀರುತ್ತದೆ. ಈ ಕ್ರಮಕ್ಕೆ ವಿವಿಧ ಕಾರ್ಮಿಕ ಸಂಘಟನೆಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಸರ್ಕಾರದ ಖಾಸಗೀಕರಣ ನೀತಿಗಳ ವಿರುದ್ಧ ಹಲವು ಬಾರಿ ದೊಡ್ಡ ಮಟ್ಟದ ಹೋರಾಟಗಳನ್ನು ನಡೆಸುತ್ತಾ ಬಂದಿವೆ.

ಇಸ್ರೇಲಿ ಪಡೆಗಳ ಇನ್ನೊಂದು ಹತ್ಯಾಕಾಂಡ– ಪೊಲಿಟ್‌ಬ್ಯುರೊ ಖಂಡನೆ

ಗಾಜಾ ನಗರದಲ್ಲಿ ಇಸ್ರೇಲಿ ಪಡೆಗಳು ನಡೆಸಿದ ಗುಂಡಿನ ದಾಳಿಯಿಂದ 112 ಪ್ಯಾಲೆಸ್ಟೀನಿಯನ್ನರ ಹತ್ಯೆ ಮತ್ತು ಇನ್ನೂ ಅನೇಕರು ಗಾಯಗೊಂಡಿರುವುಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಆಘಾತ ಮತ್ತು ಖಂಡನೆಯನ್ನು ವ್ಯಕ್ತಪಡಿಸಿದೆ. ಸಹಾಯ ಸಾಮಗ್ರಿಗಳನ್ನು ಹಂಚಲು ಈ ಪ್ರದೇಶವನ್ನು ಪ್ರವೇಶಿಸಿದ ಟ್ರಕ್‌ಗಳಿಂದ ಆಹಾರವನ್ನು ಪಡೆಯಲು ಸೇರಿದ್ದ ಹಸಿವಿನಿಂದ ಬಳಲುತ್ತಿರುವ ಜನರ ಮೇಲೆ ಈ ಹತ್ಯಾಕಾಂಡವನ್ನು ನಡೆಸಲಾಗಿದೆ. ಗಾಜಾದ ಮೇಲೆ ಇಸ್ರೇಲ್ ನಡೆಸಿದ ನರಮೇಧದ ದಾಳಿಯು ಇಲ್ಲಿಯವರೆಗೆ 30,000 ಕ್ಕೂ ಹೆಚ್ಚು ಪ್ಯಾಲೆಸ್ಟೀನಿಯನ್ನರ ಸಾವಿಗೆ ಕಾರಣವಾಗಿದೆ.

ಇಂತಹ ಹತ್ಯಾಕಾಂಡಗಳು ನಡೆಯುತ್ತಿರುವಾಗ ಭಾರತ ಸರ್ಕಾರ ಬಾಯಿ ಬಿಡದಿರುವುದು ಅತ್ಯಂತ ವಿಷಾದನೀಯ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಾಜಾದ ಮೇಲೆ ನಡೆಯುತ್ತಿರುವ ಇಸ್ರೇಲಿ ಯುದ್ಧದ ಬಗ್ಗೆ ಅಮೇರಿಕಾದ ನಿಲುವನ್ನು ಅನುಸರಿಸುವುದನ್ನು ಮೋದಿ ಸರ್ಕಾರ ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ತಕ್ಷಣದ ಮತ್ತು ಶಾಶ್ವತ ಕದನ ವಿರಾಮ ನಡೆಯುವದನ್ನು ಖಾತ್ರಿಪಡಿಸಲು ದಕ್ಷಿಣ ಆಫ್ರಿಕಾ, ಬ್ರೆಜಿಲ್ ಮತ್ತು ಅರಬ್ ರಾಷ್ಟ್ರಗಳಂತಹ ಜಾಗತಿಕ ದಕ್ಷಿಣದ ದೇಶಗಳೊಂದಿಗೆ ಸರ್ಕಾರವು ತನ್ನ ಪ್ರಯತ್ನಗಳನ್ನು ತುರ್ತಾಗಿ ಸಂಯೋಜಿಸಬೇಕು ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

‘ನಿರುದ್ಯೋಗ ಸಮಸ್ಯೆಗೂ ಕೋಮುವಾದಕ್ಕೂ ಸಂಬಂಧವಿದೆ’.....

ಪುಟ 9 ರಿಂದ

ನೀಡಬೇಕೆಂಬ ಹೋರಾಟದಲ್ಲಿ ನಾವಿದ್ದೇವೆ. ನಾವು ಜನರ ಹೃದಯದಲ್ಲಿದ್ದೇವೆ. ನಾವು ಎಂದಿಗೂ ತಲೆತಗ್ಗಿಸುವವರಲ್ಲ. ನಾವು ಎತ್ತಿದ ತಲೆಯನ್ನು ನೀವು ಕತ್ತರಿಸಿದರೂ ಸರಿ, ನಾವೆಂದಿಗೂ ತಲೆ ತಗ್ಗಿಸಲ್ಲ,” ಎಂದು ಹೇಳಿದರು. ನಾವು ಆದರ್ಶ ವ್ಯಕ್ತಿಗಳ ಚಿತ್ರವನ್ನು ಪೋಸ್ಟರ್‌ನಲ್ಲಿ ಬಳಸಿದ್ದಕ್ಕೆ ವಿರೋಧ ಮಾಡಲಾಯಿತು. ಟಿಪ್ಪು ಸುಲ್ತಾನ್ ಚಿತ್ರ ಬಳಸಬಾರದು ಎಂದು ಪೊಲೀಸ್ ನೊಟೀಸ್ ನೀಡಲಾಯಿತು. ಆದರೆ ನಾವು ಅದಕ್ಕೆ ಪ್ರತಿಯಾಗಿ ಹೇಳಿಕೆಯನ್ನು ನೀಡಿದ್ದೇವೆ. ನೀವು ನಂಬುವ ಸಿದ್ಧಾಂತವನ್ನೇ ನಾವು ನಂಬಬೇಕು, ನೀವು ಇಷ್ಟಪಡುವವರನ್ನೇ ನಾವು ಇಷ್ಟಪಡಬೇಕು ಎಂಬುವುದು ಫ್ಯಾಸಿಸಂ ಎಂದರು. ಬಲಪಂಥೀಯರು ಅಪಪ್ರಚಾರದ ಕೆಲಸ ಮಾಡುತ್ತಲೆ ಇದ್ದಾರೆ. ಕೋಟಿ ಚೆನ್ನಯ್ಯರ ಫೋಟೊ ಬಳಸಿದ್ದಕ್ಕೆ ರಾಮ ಪ್ರತಿಷ್ಠಾಪನೆ ನಂತರ ಎಡಪಂಥೀಯರು ರಾಮ–ಲಕ್ಷ್ಮಣರನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಬಿಂಬಿಸಿ ನಮ್ಮ ವಿರುದ್ಧ ಅಪಪ್ರಚಾರ ಆರಂಭಿಸಿದರು. ನಾರಾಯಣ ಗುರು, ಕೋಟಿ ಚೆನ್ನಯ್ಯರ ಚಿತ್ರಗಳನ್ನು ಪೋಸ್ಟರ್‌ನಲ್ಲಿ ಬಳಸಿ ನಿಮ್ಮ ಧಾರ್ಮಿಕ ಭಾವನೆಗೆ ನಾವು ಧಕ್ಕೆ ತಂದಿದ್ದೇವೆ ಎಂದು ನೀವು ಹೇಳುತ್ತೀರಿ. ನಿಜವಾಗಿ ಈ ನೆಲದಲ್ಲಿ ಕೋಟಿ ಚೆನ್ನಯ್ಯರ ವಾರಸುದಾರರು, ಅವರ ಆದರ್ಶವನ್ನು ಪಾಲಿಸುವವರು ಇದ್ದರೆ ಅವರು ಡಿ.ವೈ.ಎಫ್.ಐ. ಸಂಘಟನೆಯವರು ಮಾತ್ರ ಎಂದರು.

ನಂತರ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ್ ಕಾರ್ಯದರ್ಶಿಗಳ ವರದಿ ಮಂಡಿಸಿದರು. ಪ್ರತಿನಿಧಿಗಳು ಲಿಖಿತ ಕರಡು ವರದಿ ಆಧಾರದಲ್ಲಿ ಯುವಜನರ ಸಮಸ್ಯೆಗಳು ಹಾಗೂ ನಾನಾ ಸಾಮಾಜಿಕ ವಿಷಯಗಳ ಕುರಿತು ಚರ್ಚೆ ನಡೆಸಿದರು. 28 ಜನ ಯುವತಿಯರು ಸೇರಿದಂತೆ ರಾಜ್ಯದ 23 ಜಿಲ್ಲೆಗಳಿಂದ ಬಂದ ಒಟ್ಟು 228 ಜನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಪಾಲ್ಗೊಂಡಿದ್ದರು. ಸಮ್ಮೇಳನವು ಒಟ್ಟಾರೆ ಹತ್ತು ಪ್ರಮುಖ ನಿರ್ಣಯಗಳನ್ನು ಕೈಗೊಂಡಿತು. ಕೊನೆಯಲ್ಲಿ ಸಮ್ಮೇಳನವು 39 ಜನರ ರಾಜ್ಯ ಸಮಿತಿಯನ್ನು ಚುನಾಯಿಸಿತು. ಮುಂದೆ ಈ ರಾಜ್ಯ ಸಮಿತಿಯು ಸಭೆ ಸೇರಿ ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಳ್ಳಲಿದೆ.

ಅಂಗಾಂಗ ದಾನಕ್ಕೆ ಮುಂದಾದ ಯುವ ಜನತೆ

ಅಂಗಾಂಗ ದಾನ ಮಾಡುವ ಮಹತ್ವದ ನಿರ್ಧಾರವನ್ನು ಡಿ.ವೈ.ಎಫ್.ಐ. 12 ನೇ ರಾಜ್ಯ ಸಮ್ಮೇಳನ ತೆಗೆದುಕೊಂಡಿದೆ. 12 ನೇ ರಾಜ್ಯ ಸಮ್ಮೇಳನದಲ್ಲಿ ಭಾಗಿಯಾಗಿದ್ದ ಡಿವೈಎಫ್‌ಐ ಕಾರ್ಯಕರ್ತರು, ಅಂಗಾಗ ದಾನ ಮಾಡುವ ಮಹತ್ವದ ಪ್ರತಿಜ್ಞೆಯನ್ನು ಗೈದಿದ್ದಾರೆ. ಆರೋಗ್ಯ ಇಲಾಖೆಯ ಅಧಿಕಾರಿಗಳು ಪ್ರತಿಜ್ಞಾವಿಧಿ ಬೋಧಿಸಿದರು.

ಅಂಗಾಗ ದಾನದ ಮಹತ್ವದ ನಿರ್ಧಾರದ ನಂತರ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ದೇಹದಲ್ಲಿನ ಯಾವುದೇ ಅಂಗದ ಅಸಮರ್ಪಕ ಕಾರ್ಯದಿಂದ ವ್ಯಕ್ತಿಯ ಜೀವಕ್ಕೆ ಅಪಾಯವಿದ್ದರೆ, ಆರೋಗ್ಯವಂತ ವ್ಯಕ್ತಿಯು ತನ್ನ ಮರಣದ ಬಳಿಕ ತನ್ನ ಅಂಗಗಳನ್ನು ದಾನ ಮಾಡುವ ಮೂಲಕ ಅವನ ಜೀವವನ್ನು ಉಳಿಸಬಹುದು ಎಂದರು.

ಸಮ್ಮೇಳನದಲ್ಲಿ ಭಾಗವಹಿಸಿದ್ದ ಬಹಳಷ್ಟು ಪ್ರತಿನಿಧಿಗಳು ಅಂಗಾಂಗ ದಾನಕ್ಕೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದಾರೆ. ಈ ಕಾರ್ಯವನ್ನು ಇನ್ನಷ್ಟು ವಿಸ್ತರಿಸಲಾಗುವುದು ಎಂದು ಡಿ.ವೈ. ಎಫ್.ಐ. ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ತಿಳಿಸಿದರು.

ಪ್ರತಿನಿಧಿ ಸಂಗಾತಿಗಳು ಅಂಗಾಗದಾನ ಮಾಡುವ ಬಗ್ಗೆ ಸಾಮೂಹಿಕ ಪ್ರತಿಜ್ಞೆ



ಸಂಗಾತಿ ತಿರುನಾವಕ್ಕರಸು ಇನ್ನಿಲ್ಲ

ಬೆಂಗಳೂರಿನ ಮೈಕೋ ಕಾರ್ಖಾನೆಯಲ್ಲಿ (ಇಂದಿನ ಭಾಷ್ ಕಂಪನಿ) ಕಾರ್ಮಿಕರಾಗಿದ್ದ, ಕಾರ್ಮಿಕರ ಸಂಘಟನೆ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ್ದವರಲ್ಲಿ ಒಬ್ಬರಾದ, ಕಾಮ್ರೆಡ್ ಸೂರ್ಯನಾರಾಯಣರಾವ್ ಅವರ ನಿಷ್ಠಾವಂತ ಅನುಯಾಯಿ ತಿರುನಾವಕ್ಕರಸು ಫೆಬ್ರವರಿ 29 ರಂದು ಬೆಂಗಳೂರಿನಲ್ಲಿ ನಿಧರಾದರು. ಸಕ್ಕರೆ ಕಾಯಿಲೆಯಿಂದ ಬಳಲುತಿದ್ದ ಅರಸು, ಧೀರ್ಘ ಕಾಲದ ವರೆಗೆ ಕಿಡ್ನಿ ಸಮಸ್ಯೆಯಿಂದ ಬಳಲುತಿದ್ದರು. ಅವರು ಪತ್ನಿ, ಮೂವರು ಹೆಣ್ಣು ಮಕ್ಕಳು ಮತ್ತು ಕುಟುಂಬ ಸದಸ್ಯರನ್ನು ಅಗಲಿದ್ದಾರೆ.

ತಿರುನಾವಕ್ಕರಸು ಅವರು ನಮಗೆಲ್ಲಾ ಪರಿಚಯವಾದದ್ದು 76 ರಲ್ಲಿ. ಆಗಷ್ಟೇ ಕನ್ನಡದ 'ತಾಯಿ' ನಾಟಕವನ್ನು ಬೆಂಗಳೂರು ಸಮುದಾಯ ಪ್ರದರ್ಶನ ನೀಡಿತ್ತು. ಅರಸು ಮೈಕೋ ಕಾರ್ಮಿಕರಾಗಿ, ಕನಿಷ್ಠ ಹತ್ತು ಬಾರಿಯಾದರೂ ಪ್ರದರ್ಶನವನ್ನು ಕಲಾಕ್ಷೇತ್ರದಲ್ಲಿ ನೋಡಿರಬಹುದು. ಅದರಿಂದ ಪ್ರೇರೇಪಣೆಗೊಂಡು, ಮೈಕೋ ಕಾರ್ಖಾನೆಯ ಕಾರ್ಮಿಕ ನಾಯಕರಾದ ಕಾಂ.ಸೂರಿ ಅವರ ನಿಷ್ಠಾವಂತ ಅನುಯಾಯಿಯಾದರು. ಸಿಐಟಿಯು ಸಂಘಟನೆ ಹಾಗೂ ಸಿಪಿಎಂ ಪಕ್ಷದ ಸದಸ್ಯರೂ ಆದರು.

ಒಂದು ದಿನ 'ಕನ್ನಡದ ತಾಯಿ ನಾಟಕವನ್ನು ತಮಿಳಿನಲ್ಲಿ ಪ್ರಯೋಗ ಮಾಡಬೇಕೆಂಬ ಹಂಬಲವನ್ನು ರಂಗಕರ್ಮಿ ಪ್ರಸನ್ನ ಅವರ ಬಳಿ ವ್ಯಕ್ತಪಡಿಸಿದರು. ಅದಕ್ಕೆ ಪೂರ್ವ ಸಿದ್ದತೆಗಾಗಿ ಅವರು ತಾಯಿ ನಾಟಕದ ಕೆಲವು ದೃಶ್ಯಗಳನ್ನು ತಾವೇ ಸ್ವತಃ ತಮಿಳು ಭಾಷೆಗೆ ತರ್ಜುಮೆ ಮಾಡಿ ಪ್ರಸನ್ನ ಅವರ ಮುಂದಿಟ್ಟರು. ಅರಸು ಅವರ ಉತ್ಸಾಹ ನೋಡಿ, ಸ್ವಲ್ಪ ತಿಂಗಳ ನಂತರ ಪ್ರಸನ್ನ ಅವರು ಅದಕ್ಕೆ ಸಮ್ಮತಿಸಿದರು. ಈ ಹೊತ್ತಿಗಾಗಲೇ ಅವರು ಅಂದಿನ ಬೆಂಗಳೂರು ಸಮುದಾಯದ ನಟರುಗಳಾದ, ತಮಿಳು ಭಾಷೆಯಲ್ಲಿನ ತಾಯಿ ನಾಟಕದ ಮುಖಾಂತರ ರಂಗಭೂಮಿಗೆ ಪಾದಾರ್ಪಣೆ ಮಾಡಿದ ಡಿ.ಗಾಂಧಿ (ಕಿಲಿಕ್ಸ್ ನಿಕ್ಸನ್ ಉದ್ಯೋಗಿ), ಸದಾಶಿವಂ(ಐಟಿಐ ಕಾರ್ಖಾನೆ ಉದ್ಯೋಗಿ), ರಾಜನ್/ರಾಜೇಂದ್ರ (ಬ್ಯಾಂಕ್ ಆಫ್ ಟ್ರಾವಂಕೂರು ಉದ್ಯೋಗಿ), ಕಾರ್ಲೋಸ್ (ಬೆಂಗಳೂರು ವಿಶ್ವವಿದ್ಯಾಲಯದ ತಮಿಳು ಭಾಷೆಯ ಪ್ರೊಫೆಸರ್) ಮತ್ತು ಲಕ್ಷ್ಮಿ (ಅರೆ ವೃತ್ತಿ ಕಂಪನಿಯ ಬೆಂಗಳೂರು ನಟಿ) ಜೊತೆಗೆ ಇನ್ನಷ್ಟು ಬೆಂಗಳೂರು ತಮಿಳು ಸಂಘದ ಕಾರ್ಯಕರ್ತರು ಮುಂತಾದವರನ್ನು ತಮಿಳು ಭಾಷೆಯ ತಾಯಿ ನಾಟಕದಲ್ಲಿ ಅಭಿನಯಿಸಲು ಕರೆತಂದರು.



ಅವರು ಅನುವಾದಿಸಿದ್ದ ತಮಿಳು ಭಾಷೆಯ ನಾಟಕವನ್ನು ಕಾರ್ಲೋಸ್ ಮತ್ತು ಸದಾಶಿವಂ ಅವರು ಸಾಕಷ್ಟು ಪರಿಷ್ಕರಣೆ ಮಾಡಿ, ಪ್ರಯೋಗಕ್ಕೆ ಒಳಪಡಿಸುವಂತಹ ಒಂದು ಹಸ್ತಪ್ರತಿಯನ್ನು ಸಿದ್ದಪಡಿಸಿದರು. ಲಕ್ಷ್ಮಿ ಅವರು ಅಪಘಾತದಿಂದ ಗಾಯಗೊಂಡ ಕಾರಣ ತಾಯಿ ಪಾತ್ರದಲ್ಲಿ ಆರ್.ಟಿ. ರಮಾ ಅಭಿನಯಿಸಿದರು.

ತಮಿಳು ಭಾಷೆಯ ಈ ನಾಟಕದ ಪ್ರಯೋಗದ ಯಶಸ್ಸು, ಮೂಲ ರುವಾರಿಯಾದ ಅರಸು ಅವರಿಗೆ ಸಲ್ಲಬೇಕು. ಈ ನಾಟಕದ ಜೊತೆಗೆ ಬೆಳೆದ ಅರಸು ಅವರು, ಸ್ಟಗಲ್ ಮುಂತಾದ ನಾಟಕಗಳಲ್ಲೂ ಅಭಿನಯಿಸಿದರು. ಗಾಂಧಿ ಕತ್ತಲೆ ದಾರಿ ದೂರ, ಗೆಲಿಲಿಯೋ ನಾಟಕಗಳಲ್ಲಿ ಅಭಿನಯಿಸಿ, ಸಮುದಾಯಕ್ಕೆ ಅತಿ ಅವಶ್ಯ ನಟ, ಪೋಸ್ಟರ್ ಗಳನ್ನು ವಿನ್ಯಾಸಗೊಳಿಸುವ ಕಲಾವಿದ ಮತ್ತು ಅತಿ ಅವಶ್ಯ ಕಾರ್ಯಕರ್ತರಾಗಿ ಸಮುದಾಯಕ್ಕೆ ಆತ್ಮೀಯರಾದರು.

ಮುಂದೆ, ಮೈಕೋ ಹೋರಾಟಗಳು ತೀವ್ರಗೊಂಡಾಗ, ಸೂರಿ ಮತ್ತು ಅವರ ಸಂಘದ ಕಾರ್ಯಕರ್ತರುಗಳ ಮೇಲೆ ಕಾಂಗ್ರೆಸ್ ಪಕ್ಷದ ಗೂಂಡಾ ಪಡೆ ಹಲ್ಲೆ ಮಾಡಿದಾಗ ಅರಸು ಅವರು ಹೊಡೆತಗಳನ್ನು ತಿಂದರು. ಮೈಕೋ ಎಂಪ್ಲಾಯಿಸ್ ಯೂನಿಯನ್ (ಎಮ್.ಇ.ಎ.) ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದರು. ಪೋಲಿಸ್ ಠಾಣೆ, ಕೋರ್ಟು ಗಳು ಪ್ರತಿದಿನವೂ ಹೋಗಿ ಬರುವ ತಾಣಗಳಾದವು. ಅಕ್ಕಿಪೇಟೆಯಲ್ಲಿ ವಾಸ ಮಾಡುತ್ತಿದ್ದ ಅರಸು ನೋಡಲಿಕ್ಕೆ ಕುಳ್ಳರಾಗಿದ್ದರೂ ವ್ಯಕ್ತಿತ್ವದಲ್ಲಿ ಬಹಳ ಎತ್ತರದ ಸಂಗಾತಿ. ಅವರ ಹತ್ತಿರ ಯಾವುದೂ ಅಸಾಧ್ಯವಲ್ಲ ಎನ್ನುವಷ್ಟು ಚುರುಕು ವ್ಯಕ್ತಿ. ಎಲ್ಲವನ್ನೂ ತಮ್ಮ ಹೆಗಲ ಮೇಲೆ ಹೊತ್ತುಕೊಂಡು ಕಾರ್ಯನಿರ್ವಹಿಸುತ್ತಿದ್ದ ಸಂಗಾತಿ. ಮೈಕೋ ಕಾರ್ಖಾನೆಯಲ್ಲೂ ಸಹ ಮೈಕೊ ಚಂದ್ರು, ಕೃಷ್ಣಮೂರ್ತಿ (ಮಹಿಶಾಸುರ) ಇವರೆಲ್ಲ ಸೂರಿ ಅವರ ಹಾಗೂ ಸಿಐಟಿಯು ವಿನ ನಿಷ್ಠಾವಂತ ಸಂಗಾತಿಗಳಾಗಲು ಅರಸು ಅವರ ಪ್ರಭಾವವೇ ಬಹಳ ಮುಖ್ಯ.

ಒಂದು ಕಾಲಕ್ಕೆ ಬೆಂಗಳೂರಿನ ಕಾರ್ಮಿಕ ವರ್ಗಕ್ಕೆ ಬಹಳ ಪ್ರೀತಿಯ ಕಾರ್ಮಿಕ ಸಂಘಟನೆಯಾದ ಎಮ್.ಇ.ಎ. ಅಷ್ಟು ಪ್ರಮುಖವಾಗಿ ಬೆಳೆಯಲು ಅರಸು ಅವರಂತಹ ನಾಯಕರು ಕಾರ್ಖಾನೆ ಒಳಗೆ ವಹಿಸಿದ ಪಾತ್ರ ಬಹಳ ದೊಡ್ಡದು. ರೈತರ ಜಾತಾದಲ್ಲಿ ಮೈಕೋ ಕಾರ್ಮಿಕರು ಜಾತಾದಲ್ಲಿನ ರೈತರಿಗೆ ಕೊಟ್ಟ ರೊಟ್ಟಿಗಳು ಎಣಿಕೆ ಇಡಲು ಸಾಧ್ಯವಿಲ್ಲದ್ದು.

ತಮಿಳು ಮಿಶ್ರಿತ ಕನ್ನಡದಲ್ಲಿ ಮಾತಾನಾಡುತ್ತಿದ್ದ, ಸದಾಕಾಲವೂ ಹೊರಲಾಗದ ಭಾರದ ಹೆಗಲು ಚೀಲದೊಂದಿಗೆ ಪ್ರತ್ಯಕ್ಷನಾಗುತ್ತಿದ್ದ, ಆದರೆ ಚಿನಕುರಳಿ ತರಹ ತಟಪಟಗುಟ್ಟುತ್ತಿದ್ದ, ರಂಗಭೂಮಿ, ಸಮುದಾಯ ಮತ್ತು ಮೈಕೋ ಕಾರ್ಮಿಕರಿಗೆ ಮಾದರಿ ನಾಯಕರಾಗಿದ್ದ ಅರಸು ಅವರಿಗೆ ಕೆಂಪು ವಂದನೆಗಳು ಹಾಗೂ ಭಾವಪೂರ್ಣ ಶ್ರದ್ಧಾಂಜಲಿಗಳು.

ಅರಸುರವರು ಹಲವು ವರ್ಷಗಳು ಗಾಂಧಿನಗರದ ಶೋಭಾ ಲಾಡ್ಜ್ ಕಾಂಪ್ಲೆಕ್ಸ್ ನಲ್ಲಿದ್ದ ಕ್ರಿಯಾ ಪ್ರಕಾಶನದ ಪುಸ್ತಕದ ಮಳಿಗೆಯ ಜವಾಬ್ದಾರಿ ವಹಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಿದರು ಎನ್ನುವುದು ಕೂಡ ನೆನಪಿಸಿಕೊಳ್ಳಬೇಕು.

–ಗುಂಡಣ್ಣ ಚಿಕ್ಕಮಗಳೂರು (ಸಮುದಾಯ)



ಬೃಹತ್ ಕಾಲ್ನಡಿಗೆ ಯಾತ್ರೆ.....

ಪುಟ 13 ರಿಂದ

ಕಾಮಗಾರಿಯ ನಿಲ್ಲಿಸಲು ತನಿಖೆ ಮಾಡಿ ಕ್ರಮ ಕೈಗೊಳ್ಳಲು ಆಗ್ರಹಿಸಲಾಗಿದೆ. ಕೆಪಿಆರ್ ಎಸ್ ಜಿಲ್ಲಾ ಅಧ್ಯಕ್ಷರು ಮಾನ್ಯ ಶಾಸಕರಾದ ಆರ್ ವಿ ದೇಶಪಾಂಡೆ ಯವರನ್ನು ಫೋನಿನಲ್ಲಿ ಸಂಪರ್ಕಿಸಿದಾಗ ತಾನು ಕ್ಷೇತ್ರಕ್ಕೆ ಬಂದ ಮೇಲೆ ಸಂಘಟಕರ ಜೊತೆಗೆ ಮಾತಾಡುವುದಾಗಿ ಹೇಳಿದ ಖಚಿತ ಮಾಹಿತಿ ದೊರೆತಮೇಲೆ ಮತ್ತು ತಹಸಿಲ್ದಾರರು ಜಿಲ್ಲಾಡಳಿತ ಸಂಪರ್ಕಿಸಿ, ರೈತರ ಸಭೆ ಕರೆದು ಲಿಖಿತ ಪತ್ರ ನೀಡಿದ ನಂತರ ತಾತ್ಕಾಲಿಕವಾಗಿ ಹೋರಾಟ ಮುಂದೂಡಲಾಗಿದೆ ಎಂದು, ಕೆಡಿಪಿ ಸಭೆಯಲ್ಲಿ ಈ ಬೇಡಿಕೆಗಳ ಚರ್ಚಿಸಬೇಕೆಂದು, ಬೇಡಿಕೆ ಈಡೇರದಿದ್ದಲ್ಲಿ ವಾರದಲ್ಲಿ ಪುನಃ ಶಾಸಕರು ಹಾಗೂ ತಹಸಿಲ್ದಾರರ ಎದುರು ಬರುವುದಾಗಿ, ರೈತ ಸಂಘದ ರಾಜ್ಯ ಹಾಗೂ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು, ಮಾನ್ಯ ಉಸ್ತುವಾರಿ ಸಚಿವರನ್ನು, ಮಾನ್ಯ ಮುಖ್ಯಮಂತ್ರಿಗಳು ಮತ್ತು ಅರಣ್ಯ ಮಂತ್ರಿಗಳನ್ನು ಭೇಟಿಯಾಗಿ ಸಮಸ್ಯೆ ಪರಿಹರಿಸಲು ಒತ್ತಾಯಿಸುತ್ತೇವೆಂದು ತಾಲೂಕು ಸಮಿತಿ ಪ್ರೇಮಾನಂದ ವೆಳಿಪ್, ಕಾರ್ಯದರ್ಶಿ ರಾಜೇಶ್ ಗಾವಡಾ ತಿಳಿಸಿದರು. ಆ ರಾತ್ರಿಯೂ ಸ್ಪೂರ್ತಿದಾಯಕ ಘೋಷಣೆಗಳೊಂದಿಗೆ ಹೋರಾಟದ ಕಾವು ತಮ್ಮೂರಿಗೆ ಹೊತ್ತೊಯ್ದರು.

ಒಟ್ಟಿನಲ್ಲಿ, ಇಷ್ಟರಲ್ಲೇ ಉನ್ನತ ಹಂತದ ಅಧಿಕಾರಿಗಳ ಸಭೆ ಆಗಬಹುದು. ಮುಂದಿನ ಹೋರಾಟಕ್ಕೆ ಇನ್ನಷ್ಟು ಜನರ ಸೇರಿಸುವ ದೃಢ ನಿರ್ಧಾರದೊಂದಿಗೆ ಎಂಟುವರೆ ಗಂಟೆ ರಾತ್ರಿಗೆ ಅಧಿಕೃತವಾಗಿ ಹೋರಾಟದ ಸ್ಥಳದಿಂದ ನಿರ್ಗಮಿಸಲಾಯಿತು.

ಕರ್ನಾಟಕ ಪ್ರಾಂತ ರೈತ ಸಂಘದ ಜೋಯಿಡಾ ತಾಲೂಕು ಸಮಿತಿ ವ್ಯವಸ್ಥಿತವಾಗಿ ಸಂಘಟಿಸಿದ ಈ ಹೋರಾಟಕ್ಕೆ ಕಾರ್ಮಿಕ ಸಂಘಟನೆ ಸಿಐಟಿಯು, ಯುವಜನ ಸಂಘಟನೆ ಡಿವೈಎಫ್ ಐ, ವಿದ್ಯಾರ್ಥಿ ಸಂಘಟನೆ ಎಸ್.ಎಫ್.ಐ, ಅಂಗನವಾಡಿ ನೌಕರರ ಸಂಘಟನೆ ಹಾಜರಿದ್ದು ಬೆಂಬಲಿಸಿ ಸಹಕರಿಸಿದರು. ಡಿಗ್ಗಿಯಲ್ಲಿ ಹೂ ಪಕಳೆಗಳ ಸೋಕಿ ಬೀಳ್ಕೊಟ್ಟರು, ಸಿಸ್ಯೆ ಯಲ್ಲಿ ಆತಿಥ್ಯ ನೀಡಿದರು. ವಾಗೇಲಿಯಲ್ಲಿ ಹೋರಾಟದ ದಾರಿಯುದ್ದಕ್ಕು ವಿಶೇಷ ಘೋಷಣೆ ನೀಡಿ ಹುರಿದುಂಬಿಸಿದರು. ಕಿರವತ್ತಿ ಕಾಡಿನಲ್ಲಿ ವಸತಿ ಹೂಡಿದಾಗ ಚಹಾ, ಅವಲಕ್ಕಿ, ಚುರಮುರಿ ನೀಡಿದರು. ಕಸಂಬಾದಲ್ಲಿ ಪಂಚಾಯತ್ ಪ್ರತಿನಿಧಿಗಳು ಬಾಯಾರಿಕೆಗೆ ಆಸರಿಕೆ ನೀಡಿದರು. ಕಿರವತ್ತಿಯಲ್ಲಿ ತಮ್ಮ ಮನೆಯಿಂದಲೇ ಕರೆಂಟ್ ಇತ್ಯಾದಿ ವ್ಯವಸ್ಥೆ ಮಾಡಿಕೊಟ್ಟರು. ದಾಂಡೇಲಿಯ ಸಂಗಾತಿಗಳು ಸಹಿ ನೀಡಿದರು. ಊರಿನ ಕೆಲವರು ಬಂದು ನಮ್ಮೊಡನೆ ಬೆಳಗು ಮಾಡಿದರು. ತಾವು ತಂಗಿದ್ದಲ್ಲಿ ಒಂದಿನಿತೂ ಕಸ ಇರದಂತೆ ಸ್ವಚ್ಛವಾಗಿಸಿ ಮುನ್ನಡೆಯುತ್ತಿದ್ದರು. 2002 ರ ಪಾದಯಾತ್ರೆಯಲ್ಲಿ ಭಾಗಿಗಳಾಗಿದ್ದ ಸುಮಾರು ನಲವತ್ತು ಜನರು ಈ ಬಾರಿಯೂ ಹಳೆಯ ನೆನಪುಗಳೊಂದಿಗೆ ಮುಂಚೂಣಿಯಲ್ಲಿದ್ದು ಹೆಜ್ಜೆ ಹಾಕಿದರು. ಇಡೀ ಪಾದಯಾತ್ರೆ ಆಪ್ತವಾಗಿ ಒಂದೇ ಧ್ವನಿಯಿಂದ ಗಟ್ಟಿಹೆಜ್ಜೆ ಇಟ್ಟು ಸಾಗಿತು. ಈ ಪ್ರಕ್ರಿಯೆಯಲ್ಲಿ ತಯಾರಿ ಸಭೆಗಳು, ಉದ್ಘಾಟನಾ ಸಭೆ ಹಾಗೂ ದಾರಿಯುದ್ದಕ್ಕೂ ಊಟೋಪಹಾರ, ನೀರು, ಸಕ್ಕರೆ, ಅರಕ ಚಹಾ, ಭಾಕ್ರಿ, ಬಾಜೀ ನೀಡಿ ವಿವಿಧ ಆತಿಥ್ಯ ನೀಡಿ ಉಪಚರಿಸಿದ ಪ್ರಕ್ರಿಯೆಯಲ್ಲಿ ಸಾವಿರಾರು ಜನ ಒಳಗೊಂಡಿದ್ದರು.

ಕಳೆದ ಹಲವಾರು ಹೋರಾಟಗಳು ನಡೆದರೂ ಕಣ್ಣೆತ್ತಿ ನೋಡದ ಸರ್ಕಾರಗಳ ಧೋರಣೆ ಬಗ್ಗೆ ಆಕ್ರೋಶವಿತ್ತು. ಕೆಲವರು ಮಕ್ಕಳನ್ನು ಹೊತ್ತು ಸಾಗಿ ಬಂದರು. ಅಂಗವೈಕಲ್ಯ ಇದ್ದರೂ ಮುದುಕರಾದರೂ ಮಹಿಳೆಯರಿದ್ದರೂ ನಡೆದೇ ನಡೆದರು. ಈ ಭಾಗವನ್ನು ನಿರ್ಲಕ್ಷಿಸಿ ಮಾನವ ಹಕ್ಕುಗಳ ಉಲ್ಲಂಘಿಸುತ್ತಿರುವವರ ಮೇಲೆ ಕಠಿಣ ಶಬ್ದಗಳಲ್ಲಿ ಟೀಕೆಯ ಸುರಿಮಳೆ ಗೈದರು.

ಡಿಗ್ಗಿ ಊರಿನಲ್ಲಿ ಜನಾನುರಾಗಿ ವೈದ್ಯರಾದ ಡಾ. ಲೋಬೊ ಅವರ ತಂಡ, ಸಿಪಿಐ ಚಂದ್ರಶೇಖರ ಹರಿಹರ ಅವರ ಮಾರ್ಗದರ್ಶನದಲ್ಲಿ ಪೋಲಿಸ್ ತಂಡ, ಪತ್ರಿಕಾಕರ್ತರು ಮತ್ತು ಸ್ಥಳೀಯ ಆನ್ಲೈನ್ ಮಾಧ್ಯಮದವರು ಜೊತೆಗಿದ್ದು ಸಹಕಾರ ನೀಡಿದರು. ಇನ್ನೇನಿದ್ದರು ಸರ್ಕಾರ ಈ ಜನರನ್ನು ಈ ಗಡಿಬಾಗವನ್ನು ಹೇಗೆ ನಡೆಸಿಕೊಳ್ಳುತ್ತದೆ ಎಂಬುದರ ಆಧಾರದಲ್ಲಿ ಮುಂದಿನ ನಡೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE March 4-10, 2024 Price: Rs. 10/- Date of Publication: 1 March 2024 RNI No. KARKAN /2006/17926 Posted on 06-03-2024
Posted at BG PSO, BG - 560026 **Posted at Periodical Rate -** Rs. 2

ಸುಳ್ಳುಗಳ ಮುಖವಾಡ ಕಳಚಲು ಸಾಕ್ಷ್ಯಾಧಾರಗಳನ್ನು ಒದಗಿಸುವ ಪುಸ್ತಕ 'ವಿ.ಡಿ.ಸಾವರ್ಕರ್ ಏಳು ಮಿಥ್ಯೆಗಳು'


ಇತ್ತೀಚಿನ ವರ್ಷಗಳಲ್ಲಿ ಸಾವರ್ಕರ್ ಕುರಿತ ಚರ್ಚೆಗಳು ಎಲ್ಲೆಡೆ ನಡೆಯುತ್ತಿವೆ. ಈ ಚರ್ಚೆಗಳಲ್ಲಿ ಕೇಳಿಬರುತ್ತಿರುವ ಪ್ರಮುಖ ಅಂಶಗಳೆಂದರೆ. ಸಾವರ್ಕರ್ ನಿಜವಾಗಲೂ ಸ್ವಾತಂತ್ರ ಹೋರಾಟದಲ್ಲಿ ಭಾಗವಹಿಸಿದ್ದರಾ, ಅವರು ಅಂಡಮಾನ್ ಜೈಲಿನಲ್ಲಿ ಒಂದರ ಮೇಲೊಂದರಂತೆ 5 ಕ್ಷಮಾಪಣಾ ಪತ್ರಗಳನ್ನು ಯಾಕೆ ಬರೆದುಕೊಟ್ಟರು, ಅದರ ಹಿಂದಿರುವ ಉದ್ದೇಶವೇನಾಗಿತ್ತು, ಹಿಂದುತ್ವವಾದಿಗಳು ಆತನನ್ನು ಆರಾಧಿಸಲು ಕಾರಣಗಳೇನು, ಅವನು ಕ್ರಾಂತಿಕಾರಿಯೋ, ಹೇಡಿಯೋ, ಸಾವರ್ಕರ್ ನಿಜವಾಗಲೂ ಒಬ್ಬ ವಿಚಾರವಾದಿಯೇ, ರಾಷ್ಟ್ರಪಿತ ಮಹಾತ್ಮ ಗಾಂಧಿ ಹತ್ಯೆಗೂ ಸಾವರ್ಕರ್ ಗೂ ಏನು ಸಂಬಂಧ. ಹೀಗೆ ಹತ್ತು ಹಲವು ಪ್ರಶ್ನೆಗಳು, ಚರ್ಚೆಗಳು, ವಾದಗಳು ಈಗಲೂ ನಡೆಯುತ್ತಿವೆ.

ಆದರೆ ಈ ಎಲ್ಲಾ ಚರ್ಚೆಗಳನ್ನು ಕೇಳಿದಾಗ ಯಾರೂ ಅತ್ಯಂತ ನಿಖರವಾಗಿ, ಆಧಾರಗಳ ಸಹಿತ, ಈ ಪ್ರಶ್ನೆಗಳಿಗೆ ಉತ್ತರ ನೀಡಿದ್ದು ಕಡಿಮೆಯೇ ಎಂದು ಹೇಳಬೇಕು. ದೇಶವನ್ನು ಕಾಡುತ್ತಿರುವ ಇಂತಹ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ತಮ್ಮ Savarkar Unmasked ಎಂಬ ಸಂಶೋಧನಾ ಕೃತಿಯಲ್ಲಿ ದೆಹಲಿ ವಿಶ್ವ ವಿದ್ಯಾಲಯದ ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಶಂಸುಲ್ ಇಸ್ಲಾಂ ನೀಡಿದ್ದಾರೆ. ಪ್ರತಿಯೊಂದು ವಾಕ್ಯಕ್ಕೂ ಸಾಕ್ಷ್ಯಾಧಾರಗಳನ್ನು ಒದಗಿಸುವುದು ಮಾತ್ರವಲ್ಲಾ, ಸ್ವತಃ ಸಾವರ್ಕರ್ ಬರೆದ ಪತ್ರಗಳು, ಬರಹಗಳು, ಅವರೇ ಕಟ್ಟಿ ಬೆಳೆಸಿದ ಹಿಂದೂ ಮಹಾಸಭಾದ ದಾಖಲೆಗಳನ್ನು ಉಲ್ಲೇಖಿಸಿ ಹಾಗೂ ಸಾವರ್ಕರ್ ಕುರಿತು ಬರೆದ ಬರಹಗಳನ್ನೇ ವಿಶ್ಲೇಷಿಸಿ, ಸಾವರ್ಕರ್ ಸೇರಿದಂತೆ ಅವರ ಹಿಂಬಾಲಕರು ಹೇಗೆ ಹಸಿಹಸಿ ಸುಳ್ಳುಗಳನ್ನು ದೇಶದ ತುಂಬಾ ಹರಡುತ್ತಿದ್ದಾರೆ ಎಂಬುದನ್ನು ಬಯಲು ಮಾಡಿದ್ದಾರೆ.

ಪುಸ್ತಕವು ಪ್ರಾರಂಭದಿಂದ ಕೊನೆಯವರೆಗೂ ಒಂದೇ ಓಟದಲ್ಲಿ ಓದಿಸಿಕೊಂಡಿತು. ಓದುವ ಮಧ್ಯದಲ್ಲಿ ಮತ್ತು ಓದಿದ ನಂತರ ನನಗೆ ಅನಿಸಿದ ನಾಲ್ಕು ಮಾತುಗಳಿವು.

ಸಾವರ್ಕರ್ ಅಂಡಮಾನ್ ಜೈಲಿಗೆ ಪ್ರವೇಶ ಪಡೆಯುವ ಮುನ್ನ ಸ್ವಾತಂತ್ರಕ್ಕಾಗಿ ಚಳುವಳಿ ಮಾಡಬೇಕು ಅಂದುಕೊಂಡಿದ್ದು ನಿಜ. ಆ ಕುರಿತು ಅವರೇ ಬರೆದ The Indian War of Independence, 1857 ಪುಸ್ತಕದಲ್ಲಿ ಅವರ ವಿಚಾರಗಳನ್ನು ಓದಬೇಕು. ಆದರೆ ಅಂಡಮಾನಿಗೆ ಹೋಗಿ ಅಲ್ಲಿ ಕರಾಳ ಕರಿನೀರಿನ ಶಿಕ್ಷೆಯನ್ನು ಅನುಭವಿಸಲು ಶುರುವಾದ ಮೇಲೆ ಅವನ ಆಲೋಚನೆಗಳೆಲ್ಲಾ ಬದಲಾಗುತ್ತವೆ.

ಜೈಲಿನಲ್ಲಿ ಎಲ್ಲಾ ಸ್ವಾತಂತ್ರ್ಯ ಹೋರಾಟಗಾರರಿಗೂ ನೀಡುತ್ತಿದ್ದ ರೀತಿಯಲ್ಲಿಯೇ ಸಾವರ್ಕರ್ ಗೂ ಶಿಕ್ಷೆಯನ್ನು ನೀಡಲಾಗುತ್ತಿತ್ತು. ಆದರೆ ಅಲ್ಲಿದ್ದ ಬೇರಾವ ಸ್ವಾತಂತ್ರ್ಯ ಹೋರಾಟಗಾರರೂ ತಮ್ಮ ಶಿಕ್ಷೆಯ ಪ್ರಮಾಣವನ್ನು ಕಡಿಮೆ ಮಾಡಿ ಎಂದು ಕೇಳಲಿಲ್ಲ. ಮಾತ್ರವಲ್ಲ ಅಲ್ಲಿದ್ದ ಕ್ರಾಂತಿಕಾರಿಗಳು ನಾವು ಇಲ್ಲೇ ಸಾವನಪ್ಪಿದರೂ



ಪರವಾಗಿಲ್ಲ, ಬ್ರಿಟೀಷರಲ್ಲಿ ಕ್ಷಮೆ ಕೇಳುವುದಿಲ್ಲ ಎಂಬ ದೃಢ ನಿರ್ಧಾರದಿಂದ ಅವರು ಕೊಡುವ ಎಲ್ಲಾ ರೀತಿಯ ಕರಾಳ ಚಿತ್ರ ಹಿಂಸೆಗಳನ್ನು ದೇಶಕ್ಕಾಗಿ ಅನುಭವಿಸಿದರು.

ಆದರೆ ಸಾವರ್ಕರ್ ಈ ಹಿಂಸೆಯನ್ನು ತಡೆಯಲಾಗದೆ ಒಂದರ ಹಿಂದೊಂದರಂತೆ 5 ಕ್ಷಮಾಪಣಾ ಪತ್ರಗಳನ್ನು ಬರೆದುಕೊಟ್ಟದ್ದನ್ನು ನೋಡಿದರೆ ಇವ ಎಷ್ಟು ಪುಕ್ಕಲ, ಇವನಿಂದ ಇನ್ನೇನನ್ನು ನಿರೀಕ್ಷಿಸಲು ಸಾಧ್ಯ. ಅವ ಬರೆದಿರುವ ಪತ್ರಗಳ ಒಂದೊಂದು ಸಾಲುಗಳನ್ನು ಓದುತ್ತಿದ್ದರೆ ಇವ ಎಂತಹ ದೇಶದ್ರೋಹಿ ಎಂಬುದು ಗೊತ್ತಾಗುತ್ತದೆ. ಇವನನ್ನು ದೊಡ್ಡ ದೇಶಪ್ರೇಮಿ, ಸ್ವಾತಂತ್ರ್ಯ ಹೋರಾಟಗಾರ ಎಂದು ಸಂಸತ್ ಭವನದ ಸಭಾಂಗಣದಲ್ಲಿ ಗಾಂಧಿ ಫೋಟೋ ಎದುರಿಗೆ ಹಾಕಲಾಗಿದೆ. ಬಾರತಕ್ಕೆ ಇದಕ್ಕಿಂತ ದುರಂತ ಮತ್ತೊಂದಿದೆಯಾ?

ಅಂಡಮಾನ್ ಜೈಲಿನಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅಧಿಕಾರಿಗಳು ಮುಸ್ಲಿಮರಾಗಿದ್ದರು ಅನ್ನುವ ಕಾರಣದಿಂದಾಗಿ ಆತ ಇಡೀ ಮುಸ್ಲಿಂ ಸಮುದಾಯವನ್ನು ದ್ವೇಷಿಸುವ ಹಂತಕ್ಕೆ ಹೋಗಿದ್ದು ಗೋಚರಿಸುತ್ತದೆ. 50 ವರ್ಷಗಳ ಕಾಲ ಪಡೆಯಬೇಕಾಗಿದ್ದ ಶಿಕ್ಷೆಯನ್ನು ಕೇವಲ 10 ವರ್ಷಗಳಲ್ಲೇ ಮುಗಿಸಿ ವಾಪಸ್ ಬರಬೇಕಾದರೆ ಅಲ್ಲಿರುವ ಬ್ರಿಟೀಷ್ ಅಧಿಕಾರಿಗಳು ಮಾತ್ರವಲ್ಲದೆ, ಬ್ರಿಟೀಷರ ವಿಚಾರಗಳಿಗೆ ಹೇಗೆ ಹೊಂದಾಣಿಕೆ ಮಾಡಿಕೊಂಡು ಬದುಕುತ್ತಿದ್ದ ಎಂಬುದು ಗೊತ್ತಾಗುತ್ತದೆ. ಒಡೆದು ಆಳುವ ನೀತಿಯಲ್ಲಿ ಬ್ರಿಟೀಷರದ್ದು ಸಾವರ್ಕರ್ ದ್ದು ಒಂದೇ ಆಲೋಚನೆಯಾಗಿತ್ತು.

ಸಾವರ್ಕರ್ ಹುಟ್ಟು ಹಾಕಿದ ಹಿಂದೂ ಮಹಾಸಭಾವು ಸ್ವಾತಂತ್ರ್ಯ ಚಳುವಳಿಯಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸ್ ರವರನ್ನು ವಿರೋಧಿಸುತ್ತದೆ ಮಾತ್ರವಲ್ಲ, ಬ್ರಿಟೀಷ್ ಸೈನ್ಯದಲ್ಲಿ ಹಿಂದು ಮಹಾಸಭಾದ ಕಾರ್ಯಕರ್ತರನ್ನು ದೊಡ್ಡಸಂಖ್ಯೆಯಲ್ಲಿ ಭರ್ತಿಮಾಡುತ್ತದೆ. ಬ್ರಿಟೀಷರ ಪರ ಕೆಲಸ ಮಾಡಿದ ಸಾವರ್ಕರ್ ದೇಶಪ್ರೇಮಿಯಾಗಲು ಹೇಗೆ ಸಾಧ್ಯ ಎಂಬ ಬಗ್ಗೆ ಎಲ್ಲರೂ ಪದೇ ಪದೇ ಚಿಂತಿಸಬೇಕಿದೆ ಮತ್ತು ಅದನ್ನು ಜನಮಾನಸಕ್ಕೆ ತಲುಪಿಸಬೇಕಿದೆ.



ಸಾವರ್ಕರ್ ಬರಹ ಮತ್ತು ಭಾಷಣಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಮುಸ್ಲಿಂ ವಿರೋಧಿ ಭಾಷೆ ಕಾಣುತ್ತದೆಯೇ ಹೊರತು, ಬ್ರಿಟೀಷ್ ವಿರೋಧಿ ಭಾಷೆ ಕಾಣಿಸುವುದಿಲ್ಲ.

ತ್ರಿವರ್ಣ ಧ್ವಜವನ್ನು ಒಪ್ಪದ ಸಾವರ್ಕರ್ ಭಗವಾಧ್ವಜವೇ ರಾಷ್ಟ್ರ ದ್ವಜವಾಗಬೇಕು, ನೇಪಾಳದ ರಾಜನೇ ನಮ್ಮೆಲ್ಲರ ಹಿಂದು ರಾಜನಾಗಬೇಕು ಎಂದು ಪ್ರತಿಪಾದಿಸಿದ್ದ. 1923 ರಲ್ಲಿ ರತ್ನಗಿರಿ ಜೈಲಿನಲ್ಲಿದ್ದಾಗಲೇ ಹಿಂದುತ್ವ ಎಂಬ ಪುಸ್ತಕವನ್ನು ಸಾವರ್ಕರ್ ಬರೆದು, ಅದನ್ನು ಜೈಲಿನಿಂದ ಹೊರತಂದು ಪ್ರಕಟಿಸಲಾಗಿದೆ. ಬ್ರಿಟೀಷರ ಸಹಕಾರವಿಲ್ಲದೆ ಈ ಕೆಲಸ ಸಾಧ್ಯವಿದೆಯೇ? ಮತ್ತು ಸಾವರ್ಕರ್ ಪ್ರತಿಪಾದಿಸುತ್ತಿದ್ದ ಹಿಂದುತ್ವದ ವಿಷಯ ಬ್ರಿಟೀಷರಿಗೂ ಸಹಕಾರಿಯಾಗಿದ್ದರಿಂದ ಆ ಪುಸ್ತಕ ಪ್ರಕಟವಾಗಲು ಸಾಧ್ಯವಾಯಿತು.

ಸಾವರ್ಕರ್ ಜಾತಿವಾದದ ಸಮರ್ಥಕ, ವರ್ಣಾಶ್ರಮ ಪದ್ಧತಿಯ ಪ್ರತಿಪಾದಕ ಮತ್ತು ಮನುಸ್ಮೃತಿಯನ್ನು ಪವಿತ್ರ ಎಂದು ಒಪ್ಪಿಕೊಂಡವನು ಎಂಬುದನ್ನು ಈ ಪುಸ್ತಕದಲ್ಲಿ ಎಳೆ ಎಳೆಯಾಗಿ ಬಿಡಿಸಿಡಲಾಗಿದೆ.

ಭಗತ್ ಸಿಂಗ್ ಮತ್ತು ಸಾವರ್ಕರ್ ನಡುವಿನ ಚಿಂತನೆಯಲ್ಲಿ ಎಂತಹ ಅಗಾಧವಾದ ವ್ಯತ್ಯಾಸವಿತ್ತು ಎಂಬುದರ ಕುರಿತು ಲೇಖಕರು ಇನ್ನೂ ಸ್ವಲ್ಪ ಒತ್ತುಕೊಡುವ ಅಗತ್ಯವಿತ್ತು. ಯಾಕೆಂದರೆ ಹಿಂದುತ್ವವಾದಿಗಳು ಇವರಿಬ್ಬರನ್ನು ಒಂದೇ ಕುರ್ಚಿಯಲ್ಲಿ ಕೂರಿಸಲು ಪ್ರಯತ್ನಿಸುತ್ತಿದ್ದಾರೆ. ಆದರೆ ವಾಸ್ತವದಲ್ಲಿ ಇವರಿಬ್ಬರು ಬಹುತೇಕ ಎಲ್ಲಾ ವಿಚಾರಗಳಲ್ಲೂ ತದ್ವಿರುದ್ಧವಾಗಿದ್ದರು. ಬ್ರಿಟೀಷರಿಗೆ ಸಿಂಹಸ್ವಪ್ನವಾಗಿ, ದೇಶಕ್ಕಾಗಿ ನಗುನಗುತ್ತಾ ನೇಣುಗಂಬಕ್ಕೆ ಕೊರಳೊಡ್ಡಿ ಪ್ರಾಣ ನೀಡಿದ ಹುತಾತ್ಮ ಭಗತ್ ಸಿಂಗ್ ಎಲ್ಲಿ! ಬ್ರಿಟೀಷರಿಗೆ ಶರಣಾಗಿ ಕ್ಷಮಾಪಣೆ ಪತ್ರ ಬರೆದುಕೊಟ್ಟು ಜೀವ ಉಳಿಸಿಕೊಂಡ ಹೇಡಿ ಸಾವರ್ಕರ್ ಎಲ್ಲಿ!

ಪ್ರತಿಯೊಂದನ್ನು ಪ್ರಶ್ನಿಸು, ಪ್ರಮಾಣಿಸದೇ ಏನನ್ನೂ ಒಪ್ಪಿಕೊಳ್ಳಬೇಡ ಎಂಬ ವಿಜ್ಞಾನದ ಮೂಲ ತತ್ವದಂತೆ ಈ ಪುಸ್ತಕ ಮೂಡಿ ಬಂದಿದೆ. ಇಲ್ಲಿ ಪ್ರತಿಯೊಂದಕ್ಕೂ ಸಾಕ್ಷ್ಯಾಧಾರಗಳಿವೆ, ಅವು ಬಾಯಿ ಮಾತಿನ ಆಧಾರಗಳಲ್ಲ, ಲಿಖಿತ ಧಾಖಲೆಗಳ ಆಧಾರಗಳು, ಇಲ್ಲಿ ಸುಳ್ಳಿಗೆ ಆಸ್ಪದವಿಲ್ಲ. ಏನಿದ್ದರೂ ಸುಳ್ಳನ್ನು ಬಯಲುಮಾಡಿ ಮುಖವಾಡವನ್ನು ಕಳಚುವ ಕೆಲಸ ಮಾತ್ರ ನಡೆದಿದೆ.

ಎಲ್ಲರೂ ಪುಸ್ತಕವನ್ನು ಓದಿ, ಸತ್ಯವನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿ. ಈ ಸತ್ಯವನ್ನೇ ಜನಮಾನಸಕ್ಕೆ ಮುಟ್ಟಿಸುವ ಕೆಲಸ ಮಾಡೋಣ... ಸುಳ್ಳನ್ನೇ ಪದೇ ಪದೇ ಹೇಳಿ ಸತ್ಯವಾಗಿಸುವ ಗೊಬೆಲ್ಸ್ ತಂತ್ರವನ್ನ ಸೋಲಿಸೋಣ...

–ಎಚ್.ಆರ್.ನವೀನ್ ಕುಮಾರ್, ಹಾಸನ

ತಡಗಳಲೆ ಸುರೇಂದ್ರ ರಾವ್ ಈ ಪುಸ್ತಕವನ್ನು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಕ್ರಿಯಾ ಮಾಧ್ಯಮ ಪ್ರಕಟಿಸಿದೆ. ಜನಶಕ್ತಿ ಕನ್ನಡ ವಾರಪತ್ರಿಕೆಯಲ್ಲಿ ಇದು ಧಾರವಾಹಿಯಾಗಿ ಪ್ರಕಟಿಸಲಾಗಿತ್ತು. ಪುಟಗಳು 163, ಮುಖ ಬೆಲೆ 180 ರೂ.

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**